ಐಕ್ಯರಂಗ



ಮೇ ದಿನ ವಿಶೇಷಾಂಕ—೧೯೮೭

ಕನ್ನಡದ ಮೊದಲ ಕ್ರಾಂತಿಕಾರಿ ಪತ್ರಿಕೆ

ಜನಶಕ್ತಿ

1947 ರ ಆರಂಭದ ದಿನಗಳು. ಎರಡನೆಯ ಮಹಾ ಯುದ್ಧದ ನಂತರ ದೇಶದೆಲ್ಲೆಡೆಯಲ್ಲಿ ರೈತರ, ಕಾರ್ಮಿಕರ ಉಕ್ಕೇರಿದ ಪ್ರತಿಭಟನೆ. ಕಾಂಗ್ರೆಸ್ ಪಕ್ಷ ಹೋರಾಟದ ಬಾವುಟವನ್ನೆಸೆದು ಬ್ರಿಟಿಷರೊಡನೆ ದೇಶದ ವಿಭಜನೆಗಾಗಿ ಚೌಕಾಸಿ ನಡೆಸಿತ್ತು. ಸ್ವಾತಂತ್ರ್ಯ ಹೋರಾಟದ, ಕರ್ನಾಟಕ ಏಕೀಕರಣ ಹೋರಾಟದ ನೇತೃತ್ವವನ್ನು ಜನರೇ ತಮ್ಮ ಕೈಗೆ ತೆಗೆದುಕೊಂಡಿದ್ದರು.

ಆ ದಿನಗಳಲ್ಲಿ, ಜನರಶಕ್ತಿ ಹೊಳೆಯಾಗಿದ್ದದ್ದು ಸಾಗರವಾಗಿ ಹೋರಾಟದ ಅಲೆಗಳು ಎಂತಹವರನ್ನು ಬಡಿದೆಬ್ಬಿಸುತ್ತಿದ್ದ ಸಮಯದಲ್ಲಿ, ದುಡಿವ ಜನರ ಕಹಳೆಯಾಗಿ, ಅವರ ನೇತೃತ್ವ ವಹಿಸುತ್ತಿದ್ದ ಭಾರತ ಕಮ್ಯೂನಿಸ್ಟ್ ಪಕ್ಷದ ಮುಖವಾಣಿಯಾಗಿ "ಜನಶಕ್ತಿ" ಮೂಡಿಬಂತು.

ಜಗತ್ತಿನೆಲ್ಲ ದೇಶಗಳ ಕಾರ್ಮಿಕ ವರ್ಗ, ಎರಡನೇ ಮಹಾ ಯುದ್ಧದಲ್ಲಿ ನಾಜೀ ರಾಕ್ಷಸರ ನಾಶವನ್ನು, ಅದರ ಬೆನ್ನ ಹಿಂದೆಯೇ ಒಂದೊಂದಾಗಿ ಅನೇಕ ಯೂರೋಪಿನ ದೇಶಗಳು ಸಮಾಜವಾದಿ ಕ್ರಾಂತಿಯತ್ತ ಹೆಜ್ಜೆ ಹಾಕುತ್ತಿರುವುದನ್ನು ಆಚರಿಸುತ್ತಿರುವ ಸಂಭ್ರಮದ ಗಳಿಗೆಯಲ್ಲೇ 1947 ರ ಮೇ ಒಂದರಂದು "ಜನಶಕ್ತಿ" ಜನಗರ್ಭದೊಳಗಿಂದ ಹುಟ್ಟಿ ಬಂತು. 40 ವರ್ಷಗಳ ಹಿಂದೆ ಮೂಡಿದ ಈ ಪತ್ರಿಕೆ ಕನ್ನಡದ ಮೊದಲ ಕ್ರಾಂತಿಕಾರಿ ಪತ್ರಿಕೆ.

ಮೊದಲ ಸಂಪಾದಕರಾಗಿ ನಿರಂಜನ

ಮೈಸೂರು ಸಂಸ್ಥಾನದ ಕ್ರೂರ ದಬ್ಬಾಳಿಕೆಗೆ ಒಳಗಾಗಿ ಗಡಿ ಪಾರಾಗಿ ಹುಬ್ಬಳ್ಳಿಯಲ್ಲಿ ಪಕ್ಷದ ಪ್ರಾಂತ ಕಛೇರಿಯನ್ನು ಆರಂಭ ಮಾಡಿದ್ದರು, ಕಾಂ|| ಎನ್. ಎಲ್. ಉಪಾಧ್ಯಾಯ, ಸಿ. ಬಿ. ಮೊನ್ನಯ್ಯ ಮೊದಲಾದ ಅಂದಿನ ನಾಯಕ ವರ್ಗ 1947 ರಲ್ಲಿ ಬೆಂಗಳೂರಿನಲ್ಲಿ ಸೇರಿದ್ದ ಪಕ್ಷದ ಸದಸ್ಯರ ಸಮಾವೇಶದ ತೀರ್ಮಾನದಂತೆ "ಜನಶಕ್ತಿ" ಆರಂಭವಾಯಿತು. ಅದರ ಮೊದಲ ಸಂಪಾದಕರಾಗಿ, ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಗಳಿಸಿದ್ದ, ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರಾಗಿಯೇ ಅನೇಕ ರಂಗಗಳಲ್ಲಿ ದುಡಿಯುತ್ತಿದ್ದ ಕುಳಕುಂದ ಶಿವರಾಯ (ನಂತರದ ಕಾವ್ಯನಾಮ "ನಿರಂಜನ") ನೇಮಕವಾದರು.

ಸೀಮಿತ ಸಂಖ್ಯೆಯ ಸದಸ್ಯತ್ವವುಳ್ಳ, ಪಕ್ಷದ ಅಂದಿನ ದಿನಗಳಲ್ಲಿ ಪತ್ರಿಕೆಯ ಪ್ರಸಾರ ಐದು ಸಾವಿರದವರೆಗೂ ಮುಟ್ಟಿತು "ನಿರಂಜನ"ರ ಜೊತೆಗೆ ಮುದ್ರಣದ ವ್ಯವಸ್ಥೆಯನ್ನು ಮಾಡುತ್ತಿದ್ದ ಶಿವೇಶ್ವರ ದೊಡ್ಡಮನಿಯವರು, ಮುಂದೆ ಉತ್ತಮ ಸಾಹಿತಿಗಳೆಂದು ಪತ್ರಿಕಾ ಕರ್ತರೆಂದು ಪ್ರಸಿದ್ಧರಾದ ಕೆ. ಸದಾಶಿವ, ಹನೆಂ ನಾಗರಾಜರಾವ್, ಇವರು ಪತ್ರಿಕೆಗಾಗಿ ದುಡಿಯುತ್ತಿದ್ದರು. ಚೆನ್ನವೀರ ಕಣವಿ, ಸು. ರಂ. ಎಕ್ಕುಂಡಿಯವರೂ ಒಮ್ಮೊಮ್ಮೆ ಈ ಪತ್ರಿಕೆಗೆ ತಮ್ಮ ಕಾಣಿಕೆ ನೀಡಿದ್ದಾರೆ.

ಪತ್ರಿಕೆಯೂ ಭೂಗತವಾಯಿತು

ಅಂದು ಅನೇಕ ಪತ್ರಿಕೆಗಳು ಎದುರಿಸುತ್ತಿದ್ದ ಆಳುವ ವರ್ಗದ ಧಾಳಿಯನ್ನು ಈ ಪತ್ರಿಕೆಯೂ ಎದುರಿಸಬೇಕಾಗಿ ಬಂತು. ಉಳಿದ ಪತ್ರಿಕೆಗಳು ಬ್ರಿಟಿಷರ ಧಾಳಿಯನ್ನು ಮಾತ್ರ ಎದುರಿಸಿದ್ದರೆ ಈ ಪತ್ರಿಕೆ ಆ ಧಾಳಿಯ ಜೊತೆಗೆ ಆಗತಾನೆ ಸ್ವತಂತ್ರವಾಗಿ ವಾಕ್ ಸ್ವಾತಂತ್ರ್ಯವನ್ನು ಪಡೆದಿದ್ದ ನಮ್ಮದೇ ದೇಶದ ಆಳುವ ವರ್ಗದ ಸೇಡಿನ ಅನುಭವವನ್ನೂ ಪಡೆಯಿತು ಒಂದು ವರ್ಷದ ನಂತರ ಕಮ್ಯೂನಿಸ್ಟ್ ಪಕ್ಷದೊಡನೆ ಪತ್ರಿಕೆಯೂ ನಿಷೇಧಿಸಲ್ಪಟ್ಟಿತು. ಆಗ ಪಕ್ಷದ ನಾಯಕರು, ಪತ್ರಿಕೆಯ ಸಂಪಾದಕರೊಡನೆ ಪತ್ರಿಕೆಯೂ ಭೂಗತವಾಯಿತು. ಇದೇ ಸ್ಥಿತಿಯಲ್ಲಿಯೇ ಅನೇಕ ಮುದ್ರಣಾಲಯಗಳಲ್ಲಿ ಗುಪ್ತವಾಗಿ ಮುದ್ರಿತವಾಗಿ ಕಾರ್ಮಿಕರನ್ನು, ಜನರನ್ನು ತಲುಪಿತು ಹಾಗೂ-ಹೀಗೂ, ಸರಿಸುಮಾರು ಒಂದು ವರ್ಷ ಭೂಗತವಾಗಿಯೇ ನಡೆದ ಮೇಲೆ ಒಬ್ಬೊಬ್ಬರಾಗಿ ಕಾರ್ಯಕರ್ತರ ಬಂಧನವಾಗುತ್ತಿದ್ದಂತೆ ನಿಂತುಹೋಯಿತು.

೧೯೫೨ ರಲ್ಲಿ ಪುನರಾರಂಭ

ಮತ್ತೆ 1952ರಲ್ಲಿ ಪಕ್ಷ ಬಹಿರಂಗವಾಗಿ ಕಾರ್ಯ ನಿರ್ವಹಿಸಲು ಅವಕಾಶವಾದಮೇಲೆ, ಬೆಂಗಳೂರಿನ ಸುಲ್ತಾನ್ ಪೇಟೆಯಲ್ಲಿ ಸ್ಥಾಪಿತವಾದ "ಜನಶಕ್ತಿ" ಮುದ್ರಣಾಲಯದೊಂದಿಗೇ ಪತ್ರಿಕೆಯೂ ಆರಂಭವಾಯಿತು. ಪಕ್ಷ ಇಬ್ಭಾಗವಾಗುವವರೆಗೂ ಮುಂದೆ ಪರಿಷ್ಕರಣವಾದಕ್ಕೊಲಿದ ಎಂ. ಸಿ. ನರಸಿಂಹನ್‌ರವರು ಇದಕ್ಕೆ ಸಂಪಾದಕರಾಗಿದ್ದರು. ಈಗ "ಸೋವಿಯೆತ್ ದೇಶ" ಇತ್ಯಾದಿ ಸೋವಿಯೆತ್ ಒಕ್ಕೂಟದ ಪ್ರಕಾಶನಗಳ ಕನ್ನಡ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಸಿಯಾರ್ಕೈ, ಗೋಪಾಲ ಕೃಷ್ಣರಾವ್, ಪಾನ್ಸೆ ಇವರುಗಳು "ಜನಶಕ್ತಿ"ಯಲ್ಲಿ ಕೆಲಸ ಮಾಡುತ್ತಿದ್ದರು. 48ನೇ ಪುಟ ನೋಡಿ

ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ
(ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಮೇ ದಿನ ವಿಶೇಷಾಂಕ

ಸಂಪುಟ—9

ಸಂಚಿಕೆ—17-18

ಮೇ 3, 1987

ಬೆಲೆ ರೂ. 3-00

ಸಂಪಾದಕೀಯ

"ಭಾರತದ ನೆಲದಲ್ಲಿ ಕ್ರಾಂತಿ ಸೂರ್ಯನ ಕಿರಣ ಕಾಣಲು ಕಾದು ನಿಂತಿದೆ ಮೇ ದಿನ." ಭಾರತದ ಕಾರ್ಮಿಕ ವರ್ಗದ ಅದಮ್ಯ ಹಂಬಲ ಕನ್ನಡದ ಕವಿಯೊಬ್ಬನ ಹೃದಯದಿಂದ ಮೂಡಿ ಬಂದಿದೆ. ದಿನವಿಡೀ 12 ರಿಂದ 15 ಗಂಟೆಗಳಲ್ಲಿ ನಿದ್ದೆ ಆಹಾರಗಳನ್ನು ಬಿಟ್ಟು ಧಣಿಯ ಲಾಭಕ್ಕಾಗಿ ದುಡಿಯುತ್ತಿದ್ದ ಕಾರ್ಮಿಕ ವರ್ಗ "ನಮ್ಮ ಹೊಟ್ಟೆಯನ್ನು ಹೊರೆವುದಕ್ಕಾಗಿ ಕೇವಲ 8 ಗಂಟೆ ದುಡಿಮೆ ಸಾಕು. ಇನ್ನುಳಿದೆಲ್ಲಾ ಸಮಯ ನಮ್ಮ ಅರಿವಿನ, ಪ್ರಜ್ಞೆಯ ಬೆಳವಿಗೆ, ತನ್ನ ಕರ್ತವ್ಯ, ಜಾಗತಿಕ ಕರ್ತವ್ಯದ ಅರಿವಿಗೆ ಎಂದು ಘೋಷಿಸಿದ ದಿನ ಮೇ ದಿನ. ಇಡೀ ಸಮಾಜವನ್ನು ವಿಶ್ವದ ಎಲ್ಲಾ ಸಂಪನ್ಮೂಲಗಳನ್ನು ತನಗಾಗಿ, ತನ್ನ ಜೊತೆ ದುಡಿಯುವ ಎಲ್ಲ ಬಂಧುಗಳಿಗಾಗಿ, ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಹಾದಿಯಲ್ಲಿ ಹಾಕಿದ ಧೀರ ಹೆಜ್ಜೆ ಮೇ ದಿನ. ಈ ದಿನದಂದು "ಐಕ್ಯರಂಗ" ಕಾರ್ಮಿಕ ವರ್ಗಕ್ಕೆ ಶುಭಾಶಯಗಳನ್ನು ಕೋರುತ್ತದೆ.

45 ವರ್ಷಗಳ ಹಿಂದೆ 1942 ರ ಮೇನಲ್ಲಿ ಭದ್ರಾವತಿಯ ಉಕ್ಕಿನ ಕಾರ್ಖಾನೆಯ ಇಬ್ಬರು ಕಾರ್ಮಿಕರು ಹಾಗೂ ಒಂದು ಮಗು ಮೇ ದಿನಾಚರಣೆ ಮಾಡಿದ ಸಲುವಾಗಿಯೇ ಪ್ರಾಣ ತೆತ್ತಿದ್ದಾರೆ. ಪ್ರಾಣ, ಹೋದರೂ ಸರಿ ಮೇ ದಿನಾಚರಣೆ ಮಾಡಿಯೇ ತೀರುತ್ತೇವೆ ಎಂಬ ಆ ಕಾರ್ಮಿಕ ಸಮುದಾಯದ ಛಲ ನಮಗೆ ಸ್ಫೂರ್ತಿ ನೀಡಲಿ. ಅವರ ಬಲಿದಾನವನ್ನು 48 ವರ್ಷದ ನಂತರವಾದರೂ ನೆನಸಿಕೊಂಡು ನಮ್ಮ ವೀರ ವಂದನೆಗಳನ್ನು ಸಲ್ಲಿಸೋಣ.

ಇದೇ ಕ್ರಾಂತಿಕಾರಿ ಹಾದಿಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ಘಟಕದ ಮೊದಲ ಪತ್ರಿಕೆ "ಜನಶಕ್ತಿ" 1947ರ ಮೇ ಒಂದರಂದು ಆರಂಭವಾಗಿ ಕಾರ್ಮಿಕರ ಜನ ಸಾಮಾನ್ಯರ ನೋವಿಗೆ ಬಾಯ್ದೆರೆಯುತ್ತಿತ್ತು. ಭೂಗತವಾಗಿಯೇ ಒಂದು ವರ್ಷ ಕಾಲ ಮುದ್ರಿಸಿ, ಪ್ರಸಾರ ಮಾಡಿದ, ಪಕ್ಷದ ಅಂದಿನ ನಾಯಕರ ಸಾಹಸ ನಮಗೆ ಸ್ಮರಣೀಯ.

ಕಾರ್ಮಿಕ ವರ್ಗದ ಪಕ್ಷ, ಸಿ. ಪಿ. ಐ. (ಎಂ) ನ ಮುಖವಾಣಿಯಾಗಿ "ಐಕ್ಯರಂಗ" ಕರ್ನಾಟಕದ ಕಾರ್ಮಿಕ ವರ್ಗಕ್ಕೆ ಈ ನಮ್ಮ ನಾಡಿನಲ್ಲಿ ನಡೆದ ಕಾರ್ಮಿಕ ಚಳುವಳಿಯ ಬಗ್ಗೆ, ಸಂಘಟನೆಯ ಇಂದಿನ ಸಮಸ್ಯೆಗಳ ಬಗ್ಗೆ ಪರಿಚಯಿಸ ಬಯಸುತ್ತದೆ.

ಒಳ ಪುಟಗಳಲ್ಲಿ....

ಕರ್ನಾಟಕದ ಕಾರ್ಮಿಕ ಚಳುವಳಿ ಒಂದು ಸೂಕ್ಷ್ಮ ಪರಿಚಯ

ಕರ್ನಾಟಕದ ಕಾರ್ಮಿಕ ಚಳುವಳಿಯಲ್ಲಿ ಸ್ವಾತಂತ್ರ್ಯಕ್ಕೆ ಮೊದಲೇ ಪ್ರವೇಶಿಸಿದ ಕಾಂ|| ಎನ್. ಎಲ್‌ರವರು ಈ ಕಾರ್ಮಿಕ ಚಳುವಳಿಯ ವಿವಿಧ ಹಂತಗಳನ್ನು ವಿವರಿಸುತ್ತಾರೆ.

ಕರ್ನಾಟಕದ ಟ್ರೇಡ್ ಯೂನಿಯನ್ ಚಳುವಳಿಯನ್ನು ವಿಷದೀಕರಿಸುವುದು ಸ್ವಲ್ಪ ಕಷ್ಟ. ಆದರ ಮೂಲ ಮತ್ತು ಬೆಳವಣಿಗೆಗಳು ಒಂದೇ ತೆರನಾಗಿರುವುದಿಲ್ಲ. ಒಂದೊಂದು ಕೈಗಾರಿಕೆಯಲ್ಲಿ ಒಂದೊಂದು ತರವಾಗಿದೆ ಮತ್ತು ಬೇರೆ ಬೇರೆ ಜಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಬೆಳೆದಿವೆ. ಮುಖ್ಯವಾಗಿ ಇವುಗಳಲ್ಲಿ ನಾಲ್ಕು ಹಂತಗಳಲ್ಲಿ ವಿಂಗಡಿಸಬಹುದು.

1) 2ನೇ ಮಹಾಯುದ್ಧ ಆರಂಭವಾಗುವವರೆಗೆ—1939 ರವರೆಗೆ.

2) 1939 ರಿಂದ ಸ್ವಾತಂತ್ರ್ಯ ಬರುವವರೆಗೆ—

೩) 1947 ರ ನಂತರ ಕಾಲಾವಧಿ—ಎ. ಟಿ. ಯು. ಸಿ. ಹಾಗೂ ಕೆ. ಪಿ. ಟಿ. ಯು. ಸಿ. ಸ್ಥಾಪನೆ.

4) 1970 ರಲ್ಲಿ ಸಿ. ಐ. ಟಿ. ಯು. ಸ್ಥಾಪನೆ.

ಮೊದಲ ಹಂತದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಸಾಮಾನ್ಯವಾಗಿ ಎಲ್ಲ ಕಾರ್ಮಿಕ ಸಂಘಗಳೂ ಎ.ಐ.ಟಿ.ಯು.ಸಿ. ಅಂದರೆ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಎಂಬ ಸಂಸ್ಥೆಯಲ್ಲಿದ್ದುವು. ಆದರ ಮುಂಚೆ 1928 ರಿಂದ 1935 ರ ತನಕ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಕೆಲವು ಸಂಘಟನೆಗಳು ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಸಂಸ್ಥೆಯಲ್ಲಿದ್ದರೂ 1936 ರ ಬಳಿಕ ಎಲ್ಲರೂ ಎ. ಐ. ಟಿ. ಯು. ಸಿ. ಯನ್ನು ಅಂಗೀಕರಿಸಿದ್ದರು. ಅದರಲ್ಲಿ ಸುಧಾರಣಾವಾದಿಗಳು ಬಲವಾಗಿದ್ದರೂ ಕಮ್ಯೂನಿಸ್ಟರಿಗೆ ಅವರೊಡನೆ ಘರ್ಷಣೆಗಳು ನಡೆಯುತ್ತಿದ್ದರೂ ಕೊನೆಗೆ ಸರ್ವಸಮ್ಮತವಾದ ಒಮ್ಮತದ ತೀರ್ಮಾನಗಳಾಗುತ್ತಿದ್ದುವು. ಈ ಸಮಯದಲ್ಲಿ ಟ್ರೇಡ್ ಯೂನಿಯನ್‌ಗಳು ಬೆಳೆಯಲು ಉತ್ತಮ ಅವಕಾಶಗಳು ಒದಗಿದುವು. ಕರ್ನಾಟಕದಲ್ಲೂ ಇದನ್ನು ನೋಡಬಹುದು.

ಎನ್. ಎಲ್. ಉಪಾಧ್ಯಾಯ

ನಮ್ಮ ರಾಜ್ಯವನ್ನು ನೋಡುವಾಗ ದ. ಕನ್ನಡ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಬೀಡಿ, ಕೈಮಗ್ಗ ಕಾರ್ಮಿಕರ ಸಂಘಟನೆ ಕೇರಳದ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವ ಮತ್ತು ಸಹಾಯದಿಂದ ಆರಂಭವಾದುದನ್ನು ನೋಡಬಹುದು.

ಮಾಜಿ ಮೈಸೂರು ರಾಜ್ಯದ ಕೆಲವು ಪ್ರದೇಶಗಳಲ್ಲಿ ಈ ಕಾಲದಲ್ಲಿ ಹಲವು ಸಂಘಗಳು ಉದ್ಭವವಾದುವು. ಅವುಗಳಲ್ಲಿ ಮುಖ್ಯವಾಗಿ ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ, ಬೆಂಗಳೂರಿನ ಬಟ್ಟೆ ಗಿರಣಿಗಳಲ್ಲಿ, ಭದ್ರಾವತಿಯ ಉಕ್ಕಿನ ಕಾರ್ಖಾನೆಯಲ್ಲಿ, ಮೈಸೂರಿನ ಬಟ್ಟೆ ಗಿರಣಿಯಲ್ಲಿ ಸಂಘಗಳು ಆರಂಭವಾದುವು. ಈ ಸಂಘಗಳು ಕಾಂಗ್ರೆಸ್‌ನವರಿಂದಲೂ ಮತ್ತಿತರ ಎಡ ವಿಚಾರ ವಾದಿಗಳಿಂದ ಸ್ಥಾಪಿಸಲ್ಪಟ್ಟು ಕೆಲವು ಹೋರಾಟಗಳನ್ನು ನಡೆಸಿದವು. ರೈಲ್ವೆಯಲ್ಲೂ ರೈಲ್ವೆ ಕಾರ್ಮಿಕರ ಸಂಘಟನೆಗಳು ರಾಜ್ಯದ ವಿವಿಧ ಭಾಗಗಳಲ್ಲಿ ಕೆಲಸ ನಡೆಸಿವೆ. ಹುಬ್ಬಳ್ಳಿಯಲ್ಲಿ ಟೆಕ್ಸ್‌ಟೈಲ್ ಕಾರ್ಮಿಕರ ಸಂಘಟನೆಯೂ ಇತ್ತು.

2. ಎರಡನೇ ಮಹಾಯುದ್ಧ ಆರಂಭವಾದ ನಂತರ ಸ್ವಾತಂತ್ರ್ಯ ಬರುವವರೆಗೆ ಪಾರ್ಟಿಯ ನೇತೃತ್ವದಲ್ಲಿ ಕಾರ್ಮಿಕ ಸಂಘಟನೆಗಳು ತೀವ್ರವಾಗಿ ಬೆಳೆಯುತ್ತಿದ್ದುದನ್ನು ನೋಡಬಹುದು. ದ. ಕ. ಜಿಲ್ಲೆಯಲ್ಲಿ ಬೀಡಿ, ಕೈಮಗ್ಗಗಳಲ್ಲಿ ಸಂಘಟನೆ ಬೆಳೆದುದಲ್ಲದೆ ಟೈಲ್ ಕೈಗಾರಿಕೆಯಲ್ಲಿ ಬಲಿಷ್ಠ ಸಂಘಟನೆಯು ಬಂತು. ಉಳಿದ ಭಾಗಗಳಲ್ಲೂ ನಮ್ಮ ಪಾರ್ಟಿಯ ನೇತೃತ್ವದಲ್ಲಿ ಸಂಘಟನೆಗಳು ಬೆಳೆದುವು. ಕೆಲವು ಯೂನಿಯನ್‌ಗಳಲ್ಲಿ ಕಾಂಗ್ರೆಸ್ ನಾಯಕತ್ವವನ್ನು ತೆಗೆದು ನಮ್ಮ ನೇತೃತ್ವ ತರಲು ಸಾಧ್ಯವಾಯಿತು.

ಹಳೆಯ ಮೈಸೂರು ರಾಜ್ಯದ ವೈಶಿಷ್ಟ್ಯವೆಂದರೆ ಇಲ್ಲಿ ಕೈಗಾರಿಕಾವಾರಾಗಿ ಯೂನಿಯನ್‌ಗಳ ಬದಲು ಒಂದೊಂದು ಕಾರ್ಖಾನೆಗೆ ಒಂದೊಂದು ಯೂನಿಯನ್‌ಗಳು ಆಗಿವೆ. ಇದಕ್ಕೆ ಮೈಸೂರು ಲೇಬರ್ ಆಕ್ಟ್ ಮುಖ್ಯ ಕಾರಣವಾಗಿದೆ. ಹೀಗಾಗಿ ಕೋಲಾರದಲ್ಲಿ ನಾಲ್ಕು ಚಿನ್ನದ

ಸಲ್ಲುತ್ತದೆ. ಅದರ ಪರಿಣಾಮವಾಗಿ ಅವರ ಅನೇಕ ಬೇಡಿಕೆಗಳು ಈಡೇರಿದುವು.

ಬ್ಯಾಂಕ್‌ಗಳಲ್ಲಿ ದುಡಿಯುವ ನೌಕರರ ಸಂಘಟನೆಯು ಎ.ಐ.ಬಿ.ಇ.ಎ. ಯವರ ನೇತೃತ್ವದಲ್ಲೂ ಎಲ್.ಐ.ಸಿ. ನೌಕರರು ತಮ್ಮ ಸಂಘಟನೆಯಲ್ಲೂ ಬಂದು ಹೋರಾಟ ನಡೆಸುತ್ತಿದ್ದರು.

ಕಾರ್ಖಾನೆಯ ಆಡಳಿತೆಯಲ್ಲಿ ಕಾರ್ಮಿಕರ ಸಂಘಟನೆಗಳೂ ಭಾಗವಹಿಸಬೇಕೆಂದು ನೆಹ್ರೂ ಸರ್ಕಾರ ತೀರ್ಮಾನ ಮಾಡಿದಾಗ ಹೆಚ್. ಎಂ. ಟಿ. ಯನ್ನು ಈ ಪ್ರಯೋಗಕ್ಕೆ ಆರಿಸಲಾಗಿತ್ತು. ಆಗ ನಮ್ಮ ನೇತೃತ್ವದಲ್ಲಿದ್ದ ಕಾರ್ಮಿಕ ಸಂಘದ ಪ್ರತಿನಿಧಿಗಳು ಜಂಟೀ ಸಲಹಾ ಸಮಿತಿಯಲ್ಲಿ ಸೇರಿದರು. ಆದರೆ ಸ್ವಲ್ಪ ಸಮಯದಲ್ಲಿ ಐ. ಎನ್. ಟಿ. ಯು. ಸಿ. ಯವರ ಧಾಳಿ ಕಾರ್ಮಿಕರ ಸಂಘಟನೆಯ ಮೇಲೆ ನಡೆದು ಅನೇಕರು ಕಷ್ಟ-ನಷ್ಟಗಳನ್ನು ಅನುಭವಿಸಬೇಕಾಯಿತು. ಇದರ ಪರಿಣಾಮವಾಗಿ ನಮ್ಮ ಸಂಘಟನೆಗಿದ್ದ ಮನ್ನಣೆಯು ರದ್ದಾಗಿ ಐ. ಎನ್. ಟಿ. ಯು. ಸಿ. ಗೆ ಮಾನ್ಯತೆ ದೊರೆಯಿತು. ಬೇರೆಲ್ಲೂ ಈ ತೆರನಾದ ಬೆಳವಣಿಗೆಗಳಾಗಲಿಲ್ಲ. ಹೆಚ್.ಎ.ಎಲ್. ನಲ್ಲಿ ಒಂದೇ ಸಂಘಟನೆಯು ಮುಂದುವರಿದಿದೆ. ನಮ್ಮ ಪಾರ್ಟಿಯವರೇ ಅಧಿಕಾರ ಸ್ಥಾನದಲ್ಲಿದ್ದು ಕೆಲಸ ನಡಿಸಿಕೊಂಡು ಬಂದಿದ್ದರು. ಬಿ. ಇ. ಎಲ್. ನಲ್ಲಿ ಹಲವು ಸಂಘಟನೆಗಳು ಅಸ್ತಿತ್ವದಲ್ಲಿದ್ದರೂ ನಮ್ಮ ಸಂಘಕ್ಕೆ ಮಾನ್ಯತೆಯಿತ್ತು.

ನಮ್ಮ ಪಾರ್ಟಿ ಪರಿಷ್ಕರಣ ವಾದಿಗಳಿಂದ ಪ್ರತ್ಯೇಕವಾದಾಗ ಪರಿಸ್ಥಿತಿ ಬದಲಾವಣೆಯಾಯಿತು. ಕೆ.ಪಿ.ಟಿ.ಯು.ಸಿ. ಅಸ್ತಿತ್ವದಲ್ಲಿದ್ದರೂ ಅದು ಸಭೆಯನ್ನು ನಡೆಸುತ್ತಿರಲಿಲ್ಲ. ಯಾವುದೇ ಹೋರಾಟಗಳಿಗೆ ಹೋಗುತ್ತಿರಲಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಪರಿಷ್ಕರಣ ವಾದವನ್ನು ಬಹಿರಂಗವಾಗಿ ಬೋಧಿಸಲು ಪ್ರಯತ್ನ ನಡೆಯಿತು.

ಕೊನೆಗೆ 1970 ರಲ್ಲಿ ನಾವು ಸಿ. ಐ. ಟಿ. ಯು. ಕೇಂದ್ರವನ್ನು ಸ್ಥಾಪಿಸಬೇಕಾಯಿತು. ಇದನ್ನು ಸ್ಥಾಪಿಸುವಾಗ ನಮ್ಮ ಸಂಘಟನೆಗಳು ಸಾಕಷ್ಟು ಪ್ರಮಾಣದಲ್ಲಿದ್ದವು. ಚಿನ್ನದ ಗಣಿ ಕಾರ್ಮಿಕರ ಸಂಘಟನೆಯು ಮೂಲಭೂತವಾಗಿ ನಮ್ಮಲ್ಲುಳಿಯತು. ಈಗಲೂ ಇದೆ. ಬೆಂಗಳೂರಿನಲ್ಲಿ ಸಾರ್ವಜನಿಕ ಕ್ಷೇತ್ರಗಳಲ್ಲಿ ಸಂಘಟನೆಗಳಿಲ್ಲದಿದ್ದರೂ ನಮ್ಮ ಪ್ರಭಾವವಿತ್ತು. ರಾಜಾ-ಮಿನರ್ವಾ ಮಿಲ್‌ಗಳ ಕಾರ್ಮಿಕ ಸಂಘಟನೆಗಳು ನಮ್ಮ ನೇತೃತ್ವದಲ್ಲಿದ್ದುವು. ದ. ಕ. ಜಿಲ್ಲೆಯಲ್ಲಿ ನಮ್ಮ ಸಂಘಟನೆಯು ಮೊದಲಿನಂತೆಯೇ ಉಳಿದಿತ್ತು. ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳ ತೋಟ ಕೆಲಸಗಾರರ ಸಂಘಟನೆ ನಮ್ಮ ನೇತೃತ್ವದಲ್ಲಿ ಮುಂದುವರಿಯಿತು. ಹರಿಹರ, ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ಶಹಬಾದ್ ಮುಂತಾದ ಕಡೆಗಳ ಸಂಘಗಳು ಸಿ. ಐ. ಟಿ. ಯು. ಗೆ ಸೇರಿದವು. ದಾಂಡೇಲಿಯ ಹಲವು ಕಾರ್ಖಾನೆಗಳಲ್ಲೂ ನಮ್ಮ ನೇತೃತ್ವದ ಸಂಘಗಳೇ ಬಂದುವು. ಈಗ ನಮ್ಮ ಸಂಘಟನೆಯು ಇನ್ನೂ ಹೆಚ್ಚು ಬೆಳೆದಿದೆಂದರೆ ಅತಿಶಯೋಕ್ತಿಯಾಗಲಾರದು.

ಸಿ. ಐ. ಟಿ. ಯು. ವಿನ ಅಖಿಲಭಾರತ ಧೋರಣೆಯು ಟ್ರೇಡ್ ಯೂನಿಯನ್ ಚಳುವಳಿಗೆ ಹೊಸ ತಿರುವನ್ನು ಕೊಟ್ಟದೆ. ಐಕ್ಯತೆ ಮತ್ತು ಹೋರಾಟವೆಂಬ ಘೋಷಣೆಯಿಂದ ಇತರ ಟ್ರೇಡ್ ಯೂನಿಯನ್ ಸಂಘಗಳನ್ನು ಒಂದೇ ವೇದಿಕೆಯ ಮೇಲೆ ತರಲು ಸಾಧ್ಯವಾಗಿದೆ. ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆಗಳ ವಿರುದ್ಧ ಸಂಯುಕ್ತ ಚಳುವಳಿ ನಡೆಸಲು ಆರಂಭವಾಗಿದೆ. ನಮ್ಮ ರಾಜ್ಯದಲ್ಲೂ ಇದನ್ನು ನಾವು ನೋಡಬಹುದು.

ಸಿ. ಐ. ಟಿ. ಯು. ಸ್ಥಾಪನೆಯಾದ ಮೇಲೆ ನಾವು ನಡೆಸಿದ ಹೋರಾಟಗಳ ಪರಿಣಾಮವಾಗಿ ನಮ್ಮ ಪ್ರಭಾವವು ಇತರ ಕಾರ್ಮಿಕ ವಿಭಾಗಗಳಲ್ಲೂ ಬೆಳೆದಿರುವುದನ್ನು ನೋಡಬಹುದು. ಇದರಲ್ಲಿ ಮೈಕೋ ಕಾರ್ಮಿಕರ ಸಂಘಟನೆ ಮತ್ತು ಅವರ ಹೋರಾಟ ಬೆಂಗಳೂರಿನ ಕಾರ್ಮಿಕ ಚಳುವಳಿಯಲ್ಲಿ ಮುಖ್ಯವಾದುವು.

ರಾಜ್ಯ ಮಟ್ಟದಲ್ಲಿ ಕಾರ್ಮಿಕರ ಸಂಘಟನೆಗಳಿಗೆ ಈಗ ಪ್ರಯತ್ನ ನಡೆದಿದೆ. ಬೀಡಿ ಕಾರ್ಮಿಕ ಸಂಘಗಳ ಫೆಡರೇಷನ್ ಈ ದಿಸೆಯಲ್ಲಿ ಒಂದು ಪ್ರಯತ್ನವಾಗಿದೆ. ಎಲ್ಲ ಬಟ್ಟೆ ಗಿರಣಿಗಳ ಕಾರ್ಮಿಕ ಸಂಘಗಳ ರಾಜ್ಯವ್ಯಾಪಿ ಹೋರಾಟಕ್ಕೆ ಪ್ರಯತ್ನ ನಡೆದರೂ ಅದು ಸಾಕಷ್ಟು ಯಶಸ್ವಿಯಾಗಿಲ್ಲ.

ಸಾರ್ವಜನಿಕ ಕ್ಷೇತ್ರದಲ್ಲಿ ಪರಿಷ್ಕರಣ ವಾದವನ್ನು ಬಹಿರಂಗವಾಗಿ ಬೋಧಿಸಲು ಪ್ರಯತ್ನ ನಡೆಯಿತು.

ಸರ್ಕಾರದ ಧೋರಣೆ :

ಸರ್ಕಾರದ ಧೋರಣೆಯಲ್ಲೂ ಕೆಲ ಬದಲಾವಣೆಗಳನ್ನು ನೋಡಬಹುದು. ಕಾರ್ಮಿಕ ಸಲಹಾ ಸಮಿತಿಗಳಲ್ಲಿ ಎಲ್ಲ ಟ್ರೇಡ್ ಯೂನಿಯನ್ ಕೇಂದ್ರಗಳಿಗೂ ಪ್ರಾತಿನಿಧ್ಯ ಕೊಡಲಾಗುತ್ತಿದೆ. ಇದರಿಂದ ಸರ್ಕಾರ ನಿಗದಿಗೊಳಿಸುವ ಕನಿಷ್ಠ ಕೂಲಿ ಮುಂತಾದುವುಗಳನ್ನು ಜಾರಿಗೊಳಿಸಲು ರಾಜ್ಯಾದ್ಯಂತ ಹೋರಾಟ ನಡೆಸಬೇಕಾಗಿದೆ. ವಿವಿಧ ಕೈಗಾರಿಕೆಗಳ ಸಂಘಟನೆಗಳು ಅಗತ್ಯವೆಂಬುದನ್ನು ಇದು ತೋರಿಸಿಕೊಡುತ್ತದೆ.

ಮೂರನೆಯದಾಗಿ ಕಾರ್ಮಿಕ ವಿವಾದಗಳು ಬಂದಾಗ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಗಮನ ಸೆಳೆಯುವುದು ಕಷ್ಟವಾಗುತ್ತಿತ್ತು. ಈಗ ಇದರಲ್ಲಿ ಸ್ವಲ್ಪ

ಬದಲಾವಣೆ ಬಂದಂತೆ ಕಾಣುತ್ತದೆ. ಸಣ್ಣ ಕಾರ್ಖಾನೆಗಳಲ್ಲಿ ಸಂಘಟನೆ ಕಟ್ಟುವುದು ಈಗಲೂ ಕಷ್ಟವಾದರೂ ಕಾರ್ಮಿಕರ ಬೇಡಿಕೆಗಳನ್ನು ಪಡೆಯುವುದು ಅಸಾಧ್ಯವೇನಲ್ಲ.

ಈಗ ಶಿಕ್ಷಕರ ಸಂಘಟನೆಗಳು, ವೈದ್ಯರುಗಳ ಸಂಘಟನೆಗಳು, ಇತರ ವಿಭಾಗಗಳ ನೌಕರರ ಸಂಘಟನೆಗಳೂ ಬೆಳೆಯುತ್ತಿವೆ.

ಕೇಂದ್ರ ಸಂಘಟನೆಗಳು :

ಹಿಂದೆ ಎ. ಐ. ಟಿ. ಯು. ಸಿ. ಸಂಘಟನೆಯೂ ಐ. ಎನ್. ಟಿ. ಯು. ಸಿ. ಸಂಘಟನೆಗಳೂ ಇದ್ದುವು. ಕಾಂಗ್ರೆಸ್ ಸರ್ಕಾರವು ಐ. ಎನ್. ಟಿ. ಯು. ಸಿ. ಗೆ ಪ್ರೋತ್ಸಾಹ ಕೊಡುತ್ತಿತ್ತು. ಈಗ ನಮ್ಮ ರಾಜ್ಯದಲ್ಲಿ ಮೇಲೆ ಹೇಳಿದ ಸಂಸ್ಥೆಗಳಲ್ಲದೆ ಸಿ. ಐ. ಟಿ. ಯು , ಬಿ. ಎಂ. ಎಸ್., ಎಚ್. ಎಂ. ಎಸ್. ಮೊದಲಾದ ಸಂಘಟನೆಗಳಿವೆ. ಇವುಗಳಲ್ಲಿ ಹೆಚ್ಚಿನವು ವರ್ಗ ಸಹಕಾರದ ಧೋರಣೆಯನ್ನನುಸರಿಸುತ್ತವೆ. ಸಿ. ಐ. ಟಿ. ಯು. ವರ್ಗ ಹೋರಾಟದ ಧೋರಣೆಯನ್ನು ಅನುಸರಿಸಿಕೊಂಡು ಕಾರ್ಮಿಕರಲ್ಲಿ ವರ್ಗ ಜಾಗೃತಿಯನ್ನು ಬೆಳೆಸುವುದಕ್ಕೆ ಪ್ರಯತ್ನಿಸುತ್ತದೆ. ಇದರಲ್ಲಿ ಮುಖ್ಯವಾಗಿ ಕಾರ್ಮಿಕ ಚಳುವಳಿ ಯಶಸ್ವಿಯಾಗಬೇಕಾದರೆ ಕಾರ್ಮಿಕರೂ, ಬಡ ರೈತರೂ ಒಂದಾಗಿ ಹೋರಾಟ ನಡೆಸಬೇಕೆಂಬ ತಿಳುವಳಿಕೆಯನ್ನು ಕೊಡುತ್ತದೆ.

ಈಗ ಸಿ. ಐ. ಟಿ ಯು. ಗೆ ಪ್ರತ್ಯೇಕ ಆಫೀಸು ಇದೆ. ಅದು ಕನ್ನಡದಲ್ಲಿ ಸಿ. ಐ. ಟಿ. ಯು. ಪತ್ರಿಕೆಯನ್ನು ನಡೆಸುತ್ತಿದೆ. ಸಕ್ರಿಯವಾಗಿ ನಮ್ಮ ರಾಜ್ಯದಲ್ಲಿ ಟ್ರೇಡ್ ಯೂನಿಯನ್ ಚಳುವಳಿಯನ್ನು ಬೆಳೆಸಲು ಪ್ರಯತ್ನಿಸುತ್ತಿದೆ.

ಇಡೀ ಕಾರ್ಮಿಕ ವರ್ಗವನ್ನು ಐಕ್ಯ ಹೋರಾಟದಲ್ಲಿಳಿಸುವುದೇ ಸಿ ಐ ಟಿ ಯು ವಿನ ಗುರಿ. ನಮ್ಮ ಸಂಘಟನೆಯು ಬೆಳೆಯುತ್ತಿದ್ದರೂ ರಾಜ್ಯದ ವಿಶಾಲವಾದ ಕಾರ್ಮಿಕ ವಿಭಾಗದಲ್ಲಿ ಅದೊಂದು ಸಣ್ಣ ಶಕ್ತಿಯಾಗಿರುವುದನ್ನು ಮರೆಯಬಾರದು. ಇದನ್ನು ಬೆಳೆಸಿ ಎಲ್ಲ ಕಾರ್ಮಿಕ ವಿಭಾಗದಲ್ಲೂ ನಮ್ಮ ಕ್ರಾಂತಿಕಾರಿ ಸಂದೇಶವು ಹರಡಿ ಕ್ರಾಂತಿ ಯಶಸ್ವಿಯಾಗಲೆಂದು ಹಾರೈಸೋಣ.

ರಾಜ್ಯದ ಜನಸಂಖ್ಯೆಯಲ್ಲಿ ದುಡಿಯುವ ಕಾರ್ಮಿಕರ-ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ- ಒಂದು ಸಣ್ಣ ಭಾಗವಷ್ಟೇ ಈಗ ಸಂಘಟಿತವಾಗಿರುತ್ತವೆ. ಇತರ ಲಕ್ಷಾಂತರ ಕಾರ್ಮಿಕರು (ಕೃಷಿ ಕೆಲಸಗಾರರು; ಗಣಿ ಕೈಗಾರಿಕೆಗಳಲ್ಲಿ ದುಡಿಯುವವರು ಇತ್ಯಾದಿ) ಯಾವ ಸಂಘಟನೆಯಲ್ಲೂ ಇಲ್ಲ ಸಂಘಟಿತ. ಕಾರ್ಮಿಕರಿಗೆ ಕೆಲಸದ ಭದ್ರತೆ, ಭವಿಷ್ಯ ನಿಧಿ, ಕನಿಷ್ಠ ವೇತನ ಮತ್ತು ತುಟ್ಟಿಭತ್ತೆ ಮುಂತಾದ ಅಲ್ಪ ಸೌಲಭ್ಯಗಳು ದೊರೆತರೂ ಇತರರಿಗೆ ಇವು ಯಾವುದೂ ಇಲ್ಲ. ಮಹಿಳೆಯರ ಸ್ಥಿತಿಯಂತೂ ಚಿಂತಾಜನಕವಾಗಿದೆ. ಈ ವಿಭಾಗದವರ ಸಂಘಟನೆಯು ದೇಶದ ಪ್ರಗತಿಗೆ ಅತ್ಯಗತ್ಯ.

ಐ.ಎನ್.ಟಿ.ಯು.ಸಿ. ಯು ಮೂಲಭೂತವಾಗಿ ವರ್ಗ ಸಹಕಾರದ ಆಧಾರದಲ್ಲಿ ರಚಿತವಾದ ಕಾರ್ಮಿಕ ಸಂಘಟನೆಯಾಗಿದ್ದು ಹೆಚ್ಚು ಕಡಿಮೆ ಮಾಲಿಕರ ಕೈಗೊಂಬೆ ಸಂಘವಾಗಿ ಇದೆ. ಬಿ. ಎಂ. ಎಸ್. ಸಂಘಟನೆಯೂ ಇದೇಸ್ವರೂಪದ್ದಾಗಿದೆ. ಕೆ ಪಿ ಟಿ ಯು ಸಿ ಗೆ ಹೋರಾಟದ ಚರಿತ್ರೆ ಇದ್ದರೂ ಅದರ ನಾಯಕತ್ವದ ಪರಿಷ್ಕರಣ ವಾದದಿಂದ ಮುಂದೆ ಹೋಗಲು ಅಡ್ಡಿಯಾಗಿದೆ. ಸಿ. ಐ. ಟಿ. ಯು. ನಾಯಕತ್ವ ಈ ದೋಷಗಳಿಂದ ದೂರವಿದ್ದರೂ ಎಲ್ಲವೂ ಈ ಸಂಘದಲ್ಲಿ ದೋಷರಹಿತವಾಗಿದೆಂದು ಹೇಳುವುದು ಆತ್ಮಶ್ಲಾಘನೆಯಾಗುವುದು.

ನಮ್ಮ ಟ್ರೇಡ್ ಯೂನಿಯನ್‌ಗಳಲ್ಲಿ ಬೇರೂರಿರುವ ಮುಖ್ಯ ನ್ಯೂನತೆಯೆಂದರೆ ಕಾರ್ಖಾನೆ ಮನೋಭಾವ. ಅವರ ತಿಳುವಳಿಕೆಯು ಕಾರ್ಖಾನೆಯ ಮಟ್ಟದಲ್ಲೇ ಇದ್ದು ಕೈಗಾರಿಕಾ ಮಟ್ಟದ ಜಾಗೃತಿಗೂ ಮುಂದುವರಿಯದು. ಈಗಲೂ ಸಂಘಗಳು ಆಯಾ ಕಾರ್ಖಾನೆಗಳ ಕಾರ್ಮಿಕರ ವೇತನ ತುಟ್ಟಿಭತ್ತೆ ಮುಂತಾದ ಬೇಡಿಕೆಗಳಿಗೆ ಹೋರಾಡುತ್ತಾರಲ್ಲದೆ ಇತರರ ಬೇಡಿಕೆಗಳಿಗೆ ಬೆಂಬಲಾರ್ಥವಾಗಿ ಹೋರಾಡುವುದು ಕಾಣುವುದಿಲ್ಲ. ಇದು ಆಳವಾಗಿ ಬೇರೂರಿದ್ದು ಅದನ್ನು ಹೋಗಲಾಡಿಸಲು ಸಿ. ಐ. ಟಿ. ಯು. ಸಂಘಟನೆಯಾದರೂ ಪ್ರಯತ್ನಿಸುವುದು ಅಗತ್ಯ.

ಬ್ಯಾಂಕ್, ಎಲ್.ಐ.ಸಿ. ಮುಂತಾದ ಮಧ್ಯಮ ವರ್ಗದ ಸಂಸ್ಥೆಗಳಲ್ಲಿ ಅಖಿಲ ಭಾರತ ಮಟ್ಟದಲ್ಲೇ ಅವರ ಬೇಡಿಕೆಗಳು ಚರ್ಚೆಯಾಗುತ್ತಿದ್ದು ಯಾವುದಾದರೂ ಬಿಕ್ಕಟ್ಟು ಬಂದಾಗ ಪ್ರಚಾರ ಪ್ರಕ್ಷೋಭೆಗಳನ್ನು ನಡೆಸುತ್ತಾರೆ. ಉಕ್ಕು, ಸಿಮೆಂಟ್ ಮುಂತಾದುವುಗಳಲ್ಲೂ ಕೇಂದ್ರದಲ್ಲೇ ವೇತನ ಮೊದಲಾದ ಬೇಡಿಕೆಗಳು ಚರ್ಚೆಯಾಗಿ ತೀರ್ಮಾನವಾಗುತ್ತವೆ. ಆದರೆ ಪರಿಸ್ಥಿತಿ ಹೀಗೆಯೇ ಮುಂದುವರಿಯುತ್ತದೆಂದು ಹೇಳಲು ಸಾಧ್ಯವಿಲ್ಲ. ಆರ್ಥಿಕ ಮುಗ್ಗಟ್ಟು ತೀವ್ರವಾದಾಗ ಕಾರ್ಮಿಕ ಸಂಘಟನೆಯ ಮೇಲೆ ಗದಾಪ್ರಹಾರ ಬೀಳಬಹುದು. ಬಟ್ಟೆ ಗಿರಣಿಗಳಲ್ಲಿ ಇದನ್ನು ನೋಡುತ್ತಿದ್ದೇವೆ. ಇತರ ಕ್ಷೇತ್ರಗಳಲ್ಲಿ ಇದು ಯಾವಾಗ ಬರುತ್ತದೆಂದು ಹೇಳಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಕಾರ್ಮಿಕರು ತಮ್ಮ ದೈನಂದಿನದ ಬೇಡಿಕೆಗಳಿಗೆ ಹೋರಾಡುವುದರ ಜೊತೆಗೆ ಸಮಾಜದಲ್ಲಿ ಮೂಲಭೂತ ಬದಲಾವಣೆ ತರುವ ಹೋರಾಟಕ್ಕೂ ತಯಾರಿರಬೇಕಾಗಿದೆ. ಇದರಲ್ಲಿ ಸಿ. ಐ. ಟಿ ಯು. ಸಂಘಗಳು ಮುಂಚೂಣಿಗಳಾಗಿದ್ದು ಇಡೀ ಕಾರ್ಮಿಕ ವರ್ಗಕ್ಕೆ ಮಾರ್ಗದರ್ಶಿಯಾಗಲಿ.

[ಇದರಲ್ಲಿ ಹೋರಾಟಗಳನ್ನು ವಿವರಿಸಲಾಗಲಿಲ್ಲ. ಒಂದೊಂದು ಸಂಘಕ್ಕೂ ಸ್ಫೂರ್ತಿದಾಯಕವಾದ ಚರಿತ್ರೆಯಿದೆ.]

ನಟರಾಜ ಪಡೆದ ಉಡುಗೊರೆ

ಚದುರಂಗರ 'ಸರ್ವಮಂಗಳಾ' ಕಾದಂಬರಿಯಿಂದ

ಬೀಡಿ ಕಾರ್ಮಿಕರ ಸಂಪು ಒಂದೇಸಮನೇ ನಡೆದಿತ್ತು. ನಟರಾಜ ದುರ್ಗಿಗೆ ಹೇಳುತ್ತಿದ್ದಂತೆ ಕೂಲಿಕಾರರು ತಮ್ಮ ಬೆವರು, ರಕ್ತ ಸುರಿಸಿ ಕಟ್ಟಿದ ಬೀಡಿಗಳನ್ನು ಮಾರಿ ಲಕ್ಷಾಂತರ ರೂಪಾಯಿಗಳ ಲಾಭ ಪಡೆಯುತ್ತಿದ್ದರು. ಬೀಡಿ ಕಾರ್ಖಾನೆಗಳ ಮಾಲೀಕರು-ಸ್ವತಃ ಒಂದು ಬೀಡಿಯನ್ನೂ ಕಟ್ಟದೆ ದಿನವಹಿ ಸಾವಿರಾರು ರೂಪಾಯಿ ಗಳಿಸಿದರೆ, ಸಾವಿರ ಬೀಡಿ ಕಟ್ಟುತ್ತಿದ್ದ ಕಾರ್ಮಿಕನಿಗೆ ಗಿಟ್ಟುತ್ತಿದ್ದ ಕೂಲಿ ಕೇವಲ ಒಂದೂವರೆ ರೂಪಾಯಿ !....

ಇದಕ್ಕೆ ತಕ್ಕಂತೆ ಎರಡನೇ ಮಹಾಯುದ್ಧ ಬೇರೆ ಆರಂಭ ವಾಗಿ ಪದಾರ್ಥಗಳ ಬೆಲೆ ಒಂದಕ್ಕೆ ನಾಲ್ಕರಂತೆ ಏರಿತ್ತು. ಆದರೆ, ಅದಕ್ಕೆ ಸರಿಯಾಗಿ ಕಾರ್ಮಿಕನ ಕೂಲಿ ಮಾತ್ರ ಹೆಚ್ಚಲಿಲ್ಲ. ಆದ್ದರಿಂದ ಬೀಡಿ ಕಾರ್ಮಿಕರಿಗೆ ಜೀವನ ಸಾಗಿಸುವುದೇ ದುರ್ಲಭ ವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಅವರು ಕೇಳುತ್ತಿದ್ದುದು ಬದಲಾಗಿ ಕೂಲಿಗಳಿಗೆ ಬುದ್ಧಿ ಹೇಳಿ ಒಲಿಸಿ ಕಾರ್ಮಿಕ ಮುಷ್ಕರ ವನ್ನು ಮುರಿಯಬೇಕಿತ್ತು ಆ ಮುಖಂಡ !

ಸರಿ, ಅತ ಮದೀನ ಹೋಟಲಿನ ಮೇಲ್ಭಾಗದ ಕೋಣೆ ಯೊಂದರಲ್ಲಿ ಇಳಿದುಕೊಂಡು, ಸಂಪು ನಡೆಸುತ್ತಿದ್ದ ಬೀಡಿ ಕೆಲಸಗಾರರ ಸಂಘದ ಮುಸ್ಲಿಂ ಮುಖಂಡರಿಗೆ ಒಂದು ಪತ್ರ ಬರೆದ. ಕೂಲಿಕಾರ-ಮಾಲೀಕರ ಮಧ್ಯೆ ಎದ್ದಿರುವ ಮನಸ್ತಾಪ ವನ್ನು ತಕ್ಷಣ ನಿಲ್ಲಿಸುವುದು ಸೂಕ್ತವೆಂದೂ ಮಾಲೀಕರೊಡನೆ ಮಾತಾಡಿ ಇಬ್ಬರಿಗೂ ರಾಜಿ ಮಾಡಿಸಲು ತಾನು ಶ್ರಮಿಸುವು ದಾಗಿಯೂ, ಅದಕ್ಕಾಗಿ ಕೂಡಲೇ ತನ್ನನ್ನು ಬಂದು ಕಾಣುವು ದೆಂದೂ ಆ ಪತ್ರದಲ್ಲಿ ನಮೂದಿಸಿದ್ದ.

ಆತನ ಪತ್ರವನ್ನು ಕೂಲಿಕಾರರ 'ಮುಷ್ಕರ ಸಮಿತಿ' ಯಲ್ಲಿ ಪರಿಶೀಲಿಸಲಾಯಿತು. ನಟರಾಜ "ಹೋಗಿ ಅವನನ್ನು ಕಾಣುವುದರಲ್ಲಿ ತಪ್ಪೇನಿಲ್ಲ. ಗೌರವಯುತವಾದ ಒಪ್ಪಂದಕ್ಕೆ

ಹುಣಸೂರಿನ ಕಲ್ಲಹಳ್ಳಿಯ ಹುಡುಗ ನಟರಾಜ ಓದಲು ಬಂದು ಮೈಸೂರಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಸೆರೆಮನೆ ಸೇರಿದ. ಮುಂದೆ ರೈಲ್ವೆ ನೌಕರನಾಗಿ ಮುಷ್ಕರ ಮಾಡಿ ಸಮತಾವಾದಕ್ಕೆ ಮಾರುಹೋದ. ರೈಲ್ವೆಯಲ್ಲಿ ಕೆಲಸ ಮಾಡುತ್ತಲೇ ಬೀಡಿ ಕಾರ್ಮಿಕರ ಮುಷ್ಕರಕ್ಕೆ ನಾಯಕತ್ವ ನೀಡಿ ಪಡೆದ ಹಿಂಸೆಯನ್ನು ಮುಂದೆ ಓದಿ.

ಕೇವಲ ಎರಡು ತಿಂಗಳ ಬೋನಸ್ಸು-ಮತ್ತು ಬೀಡಿ ಕೆಲಸಗಾರರ ಸಂಬಳಕ್ಕಾಗಿ ದುಡಿಯುತ್ತಿರುವರೆಂದು ಕೆಲಸದಿಂದ ವಜಾ ಮಾಡಲ್ಪಟ್ಟ ಎಂಟು ಜನ ಕೂಲಿಕಾರರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವುದು !.... ಆದರೆ ಇಷ್ಟು ಅಲ್ಪ ಬೇಡಿಕೆಗಳನ್ನೂ ಮಾಲೀಕರು ನಿರಾಕರಿಸಿ ಕಾರ್ಮಿಕರು ಮುಷ್ಕರ ಹೂಡುವಂತೆ ಮಾಡಿದ್ದರು.

ಮೈಸೂರು ನಗರದ ಬೀಡಿ ಕೆಲಸಗಾರರಲ್ಲಿ ಬಹು ಮಂದಿ ಮುಸ್ಲಿಮರು ಬೀಡಿ ಕಾರ್ಖಾನೆಗಳ ಮಾಲೀಕರಲ್ಲೂ ಬಹು ಮಂದಿ ಮುಸಲ್ಮಾನರೇ !....ತಮ್ಮ ಮತ್ತು ಕೂಲಿಕಾರರಲ್ಲಿದ್ದ ಈ ಮತ ಸಂಬಂಧವನ್ನು ದುರುಪಯೋಗಪಡಿಸಿ ಮುಷ್ಕರ ಮುರಿಯಲು ಹವಣಿಸಿದರು ಮಾಲೀಕರು....ಸಿಟಿ 'ಮುಸ್ಲಿಂ ಲೀಗಿ'ನ ಒಬ್ಬ ಮುಖಂಡನಿಗೆ ಹೇರಳವಾಗಿ ಹಣ ಸುರಿದು ಅವನ ಸಹಾಯ ಬೇಡಿದರು. ಅವರಿಂದ ಪಡೆದ ಹಣದ

ಬರಲು ನಾವು ಸದಾ ಸಿದ್ಧ" ಎಂಬ ಮಾತನ್ನು ಎಲ್ಲರೂ ಒಪ್ಪಿದರು ಹುಸೇನ್ ಮತ್ತು ಮಹಮ್ಮದ್ ಪೀರ್ ಇಬ್ಬರೂ ಹೋಗಿ ಆ ಮುಸ್ಲಿಂ ಲೀಗಿನ ಮುಖಂಡರನ್ನು ಭೇಟಿ ಮಾಡುವುದೆಂದು ತೀರ್ಮಾನಿಸಲಾಯಿತು.

ನಿರ್ಣಯದಂತೆ ಹುಸೇನ್ ಮತ್ತು ಪೀರ್ ಮದೀನ ಹೋಟೆಲಿನ ಮೇಲುಗಡೆಯ ಕೋಣೆಯನ್ನು ಹೊಕ್ಕಾಗ ಆ ಮುಖಂಡ ಹಾಸಿಗೆಯ ಮೇಲೆ ಸಿಗರೇಟ್ ಸೇದುತ್ತಾ ಕಾಲು ಚಾಚಿ ಮಲಗಿದ್ದ. ಚಾಚಿದ ಕಾಲನ್ನು ಹಿಂದೆಳೆದು ಕೇವಲ ಕೂಲಿಗಳಿಗೆ ಗೌರವ ತೋರಿಸುವುದು ಸಿರಿವಂತನಾದ ಆತನಿಗೆ ಹೀನಾಯವಾಗಿತ್ತು. ಆದ್ದರಿಂದ ಚಾಚಿದ ಕಾಲನ್ನು ಚಾಚಿ ಕೊಂಡು "ಆವ್ ಬೈಠೋ-" ಎಂದ.

ಅವನು ಎದುರಿಗೆ ಕೂರಲು ತೋರಿಸಿದ ಜಾಗ-ನೆಲ !

ನುರಿತ ಕಾರ್ಮಿಕ ಮುಖಂಡರಾದ ಹುಸೇನ್ ಮತ್ತು ಪೀರ್ ಇಬ್ಬರೂ 'ಇರಲಿ' ಎಂದು ನೆಲದ ಮೇಲೆ ಮಂಡಿಸಿದರು.

ಆ ಉರಿ ಬೇಸಿಗೆಯ ಮಧ್ಯಾಹ್ನದಲ್ಲೂ ದಪ್ಪನೆಯ ಶೇರ್ವಾನಿ ಹಾಕಿ, ಪಾಯಿಜಾಮ ಧರಿಸಿದ್ದ ಆತ.

ಉರಿದು ಬಂದ ಸಿಗರೇಟ್ ತುಂಡಿನ ಕೆಂಡದಲ್ಲಿ ಮತ್ತೊಂದು ಸಿಗರೇಟ್ ಹಚ್ಚಿ ನಿಧಾನವಾಗಿ 'ದಂ' ಎಳೆದು ಅವರ ಕಡೆಗೆ ದೃಷ್ಟಿ ಹೊರಳಿಸಿದ:

"ನಿಮ್ಮ ಹೆಸರು ?"

"ನನ್ನ ಹೆಸರು ಹುಸೇನ್-ಈತ ಪೀರ್-ಮಹಮ್ಮದ್ ಪೀರ್" ಹುಸೇನ್ ಪರಿಚಯ ಮಾಡಿಕೊಟ್ಟ.

"ಬಹಳ ಸಂತೋಷ."

ಸ್ವಲ್ಪ ಹೊತ್ತು ಮೌನ. ಸಿಗರೇಟಿನ ಹೊಗೆ ಗಾಳಿಯಲ್ಲಿ ನುಲಿದು ನುಲಿದು ಮೇಲೆದ್ದು ಕೋಣೆಯಲ್ಲೆಲ್ಲಾ ಹರಡು

ನಟರಾಜ ಹೇಳುತ್ತಾನೆ....

"ಹಾಗೆ ಕೂಲಿಕಾರರಿಗೆ 'ನೀವೆಲ್ಲ ಒಗ್ಗಟ್ಟಾಗಿ ಹೋರಾಡಿ. ಗೆದ್ದೇಗೇಲ್ತೀರಿ' ಅಂತ ಭರವಸೆ ಕೊಡೊ ಪಕ್ಷ ಅಂದರೆ ಸಮತಾವಾದಿ ಪಕ್ಷ. ನೀನು ಪ್ರಾರಂಭದಲ್ಲೇ ಕೇಳಿದೇ ನೋಡು 'ಸಮತಾವಾದಿ ಪಕ್ಷ ಅಂದರೆ ಏನು ?' ಅಂತ. ಹಾಗಂದರೆ ಇದೇ ! ಈ ಜಗತ್ತಿನಲ್ಲಿರೊ ಕೂಲಿಕಾರರನ್ನೆಲ್ಲಾ ಒಟ್ಟುಗೂಡಿಸಿ, ಅವರ ಹೊಟ್ಟೆ, ಬಟ್ಟೆಗಾಗಿ ಹೋರಾಟ ನಡೆಸೋದು ಈ ಸಮತಾವಾದಿ ಪಕ್ಷದ ಕೆಲಸ. ಈ ಪಕ್ಷದಲ್ಲಿ ಪಟ್ಟಣದಲ್ಲಿರೊ ಕೂಲಿಗಳು, ಹಳ್ಳಿಗಾಡಿನ ರೈತರು ಇವರೆ ಹೆಚ್ಚಾಗಿ ಇರೋರು. ಓದೋ ವಿದ್ಯಾರ್ಥಿಗಳು, ಬಡ ಲಾಯರುಗಳು, ಬಡ ಉಪಾಧ್ಯಾಯರು ಇವರುಗಳು ಕೂಡ ಅನೇಕ ಸಲ ಈ ಪಕ್ಷಕ್ಕೆ ಸೇರಿಕೊಂಡು ಬಡವರಿಗಾಗಿ, ಕೂಲಿಗಳಿಗಾಗಿ ಕೆಲಸ ಮಾಡ್ತಾರೆ."

ತ್ತಿತ್ತು. ಸಿಗರೇಟಿನ ತೆರೆಯ ಹಿಂದೆ ಆ ಮುಖಂಡ ಖಾದಿರನ ಮುಖ ನರಿಯಂತೆ ಕುಹಕವಾಗಿ ಹುಸೇನನಿಂದ ಪೀರನಿಗೆ ಪೀರನಿಂದ ಹುಸೇನನೆಡೆಗೆ ತನ್ನ ದೃಷ್ಟಿ ಹರಿಸುತ್ತಿತ್ತು. ಹಾಗೆ ನೋಡಿ ಅವರಿಬ್ಬರ ಯೋಗ್ಯತೆಯ ತುಲನೆ ಮಾಡುತ್ತಿತ್ತು. ಧಾಳಿ ಮಾಡುವ ಮೊದಲು ಶತ್ರುವಿನ ಬಲಹೀನ ಜಾಗಗಳನ್ನು ಅರಸುತ್ತಿತ್ತು.

ಹುಸೇನ್ ಮತ್ತು ಪೀರ್ ಇಬ್ಬರೂ ಸಮಾಧಾನವಾಗಿ ಶಾಂತಚಿತ್ತರಾಗಿ ಅವನನ್ನೇ ದಿಟ್ಟಿಸುತ್ತ ಕುಳಿತಿದ್ದರು.

ಖಾದರ್ ಸಿಗರೇಟ್ ಹೊತ್ತಿಸುತ್ತಾ ಅವರ ಕಡೆ ನೋಡದೆಯೇ ಹೇಳಿದ :

"ನಾನು ಮಾಲೀಕರ ಹತ್ತಿರ ಐತಲ್ಲಾ ಮಾತಾಡಿದ್ದಿನಿ. ಚಾಕರೀ ಇಂದ ತಗದು ಹಾಕಿರೋ ಕೂಲಿಗಳ್ನ ಹಿಂದಕ್ಕೆ ತಕ್ಕಳಾಕೆ ಅವರೆಲ್ಲ ಒಪ್ಪಿಗಂಡವ್ರೆ. ಆದ್ರೇ ಒಂದೇ ಷರತ್ತು...." ಎಂದು ಗಾಳಿಯಲ್ಲಿ ಕರಗುತ್ತಿದ್ದ ಸಿಗರೇಟಿನ ಹೊಗೆಯನ್ನೇ ನೋಡುತ್ತಿದ್ದ.

"ಏನು ಷರತ್ತು ?" ಹುಸೇನ್ ಮತ್ತು ಪೀರ್ ಇಬ್ಬರೂ ಒಟ್ಟಿಗೇ ಕೇಳಿದರು.

ಸಿಗರೇಟಿನ ಬೂದಿಯನ್ನು ತುದಿ ಬೆರಳಿನಿಂದ ಮಿಡಿದು, "ಷರತ್ತು ಅಂತಾ ದೊಡ್ಡದೇನೂ ಅಲ್ಲ. ಆ ಸಮತಾವಾದಿಗಳ್ನ ನಿಮ್ಮ ಸಂಘದಿಂದ ಒದ್ದು ಓಡಿಸಬೇಕು. ಅಷ್ಟು ನೀವು ಮಾಡಿದ್ರೆ ಐತಲ್ಲಾ ಬಾಕೀದು ನಾನು ನೋಡಕೊತ್ತೀನಿ" ಎಂದು ಹೇಳಿದ ಖಾದಿರ್.

"ಅರೆ ! ಅದು ಹೆಂಗೆ ಆಯಿತ್ತೈತೆ ? ನಮ್ಮ ಸಂಘ ಕಟ್ಟಿದೋರೇ ಅವರು ! ಅವರಿಲ್ಲದೇ ಹೋಗಿದ್ರೆ ನಮ್ಮ ಪರವಾಗಿ ಯಾರು ಹೊಡೆದಾಡ್ತಾ ಇದ್ದರು ? ಹಿಂದೆ ಒಂದುಸಲ ಹೊಡೆದಾಟ ನಡೆಸಿ ಕೂಲಿ ಹೆಚ್ಚಿಸಿಕೊಟ್ರಲ್ಲಾ, ಅದ್ನ ಇನ್ನಾರು ಗೆದ್ದು ಕೊಡ್ತಾ ಇದ್ದರು ?" ಹುಸೇನ್ ರಭಸದಿಂದಲೇ ಮಾತಾಡುತ್ತಿದ್ದ.

"ಏ ಕ್ಯಾ ಹುಸೇನ್ ?... ಹಿಂಗೆ ಮಾತಾಡ್ತೀ—ಸಮತಾವಾದಿ ಪಕ್ಷ ಹೋಲ್ಹೋದ್ರೆ ನಮ್ಮ ಮುಸ್ಲಿಂಲೀಗ್ ಇಲ್ಲಾ ?—ಅದ್ನ ಸೇರಿಕೊಂಡ್ರೆ ಆಯ್ತು....ನಾವು ಐತಲ್ಲಾ ಒಂದು ಕೂಲಿಕಾರ್ರ ಸಂಘ ಕಟ್ಟಬೇಕು ಅಂತ ಇದ್ದೀವಿ-ನೀವೆಲ್ಲ ಜಾತಿಲೀ ಮುಸಲ್ಮಾನರು. ಅದ್ಕೇ ಸೇರಬೇಕು. ಮುಸಲ್ಮಾನ್ ಆಗಿ ಹುಟ್ಟಿದ ಮೇಲೆ ಮುಸ್ಲಿಂಲೀಗಿಗೆ ಸೇರದೆ ಇರೋದು ದೊಡ್ಡ ತಪ್ಪು. ಹರಾಮಖೋರ್ ಹಿಂದುಗಳ ಜೊತೆ ಸೇರೋದು ಐತಲ್ಲಾ ಇನ್ನೂ ದೊಡ್ಡ ತಪ್ಪು."

ಖಾದಿರ್ ಹಿಂದೂ-ಮುಸ್ಲಿಂ ಭೇದ ತೆಗೆದದ್ದು ನೋಡಿ ಕೃದ್ಧನಾದ ಹುಸೇನ್.

"ನಮ್ಮ ಕೂಲಿಕಾರ್ರಿಗೆ ಯಾವ ಜಾತಿ ಭೇದಾನೂ ಇಲ್ಲ. ನಾವೆಲ್ಲ ಒಂದೇ ಜಾತಿ-ಕೂಲಿ ಮಾಡೋ ಜಾತಿ....ನಮಗೆಲ್ಲ ಇರೋದು ಒಂದೇ ಗೋಳು ಹಸಿವು !....ಹಿಂದೂ ಕೂಲಿ, ಮುಸ್ಲಿಂ ಕೂಲಿ, ಅಂತ ಇಲ್ಲ ನಮ್ಮ ತಾವು. ಹೊಟ್ಟೆ ಹೊಡೆದಾಟದಲ್ಲಿ ನಾವೆಲ್ಲ ಒಂದೇ.... ನಮ್ಮ ರಕ್ತ ಕುಡಿದು ಮೈ ಬೆಳೆಸ್ತಾ ಇರೋ ಮಾಲೀಕರು, ಹಿಂದೂ ಆಗ್ಲಿ, ಮುಸ್ಲಿಂ ಆಗ್ಲೀ ಎಲ್ಲ ಒಂದೇ ಕಳ್ಳ ಗುಂಪಿಗೆ ಸೇರಿದೋರು, ಅವರದ್ಯೆ ಬೇರ ಒಂದು 'ಜಾತಿ' ಅಂತ ನಮಗೆ ಯಾವತ್ತೋ ಗೊತ್ತಾಗಿ ಹೋಗೈತೆ...."

ಸಿಗರೇಟನ್ನು ಉದ್ವೇಗದಿಂದ ಬೇಗ ಬೇಗ ಸೇದುತ್ತಾ ಏನೋ ಹೇಳುವುದರಲ್ಲಿದ್ದ ಖಾದಿರ್. ಅಷ್ಟರಲ್ಲಿ ಪೀರ್ ಏನನ್ನೋ ನೆನೆದುಕೊಂಡು ಹೇಳತೊಡಗಿದ. "ನಿಂಗೆ ಗೆಪ್ತಿ ಐತಾ ಹುಸೇನ್? ಹೋದ ವರ್ಷ ಆ 'ಲಕ್ಷ್ಮಿ ಬೀಡಿ' ಕಾರ್ಖಾನೇಲಿ ಮುಷ್ಕರ ನಡೀತಲ್ಲಾ-ಆಗ ಆ ಹಿಂದೂ ಮಾಲೀಕನ ಜೊತೇಗೆ ಸೇರಿಕೊಂಡು ಮುಷ್ಕರ ಮುರಿದು ಹಾಕ್ಲಿಲ್ವಾ ಈ ಮುಸ್ಲಿಂ ಮಾಲೀಕರು? ಇದೆಲ್ಲಾ ಬಿಲ್‌ಕುಲ್ ಸುಳ್ಳು. ಹಿಂದೂ ಮಾಲೀಕ, ಮುಸ್ಲಿಂ ಮಾಲೀಕ ಇಬ್ಬರಿಗೂ ಇರೋದು ಒಂದೇ ಆಸೆ-ನಮ್ಮಂತಾ ಗರೀಬರ ಕೈಲಿ, ನಾವು ಹಿಂದೂಗಳಾಗ್ಲಿ, ಮುಸಲ್ಮಾನರಾಗ್ಲೀ, ಚೆಂದಾಗಿ ಗೆಯಿಸಿ ಕೊಂಡು ದುಡ್ಡು ಮಾಡಿ, ಬಾರಿ ಬಾರಿ ಮನೆ ಕಟ್ಟಿಸಿಕೊಂಡು ದೊಡ್ಡ ದೊಡ್ಡ ಮೋಟಾರ್ ಕೊಂಡುಕೊಂಡು ಮಜಾ ಮಾಡೋದೊಂದೇ ಅವರಿಗೆ ಬೇಕಾದ್ದು. ನಾನೂ ಮುಸಲ್ಮಾನ ಅಂತ ತಿಳಕೊಂಡು ಐತಲ್ಲಾ, ಯಾವನಾದ್ರೂ ಕೂಲಿ ಈ ಮುಸ್ಲಿಂ ಮಾಲೀಕರ ಮನೆಗೆ ಹೋದ್ರೆ, ಕುತ್ತಿಗೆ ಹಿಡಿದು ಆಚೆಗೆ ದಬ್ಬಿಸ್ತಾರೆ....ಜನಾನ್ರ ಕೈಲಿ, ಒಂದು ಒಳ್ಳೇ ಮಾತೂ ಆಡಾಕಿಲ್ಲ...." ಎನ್ನುತ್ತಾ ಖಾದಿರನನ್ನೇ ಕಣ್ಣು ಕೆಂಪಗೆ ಮಾಡಿಕೊಂಡು ನೋಡಿದ ಪೀರ್.

ಖಾದಿರ್ ಪೀರನ ಮುಖವನ್ನು ಹೆದರುತ್ತ ಹೆದರುತ್ತ ನೋಡಿದ.

ಹುಸೇನ್ ಮತ್ತೆ ಪ್ರಾರಂಭಿಸಿದ :

ನಿಮ್ಮ ಮುಸ್ಲಿಂಲೀಗು ಕಟ್ಕೊಂಡು ನಮ್ಮಂತಾ ಗರೀಬರಿಗೆ ಏನು ಬಂತು ಖಾದಿರ್‌ಸಾಬ್?... ಈ ಹಿಂದೂ ಮಹಾಸಭೆ, ಕಾಂಗ್ರೆಸ್ಸೂ, ಮುಸ್ಲಿಂಲೀಗು ಯಾವ್ದೂ ಬೇಡ ನಮ್‌ಗೆ. ನಮ್ಮಂತಾ ಕೂಲಿಕಾರರಿಗೆಲ್ಲ ಜಗತ್ತಿನಲ್ಲಿರೋದು ಐತಲ್ಲಾ ಒಂದೇ ಪಕ್ಷ-ಸಮತಾವಾದಿ ಪಕ್ಷ! ಬಾಕಿ ಪಾರ್ಟಿ ಗೋಳೆಲ್ಲ ದುಡ್ಡಿರೋರ ಪಾರ್ಟಿಗೋಳು. ಅವು ನಮ್ಮಂತಾರ್ನ ತಮ್ಮ ಪಾರ್ಟಿಗೋಳಿಗೆ ಸೇರಿಸಿಕೊಳ್ಳೋದು ಯಾಕೆ ಅಂದ್ರೆ 'ನಾವು ಬಡವರ ಸೇವೆ ಮಾಡ್ತೀವಿ' ಅಂತ ತೋರಿಸ್‌ಕೊಂಡು, ಒಳಗೇ ತಮ್ಮ ಪಾರ್ಟಿ ಬಲ ಮಾಡಿಕೊಂಡು ಆಟ ಆಡಕ್ಕೇ...."

ಪುಂಖಾನುಪುಂಖವಾಗಿ ಹುಸೇನ್ ಮತ್ತು ಪೀರ್ ಇಬ್ಬರಿಂದಲೂ ಬಂದ ಮಾತುಗಳ ಬಿರುಸಿಗೆ ತತ್ತರಿಸುತ್ತ ಮಿಕಿ ಮಿಕಿ ಕಣ್ಣು ಬಿಡುತ್ತಿದ್ದ ಖಾದಿರ್.

ಹಂಗಾದ್ರೆ ಈ ಷರತ್ತಿಗೆ ನೀವು ಒಪ್ಪಕಿಲ್ವಾ?"-ನರಿಯಂತೆಯೇ ಬಂದಿತು ಖಾದಿರನ ಪ್ರಶ್ನೆ.

"ಖಂಡ್ತಾ ಒಪ್ಪಾಕಿಲ್ಲ. ಯಾವ ಷರತ್ತೂ ಇಲ್ದೆ ನಮ್ಮ ಕೂಲಿಕಾರ ಸಿನೇಹತರ್ನ ಹಿಂದಕ್ಕೆ ತಕ್ಕೋಬೇಕು, ನಾವು ಕೇಳಿರೊ ಎಲ್ಡು ತಿಂಗಳು ಬೋನಸ್ ಕೊಟ್ಟುಬಿಡಬೇಕು ಹಂಗಿದ್ರೇ ರಾಜಿ-!" ಎಂದು ನಿಷ್ಠುರವಾಗಿ ನುಡಿದ ಹುಸೇನ್.

ನಿರುತ್ತರನಾದ ಖಾದಿರ್ ಸಿಗರೇಟಿನ ತುದಿಯ ಕೆಂಪನ್ನೇ ದಾರ್ಶನಿಕನಂತೆ ದಿಟ್ಟಿಸುತ್ತಿದ್ದ.

"ನಮ್ಮ ಷರತ್ತಿಗೆ ಐತಲ್ಲಾ ನಿಮ್ಮದು ಉತ್ತರ ಏನು ಖಾದರ್ ಸಾಹೇಬ್?" ಎಂದು ಕೇಳಿಯೇ ಬಿಟ್ಟ ಪೀರ್.

ಆಗ ಆ ಹಿಂದೂ ಮಾಲೀಕನ ಜೋತೆಗೆ ಸೇರಿ ಕೊಂಡು ಮುಷ್ಕರ ಮುರಿದು ಹಾಕ್ಲಿಲವಾ ಈ ಮುಸ್ಲಿಂ ಮಾಲೀಕರು?— ಪೀರನ ಮಾತು.

ಖಾದಿರ್ ಉಸಿರೆತ್ತದೆ ಮೌನವಾಗಿ ಸಿಗರೇಟನ್ನು ಸೇದುತ್ತಲೇ ಇದ್ದ.

* * *

ಮತದ ಹೆಸರಿನಲ್ಲಿ ಮುಷ್ಕರವನ್ನು ಮುರಿಯಲು ಹೀಗೆ ವಿಫಲರಾದ ಮಾಲೀಕ ವರ್ಗ 'ಪುಂಡ'ರಿಗೆ ದುಡ್ಡುಕೊಟ್ಟು ಪುಸಲಾಯಿಸಿ ನಟರಾಜ ಮೊದಲಾದ ಕಾರ್ಮಿಕ ಮುಖಂಡ ರನ್ನು ಚೆನ್ನಾಗಿ ಹೊಡೆದು ಹಾಕುವಂತೆ ಏರ್ಪಾಟು ಮಾಡಿದರು.

ಒಂದು ರಾತ್ರಿ ಬೀಡಿ ಮುಷ್ಕರಕಾರರನ್ನು ಸಂಧಿಸಿ ಮಾತಾಡಿಕೊಂಡು ಮಂಡಿಯಿಂದ ನಟರಾಜನೊಬ್ಬನೇ ತನ್ನ ಮನೆಗೆ ಹಿಂದಿರುಗುತ್ತಿದ್ದನು. ಆ ಸಮಯ ರಾತ್ರಿಯ ಕತ್ತಲಿನಲ್ಲಿ ಅವನು ನಡೆಯುತ್ತಿರುವಾಗ ಮಾಲೀಕ ವರ್ಗ ಗೊತ್ತು ಮಾಡಿದ್ದ 'ಪುಂಡ'ರ ತಂಡ ಹೊಂಚು ಸಾಧಿಸಿ ಹಿಂದಿನಿಂದ ಬಂದು ಮೇಲೆ ಬಿದ್ದರು. ತನಗೇನಾಗುತ್ತಿದೆ ಎನ್ನುವುದರ ಅರಿವಾಗುವುದರಲ್ಲಿ ನಟರಾಜನನ್ನು ಕೆಳಗೆ ಕೆಡವಿ 'ಹಣ್ಣು ಗಾಯಿ, ನೀರುಗಾಯಿ' ಆಗುವಂತೆ ಚೆನ್ನಾಗಿ ಜಜ್ಜಿದರು. ಅಷ್ಟರಲ್ಲಿ ಅದೇ ದಾರಿಯಲ್ಲಿ ಬರುತ್ತಿದ್ದ ಯಾರೋ ಮೂರು ಜನರು 'ಇಲ್ಲೇನೋ ಆಗುತ್ತಿದೆ, ನೋಡೋಣ' ಎಂದು ಹತ್ತಿರ ಬರುವಷ್ಟರಲ್ಲಿ ಆ ಪುಂಡರು ಹೆದರಿ ಪಲಾಯನ ಮಾಡಿದರು.

ಆ ಮೂವರು ಭೂಮಿ ಕಚ್ಚಿದ ನಟರಾಜನನ್ನೆತ್ತಿ ಕೂರಿಸಿ ಗಾಳಿ ಹಾಕಿ ಉಪಚರಿಸಿದರು. ಸ್ವಲ್ಪ ಹೊತ್ತಿನ ಬಳಿಕ ನಟರಾಜನಿಗೆ ಹೋಗಿದ್ದ ಪ್ರಜ್ಞೆ ಮರಳಿತು. ಅವನಿಂದ ಅವನ ಮನೆಯೆಲ್ಲಿರುವುದೆಂದು ಗೊತ್ತುಮಾಡಿಕೊಂಡು, ಟಾಂಗಾ ಗಾಡಿಯಲ್ಲಿ ಅವನನ್ನು ಕರೆದು ತಂದು ಅವನ ಮನೆಗೆ ಬಿಟ್ಟು ಹೋದರು ಆ ಜನ.

ನಟರಾಜನನ್ನು ಆ ಅವಸ್ಥೆಯಲ್ಲಿ ನೋಡಿದ ದುರ್ಗಿ ದಿಗ್ಭ್ರಾಂತಳಾದಳು. ನಟರಾಜನ ಮೈ, ಮುಖಗಳೆಲ್ಲ ಕಿತ್ತು ಗಾಯಗಳಾಗಿ ಅವುಗಳಿಂದ ಸೋರಿದ ರಕ್ತದಲ್ಲಿ ಅವನ ಅಂಗಿ ಯೆಲ್ಲಾ ತೋಯ್ದು ಭಯಂಕರವಾಗಿತ್ತು. ಆ ಸಮಯದಲ್ಲಿ ಮನೆಯ ಯಜಮಾನ ಶ್ರೀರಾಮುಲು ನಾಯಿಡು ಮತ್ತು ಆತನ ಪತ್ನಿ ಅವಳ ಸಹಾಯಕ್ಕೆ ಬರದಿದ್ದರೆ ಆವಳಿಗೆ ಏನು ಮಾಡಬೇಕೆಂಬುದೇ ತೋರುತ್ತಿರಲಿಲ್ಲ. ನಾಯಿಡು ಅಷ್ಟು

ನಟರಾಜನನ್ನು ಆ ಅವಸ್ಥೆಯಲ್ಲಿ ನೋಡಿದ ದುರ್ಗಿ ದಿಗ್ಭ್ರಾಂತಳಾದಳು.

ಹೊತ್ತಿನಲ್ಲಿ ಎದ್ದುಹೋಗಿ ಆಚೆ ಬೀದಿ ಯಲ್ಲಿದ್ದ ಡಾಕ್ಟರ್ ಮುನಿಸ್ವಾಮಿಯವರನ್ನು ಏಳಿಸಿಕೊಂಡು ಬಂದು ಆ ಗಾಯ ಗಳಿಗೆಲ್ಲ ಔಷಧ ಹಾಕಿಸಿದ. ಹಾಗೆ ಔಷಧ ಹಾಕಿ ಹೊರಗೆ ಬಂದ ಡಾಕ್ಟರ್ ಮುನಿಸ್ವಾಮಿ ನಾಯಿಡುವಿನೊಡನೆ "ಈತನಿಗೆ ಬಹಳ ಏಟು ಬಿದ್ದುಬಿಟ್ಟಿದೆ ಮಿಸ್ಟರ್ ನಾಯಿಡು. ಮೊದಲೇ ಬಡಕಲ ಶರೀರ. ಹೀಗೆ ಅವರು ಜಜ್ಜಿ ಹಾಕಿರೋವಾಗ ಈತ ಹೆಚ್ಚು ಕಾಲ ಬದುಕೊ ಹಾಗೆ ಕಾಣಲಿಲ್ಲ. ಶ್ವಾಸಕೋಶ ಕ್ಕಂತೂ ತುಂಬಾ ಜಖಂ ಆಗಿದೆ" ಎಂದು ಹೇಳಿ ಹೋದರು.

ಮುಂದೆ ಹತ್ತು-ಹದಿನೈದು ದಿನ ನಿದ್ರಾಹಾರಗಳಿಲ್ಲದೆ ಎಚ್ಚರಿಕೆಯಿಂದ ತನ್ನ ಪತಿಯ ಮಗ್ಗುಲಲ್ಲೇ ಕುಳಿತು ಶುಶ್ರೂಷೆ ಮಾಡಿದಳು ದುರ್ಗಿ. ಅವಳು ಗಂಡನಿಗೆ ಮಾಡುತ್ತಿದ್ದ ಉಪಚಾರದಲ್ಲಿ ಆ ಮನೆಯವರೂ, ಯಶೋದಮ್ಮ, ಅನಂತ, ನಂಜುಂಡಸ್ವಾಮಿಯವರೂ ಹಲವಾರು ಬಗೆಯಲ್ಲಿ ನೆರವಾದರು.

ನಟರಾಜನಿಗೆ ಏಟು ಬಿದ್ದ ರಾತ್ರಿ ಉಳಿದ ಕಾರ್ಮಿಕ ಮುಖಂಡರನ್ನೂ ಚಚ್ಚಿಸಬೇಕೆಂಬ ಹಂಚಿಕೆ ಮಾಲೀಕರ ದಾಗಿತ್ತು. ಆದರೆ ಆ ದಿನ ಉಳಿದ ಮುಖಂಡರು ಇನ್ನಾವುದೊ ಕೆಲಸಗಳನ್ನು ಹಚ್ಚಿಕೊಂಡು ಬೇರೆ ಜಾಗಗಳಿಗೆ ಹೋಗಿದ್ದುದ ರಿಂದ ಅವರೆಲ್ಲ ಮಾಲೀಕರ ದೌಷ್ಟ್ಯದಿಂದ ತಪ್ಪಿಸಿಕೊಂಡಂತಾ ಗಿತ್ತು. ನಟರಾಜನಿಗೆ ಏಟು ಬಿದ್ದುದನ್ನು ತಿಳಿದು ಅವರು ಮತ್ತೂ ಜಾಗರೂಕರಾದರು. ಇದರಿಂದ ಪುಂಡರಿಗೆ ಅವರನು ಹೊಡೆಯಲು ಅವಕಾಶವೇ ಸಿಗಲಿಲ್ಲ.

ನಟರಾಜನ ಮೇಲೆ ಈ ರೀತಿ ಮಾಲೀಕ ವರ್ಗ ನಡೆಸಿದ ಅತ್ಯಾಚಾರ ಇಡೀ ಬೀಡಿ ಕೆಲಸಗಾರರನ್ನು ರೊಚ್ಚಿಗೆಬ್ಬಿಸಿ, ಅವರ ನಿರ್ಧಾರದ ಉಕ್ಕನ್ನೂ ಮತ್ತು ಹರಿತಗೊಳಿಸಿತು.... ಮುಷ್ಕರ ಎಂದಿನಂತೆ ನಿಲ್ಲದೆ ಸಾಗಿತು. ಹಾಸಿಗೆ ಹಿಡಿದು ಮಲಗಿದ್ದರೂ ಕಾರ್ಮಿಕ ಮುಖಂಡರು ನಟರಾಜನಲ್ಲಿಗೇ ಬಂದು ಸಲಹೆ ಪಡೆದು ಹೋಗುತ್ತಿದ್ದರು. ಇದರ ಸುಳಿವು ತಿಳಿದ ಮಾಲೀಕ ವರ್ಗ ನಟರಾಜನೊಬ್ಬನನ್ನು ಜೈಲಿಗೆ ಸೇರಿಸಿದರೆ ಈ ಪುಂಡಾಟವೆಲ್ಲ ನಿಂತುಹೋಗುವುದೆಂದು ಬಗೆದು ಸರ್ಕಾರದ ನೆರವು ಬೇಡಿತು. ಸಮತಾವಾದಿ ಪಕ್ಷವನ್ನು ಪ್ರತಿ ಪಕ್ಷವಾಗಿ ಭಾವಿಸಿದ್ದ ಸರ್ಕಾರವೂ ತನಗೆ ವಿರುದ್ಧವಾದ ಈ ಶಕ್ತಿಯನ್ನು ಮೊಳಕೆಯಲ್ಲೇ ಹೊಸಕಿ ಹಾಕಲು ಹಾತೊರೆದು ಮುಂದೆ ಬಂದಿತು....ಮಧ್ಯ ರಾತ್ರಿಯ ಸಮಯದಲ್ಲಿ, ಎಲ್ಲರೂ ಮಲಗಿದ್ದ ವೇಳೆ ನಟರಾಜನಿಗಿನ್ನೂ ಸರಿಯಾಗಿ ತಿರುಗಾಡು ವಷ್ಟು ಶಕ್ತಿಯೂ ಇಲ್ಲದಿರುವಾಗ ಸರ್ಕಾರ ಕಳುಹಿಸಿದ ಪೋಲೀಸರು ಅವನನ್ನು ಬಂಧಿಸಿ ಸೆರೆಮನೆ ಸೇರಿಸಿದರು.

ದಿಕ್ಕು ತೋರದೆ, ಗೋಳುಗರೆಯುತ್ತ, ಇತ್ತ ಕರ್ತವ್ಯತಾ ಮೂಢಳಾಗಿ ಕುಳಿತಿದ್ದ ದುರ್ಗಿಗೆ ಮಾರನೆಯ ದಿನ ಯಶೋದಮ್ಮ, ನಂಜುಂಡಸ್ವಾಮಿಯವರು ಬಂದು "ಹೆದರಿಕೊ ಬೇಡ ದುರ್ಗಿ. ಇವತ್ತು ನಾಳೆ ಬಿಟ್ಟುಬಿಡ್ತಾರೆ" ಎಂದು ಧೈರ್ಯ ಹೇಳಿದರು.

"ಬಿಡದೆ !-ಅವರೇನು ಕದ್ದಿದಾರ ?" ಕಣ್ಣೀರು ಸುರಿಸುತ್ತಿ ದ್ದರೂ ಅವಳು ಹಾಗೆಂದಾಗ ಎಲ್ಲರೂ ದುರ್ಗಿಯಲ್ಲಾಗಿದ್ದ ಮಾರ್ಪಾಟಿಗೆ ಅಚ್ಚರಿಪಟ್ಟರು.

ಮೊದಲೇ ಪುಂಡರಿಂದ ಏಟು ತಿಂದು ಜರ್ಝರಿತವಾಗಿದ್ದ ನಟರಾಜನ ಶ್ವಾಸಕೋಶವನ್ನು ಆರು ತಿಂಗಳ ಜೈಲುವಾಸ ಮತ್ತೂ ಹದಗೆಡಿಸಿತು. ಜ್ವರ ಬರುತ್ತಿದ್ದುದರ ಜೊತೆಗೆ ಕೆಮ್ಮೂ ಆರಂಭವಾಗಿತ್ತು. ಜೈಲಿನಲ್ಲಿ ಅವನನ್ನು ಒಂದು ಪ್ರಾಣಿಗಿಂತಲೂ ಕಡೆಯಾಗಿ ಕಂಡು ಹೊರಗೆ ನೂಕಿದ್ದರು. ಅವನನ್ನು ಹೀಗೆ ಕನಿಷ್ಠವಾಗಿ ಕಾಣಲು ಸಮತಾವಾದಿ ಆಗಿದ್ದ ನೆಂಬುದೇ ಬಹುತೇಕ ಕಾರಣವಾಗಿತ್ತು. ಹಿಂದೆ ಅವನು ವಿದ್ಯಾರ್ಥಿಯಾಗಿದ್ದು ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿ ದ್ದಾಗ ಜೈಲಿನಲ್ಲಿ ಅವನನ್ನು ಇಷ್ಟು ಕಠಿಣವಾಗಿ ಕಂಡಿರಲಿಲ್ಲ. !- ಅಲ್ಲದೆ ಅವನನ್ನು ಆರು ತಿಂಗಳ ಕಾಲ ಕಾರಾಗೃಹದಲ್ಲಿಡಲು ಯಾವ ಸಕಾರಣಗಳೂ ಇರಲಿಲ್ಲ. ಮಾಲೀಕರ ಸುಳ್ಳು ಆಪಾದನೆಗಳು ಮತ್ತು ಸುಳ್ಳು ಸಾಕ್ಷ್ಯಗಳು ಅವನನ್ನು ಅಷ್ಟು ದೀರ್ಘಕಾಲ ಸೆರೆಯಲ್ಲಿ ಕೊಳೆಯುವಂತೆ ಮಾಡಿದವು.

"ನಮ್ಮ ನಟ್ರಾಜನ ಕೆಲಸದ ಇಚಾರ ಯೇನು ಚಿಕ್ಕಯ್ಯ....ಮಂತೆ ಆ ರೈಲಿನಲ್ಲೇ ಸೇರಿಸಿ ಕೊಂಡಾರಾ ?" ಎಂದು ಕೇಳಿದಳು.

ನಮ್ಮ ರಾಜ್ಯದ ತೋಟ ಕಾರ್ಮಿಕರು ಅಂದು - ಇಂದು

ಸಿ. ನಂಜುಂಡಪ್ಪ

ತೋಟ ಕಾರ್ಮಿಕರ ನಡುವೆ ಸಂಘಟನೆಯ ಅನುಭವವುಳ್ಳ ಕಾಂ. ಸಿ. ಎನ್. ಅಲ್ಲಿನ ಕಾರ್ಮಿಕರ ಪರಿಸ್ಥಿತಿಗಳನ್ನು ಪರಿಚಯಿಸುತ್ತಾರೆ. ಈ ಲೇಖನದಲ್ಲಿ

ಬಹಳ ಕಾಲದಿಂದ ತೋಟಕ್ಕೆ ಬರಬೇಕು ಎಂದು ಅಪ್ಪು ಹೇಳುತ್ತಿದ್ದರು. ಕಳೆದ ಎರಡು ವರ್ಷಗಳಿಂದ ಸುಬ್ರಾಯ ಮೇಸ್ತ್ರಿಯವರೂ ಬರಬೇಕೆಂದು ಹೇಳಲಾರಂಭಿಸಿದರು. ಕಳೆದ ಮಾರ್ಚ್ 15 ರಂದು ಮೂಡಿಗೆರೆಯಲ್ಲಿ, ನಡೆದ ಪ್ಲಾಂಟೇಶನ್ ಕಾರ್ಮಿಕರ ಜಂಟಿ ಸಮಾವೇಶಕ್ಕೆ ಹೋಗಿದ್ದಾಗ ಮರು ದಿವಸ ಬಿಲ್ಲಟ್ಟ ಎಸ್ಟೇಟಿಗೆ ಬರುವುದಾಗಿ ಅಪ್ಪುಗೆ ತಿಳಿಸಿದೆ. ಕೊಟ್ಟಿಗೆಹಾರದಿಂದ ನಮ್ಮನ್ನು ಕರೆದುಕೊಂಡು ಹೋಗಲು ಏರ್ಪಾಡು ಮಾಡುವುದಾಗಿ ಹೇಳಿ ಹೋದರು ಅಪ್ಪು. ಮರುದಿವಸ ಸೋಮವಾರ ಕೇಶವರು ಮತ್ತು ನಾನು ಕೊಟ್ಟಿಗೆಹಾರವನ್ನು ತಲುಪಿದಾಗ ಯಾರೂ ಕಾಣಲಿಲ್ಲ. ಆ ದಿಕ್ಕಿನಲ್ಲಿ ಹೋಗುವ ಖಾಸಗಿ ಬಸ್ಸನ್ನು ಹತ್ತುವಾಗ ಎಲ್ಲ ಸೀಟುಗಳೂ ಭರ್ತಿಯಾಗಿ ಅನೇಕರು ನಿಂತಿದ್ದರು. ಅಲ್ಲಿ ಬಿಲ್ಲಟ್ಟದ ಸುಂದರ ಕಂಡರು. ಆವರು ಉಜಿರೆಯ ಸಮೀಪ ನಿಡಗಲ್ಲಿನಲ್ಲಿ ನಡೆದ ದೊಡ್ಡ ಜಾತ್ರೆಗೆ ಹೋಗಿದ್ದವರು ತೋಟಕ್ಕೆ ಹಿಂತಿರುಗುತ್ತಿದ್ದರು ಬಾಳೂರು ಕೈ ಮರದಲ್ಲಿ ಬಸ್ಸಿನಿಂದ ಇಳಿದಾಗ ಪ್ರಕಾಶರು ಅಲ್ಲಿದ್ದರು. ಅಲ್ಲಿಯೇ ಇದ್ದ ಚಹದಂಗಡಿಯಿಂದ ಎಂ. ಸಿ. ಈಶ್ವರ ಸ್ವಾಗತಿಸಿದರು. ಇವರು ಹಿಂದೆ ಹನಿವೇಲ್ ಎಸ್ಟೇಟಿನ ಕಲ್ಲಕ್ಕಿ ಡಿವಿಜನ್ನಿನಲ್ಲಿ ಕೆಲಸ ಮಾಡುತ್ತಿದ್ದು ಕರ್ನಾಟಕ ಪ್ರೊವಿನ್ಶಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದವರು ಈಗ ಚಿಕ್ಕ ಹೋಟೆಲನ್ನು ನಡೆಸುತ್ತಿದ್ದಾರೆ. ನಮಗೆ ಚಹ ಕೊಟ್ಟು ಸತ್ಕರಿಸಿದುದಲ್ಲದೆ ತಾವು ಕೇರಳಕ್ಕೆ ಹೋಗಿದ್ದುದಾಗಿಯೂ ಎಡ ಪ್ರಜಾಪ್ರಭುತ್ವ ರಂಗ ಗೆಲ್ಲುವುದಾಗಿಯೂ ಹೇಳಿದರು. ಅಲ್ಲಿ ಅಪ್ಪು ಸೇರಿಕೊಂಡರು.

ಅಲ್ಲಿಂದ ಬಿಲ್ಲಟ್ಟಕ್ಕೆ ಅವರೊಂದಿಗೆ ನಡೆಯುವಾಗ ನಾನು ಆ ತೋಟಕ್ಕೆ ಹೋಗಿ ಏಳೆಂಟು ವರ್ಷಗಳ ಮೇಲಾಯಿತೆಂಬುದು ಭಾಸವಾಯಿತು. ಬಿಲ್ಲಟ್ಟದ ಪ್ರಯಾಣ ಸ್ವಲ್ಪ ಪ್ರಯಾಸಕರವೇ. ಬಿಲ್ಲಟ್ಟ ಒಂದು ಬೆಟ್ಟದ ತಲೆಯ ಮೇಲಿದೆ. ಹನಿವೇಲ್ ದ್ವಾರವನ್ನು ದಾಟಿ ಕಲ್ಲಕ್ಕಿಯನ್ನು ಹಾದು ಅಡತಾಳಿನ ಬಳಿ ಬಂದಾಗ ಬೋಬಮ್ಮ ನಮ್ಮನ್ನು ಕರೆದು ಚಕ್ಕೋತ ಹಣ್ಣುಗಳನ್ನು ಕೊಟ್ಟು ಕಳಿಸಿದರು. ಬಿಲ್ಲಟ್ಟವನ್ನು ತಲಪಿ ಕೈ ಗಡಿಯಾರ ನೋಡಿದಾಗ ಬಾಳೂರು ಕೈ ಮರದಿಂದ ಹೊರಟು ಒಂದು ಗಂಟೆಯಾಗುತ್ತ ಬಂದಿದ್ದಿತು. ಸುತ್ತಲೂ ಮನತಣಿಸುವ ಸುಂದರ ದೃಶ್ಯಗಳು.

ಅಪ್ಪು ನಮಗೆಲ್ಲ ಹಣ್ಣಿನ ರಸ ಕೊಟ್ಟರು. ಅದು ಈಗ ಅದೇ ತೋಟದಲ್ಲಿ ಬೆಳೆಯುತ್ತಿರುವ 'ಜೂಸ್ ಫ್ರೂಟ್'ನ ರಸ. ಹಿಂದೆ ಇದಿರಲಿಲ್ಲ.

ವಿಧಾನ ಸಭಾಧ್ಯಕ್ಷರಿಗೆ ಅರ್ಪಿಸಬೇಕಾದ ಮನವಿಗೆ ಸಹಿ ಸಂಗ್ರಹಿಸುವ ಕೆಲಸ ನಡೆಯುತ್ತಿದ್ದಾಗ, ನಾನು ಹಿಂದೆ ಇದ್ದ ಕೆಲಸಗಾರರ ಬಗ್ಗೆ ವಿಚಾರಿಸಿದೆ. ಹಿಂದೆ ಇದ್ದವರ ಪೈಕಿ ಈಗ ಹದಿನಾಲ್ಕು ಮಂದಿ ಮಾತ್ರ ಇದ್ದಾರೆ. ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನಿಂದ ಬಂದಿರುವ ಅರವತ್ತಕ್ಕಿಂತಲೂ ಹೆಚ್ಚು ಚಿಂಗೂಲಿ ಕೆಲಸಗಾರರು ಇರುವುದಾಗಿ ತಿಳಿಯಿತು. ಅವರ ಪೈಕಿ ಶೇಕಪ್ಪ ಮತ್ತು ಶಿವರುದ್ರಪ್ಪನವರೊಂದಿಗೆ ಮಾತನಾಡುವಾಗ ಅವರ ಊರಿನಲ್ಲಿ ಅಲ್ಲಿಯ ಶ್ರೀಮಂತ ಭೂಮಾಲೀಕರ ದಬ್ಬಾಳಿಕೆ, ಶೋಷಣೆ ಹೆಚ್ಚೆಂದೂ, ಅಲ್ಲಿಗಿಂತ ಇಲ್ಲಿಯ ಜೀವನ ಉತ್ತಮವೆಂದು ಹೇಳಿದರು. ಅಲ್ಲಿ ಬೆಳಗಿನಿಂದ ರಾತ್ರಿಯ ತನಕ ದುಡಿದರೆ ಐದು ರೂಪಾಯಿ ಕೂಲಿ ಸಿಕ್ಕುತ್ತದೆ ಇಲ್ಲಿ

ಎಂಟು ಗಂಟೆ ದುಡಿದರೆ ಹತ್ತು ರೂಪಾಯಿ ಸಿಕ್ಕುತ್ತದೆ ಎಂದರು. ನನ್ನ ಕೈಯಲ್ಲಿದ್ದ "ಸಿ ಐ ಟಿ ಯು ಸಂದೇಶ" ಪತ್ರಿಕೆಯ ಪ್ರತಿಗಳನ್ನು ಹಣ ಕೊಟ್ಟು ಕೊಂಡರು. ತಮ್ಮ ಊರಿನ ಬಡವರ ಸಂಘಟನೆಯ ಬಗ್ಗೆ ಕಾಳಜಿ ತೋರಿಸಿದರು. ಇವರಲ್ಲಿ ಎರಡು ಮೂರು ಮನೆಯವರನ್ನು ಬಿಟ್ಟು ಉಳಿದವರು ಮಾರ್ಚ್ ಕೊನೆಗೆ ಊರಿಗೆ ಹೋಗುವುದಾಗಿ ಹೇಳಿದರು.

ಇಲ್ಲಿದ್ದ ವೇಲಾಯುಧ ಮೇಸ್ತ್ರಿ ನಿವೃತ್ತಿಯ ನಂತರ ಕೇರಳದಲ್ಲಿ ನೆಲೆಸಿದ್ದಾರೆ. ಗುಮಾಸ್ತೆ ರಾಮನ ತಮ್ಮ ಚಿಕ್ಕ ವಯಸ್ಸಿನಲ್ಲಿ 1952 ರಲ್ಲಿ ಪರಂಗಿಯವರ ಕಾಲದಲ್ಲಿ ಇಲ್ಲಿ ಕೆಲಸಕ್ಕೆ ಸೇರಿದವರು ಸ್ವಲ್ಪ ಕಾಲದ ನಂತರ ನಿವೃತ್ತರಾಗಲಿದ್ದಾರೆ.

ಬಿಲ್ಲಟ್ಟ ನೂರಹನ್ನೆರಡು ಎಕರೆಯ ಕಾಫಿ ತೋಟ. ಅಂದಿನಿಂದ ಇಂದಿನವರೆಗೆ ಸರಾಸರಿ 40 ಟನ್ ಕಾಫಿ ಬೆಳೆಯುತ್ತದೆ. ಜತೆಗೆ ಸ್ವಲ್ಪ ಏಲಕ್ಕಿ, ಮೆಣಸೂ ಇವೆ. ಮೂರು-ನಾಲ್ಕು ವರ್ಷಗಳಿಂದ ಬೆಳೆಸುತ್ತಿರುವ 'ಜೂಸ್ ಫ್ರೂಟ್' ನೇರವಾಗಿ ಮದರಾಸಿನಲ್ಲಿರುವ ಮಾಲೀಕರ ಮನೆಗೆ ಹೋಗುತ್ತದೆ. ಹಿಂದೆ 40 ಖಾಯಂ ಕಾರ್ಮಿಕರಿದ್ದರು. ಇಂದು ಅವರ ಸಂಖ್ಯೆ 14ಕ್ಕೆ ಇಳಿದಿದೆ. ಎಲ್ಲಿಂದಲೋ ಕರೆತಂದ ಹಂಗಾಮಿ ಕಾರ್ಮಿಕರಿಗೆ ಕನಿಷ್ಟ ಕೂಲಿಗಿಂತಲೂ ಕಡಿಮೆ ಕೂಲಿಯನ್ನು ಕೊಟ್ಟು ಪ್ಲಾಂಟರು ಸಾಕಷ್ಟು ಲಾಭ ಮಾಡುತ್ತಾರೆ.

ಮರುದಿವಸ ಅಲ್ಲಿಂದ ನಡೆದು ಹೆಗ್ಗುಡ್ಲು ಮಾರ್ಗವಾಗಿ ಮತ್ತಿಕಟ್ಟೆಗೆ ಹೋದೆವು. ಹೆಗ್ಗುಡ್ಲು ಎಸ್ಟೇಟಿನಲ್ಲಿ ಒಂದು ಕಾಲದಲ್ಲಿ ಇನ್ನೂರು ಕಾರ್ಮಿಕರಿದ್ದರು. ಆದರೆ ಈಗ ಕೇವಲ 40 ಖಾಯಂ ಕೆಲಸಗಾರರಿದ್ದಾರೆ. ಖಾಯಂ ಕೆಲಸಗಾರರಿಗೆ ಸಿಕ್ಕುವ ಭವಿಷ್ಯ ನಿಧಿ, ಹಕ್ಕಿನ ರಜೆ ಸಂಬಳ, ಹಬ್ಬದ ರಜೆ ಸಂಬಳ, ಕಾಯಿಲೆ ರಜೆ ಸಂಬಳ, ದಾರಿ ಖರ್ಚು, ವೈದ್ಯಕೀಯ ಸೌಲಭ್ಯ, ಬೋನಸ್, ಕಂಬಳಿ ಹಂಗಾಮಿ ಕೆಲಸಗಾರರಿಗೆ, ಚಂಗೂಲಿಯವರಿಗೆ ಇಲ್ಲ. ಆ ಹಣವೆಲ್ಲ ಪ್ಲಾಂಟರಿಗೆ ಉಳಿತಾಯವಾಗುತ್ತದೆ. ಮೂರು ನಾಲ್ಕು ದಶಕಗಳಿಂದ ಪ್ಲಾಂಟೇಶನ್‌ಗಳಲ್ಲಿ ದುಡಿಯುತ್ತಿರುವ ರಾಮನ್, ಹೆಗ್ಗಡ್ಲಿನ ಅಪ್ಪಣ್ಣ, ಸುಬ್ರಾಯ, ತನಿಯ ಮೊದಲಾದವರೊಂದಿಗೆ ಹಳೆಯ ಕಾಲದ ಬದುಕಿನ ಬಗ್ಗೆ ಲೋಕಾಭಿರಾಮವಾಗಿ ಮಾತನಾಡಿದೆ.

> ಪ್ಲಾಂಟೇಷನ್‌ನ ಪೂರ್ವ ಇತಿಹಾಸವನ್ನು ನೋಡಿದರೆ ಕೈ ಕೆಸರಷ್ಟೇ ಅಲ್ಲ ರಕ್ತವೂ ಆಯಿತು ಶತಮಾನಗಳ ಹಿಂದೆ ಆಳುಗಳ ರಕ್ತವನ್ನೇ ಹೀರಿ ತೋಟಗಳನ್ನು ಮಾಡಿದುದು ನಂಬಲಾರದ ಕಥೆ; ಆದರೆ ಸತ್ಯ ಸಂಗತಿ,
>
> — ಓದಿ "ಬೆಟ್ಟದಿಂದ ಬಟ್ಟಲಿಗೆ"
>
> — ಎಚ್. ಎಲ್. ನಾಗೇಗೌಡ

ಹಿಂದೆ ಈ ಪ್ರದೇಶದಲ್ಲಿ ಸಾರಿಗೆ ಸಂಪರ್ಕ ಬಹಳ ಕಡಿಮೆ. ದಿವಸಕ್ಕೆ ಎರಡು ಬಾರಿ ಒಂದು ಖಾಸಗಿ ಬಸ್ ಕಳಸದಿಂದ ಕೊಟ್ಟಿಗೆಹಾರಕ್ಕೆ ಬಂದು ಹೋಗುತ್ತಿದ್ದಿತು. ಮಲೆನಾಡಿನ ಅನೇಕ ಊರುಗಳಿಗೆ ಬಸ್ಸುಗಳು ಇರಲಿಲ್ಲ. ಸಾರಿಗೆ ಸಂಪರ್ಕದ ಅಭಾವದಿಂದ ತೋಟ ಕಾರ್ಮಿಕರ ಸಂಘಟನೆ ಬಹಳ ಕಷ್ಟವಾಗಿದ್ದಿತು. ಅವರು ತಮಗೆ ಬೇಕಾದ ದವಸ ಧಾನ್ಯ ಮತ್ತು ಇತರ ವಸ್ತುಗಳನ್ನು ಹೆಚ್ಚಿನ ಬೆಲೆಗೆ ತೋಟದಲ್ಲಿಯೇ ಕೊಳ್ಳಬೇಕಾಗಿದ್ದಿತು.

ತೋಟ ಕಾರ್ಮಿಕರು ಸಮಾಜದ ಜಾತಿ ಶ್ರೇಣಿಯ ಕೆಳಭಾಗದಿಂದ ಬಂದವರು. ಸಾಮಾನ್ಯವಾಗಿ ಬಡತನವೇ ಕಾಫಿ ತೋಟಗಳಿಗೆ ಹೋಗಲು ಮುಖ್ಯ ಕಾರಣ. ಸ್ವಂತ ಭೂಮಿ ಇಲ್ಲದವರು ಅಥವ ಅಲ್ಪ ಸ್ವಲ್ಪ ಇದ್ದವರು ಮಳೆ ಬೆಳೆಗಳು ಸರಿಯಾಗಿ ಆಗದ ಕಾರಣ ಹೊಟ್ಟೆ ಪಾಡಿಗಾಗಿ ಕಾಫಿ ತೋಟಗಳಿಗೆ ಹೋಗುತ್ತಾರೆ.

ಮೊದಲಿಗೆ ಈ ಕೆಲಸಗಾರರನ್ನು ತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಮೇಸ್ತ್ರಿಗಳು, ರೈಟರುಗಳು ಮತ್ತು ದಳ್ಳಾಳಿಗಳು ಒದಗಿಸುತ್ತಿದ್ದರು. ಕುಟುಂಬದವರಿಗೆಲ್ಲ ಕಾಫಿ ತೋಟದಲ್ಲಿ ಕೆಲಸವಿದ್ದುದರಿಂದ ಇಡೀ ಒಂದು ಸಂಸಾರವನ್ನೇ ನೇಮಕ ಮಾಡಿ, ಕಾಫಿ ತೋಟಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಇದಲ್ಲದೆ, ಒಬ್ಬೊಬ್ಬನನ್ನೇ ಕರೆದುಕೊಂಡು ಹೋದರೆ ಆತ ಓಡಿ ಹೋಗಬಹುದೆಂದು ಇಡೀ ಸಂಸಾರವನ್ನೇ ಕರೆದುಕೊಂಡು ಹೋಗಿ ಓಡಿ ಹೋಗುವ ಸಂಭವವನ್ನು ಆದಷ್ಟು ಕಡಿಮೆ ಮಾಡುತ್ತಿದ್ದರು. ಈ ಮೇಸ್ತ್ರಿಗಳು ಅಥವ ದಳ್ಳಾಳಿಗಳು ಸಾಮಾನ್ಯವಾಗಿ ಕಾಫಿ ತೋಟದಲ್ಲಿ ಕೆಲಸದಲ್ಲಿದ್ದು ಸಂಬಳ ಪಡೆಯುತ್ತಿದ್ದವರು. ಈ ಸಂಭಾವನೆ ಒಂದು ವರ್ಷದಲ್ಲಿ ಒಬ್ಬ ಕಾರ್ಮಿಕ ಸಂಪಾದಿಸುವ ಕೂಲಿಯ ಶೇ. 10 ರಿಂದ ಶೇ. 15 ರವರೆಗೆ ಇರುತ್ತಿತ್ತು. ಇದರ ಮೇಲೆ ಒಬ್ಬ ಕೆಲಸಗಾರನಿಗೆ ಒಂದು ರೂಪಾಯಿಯಂತೆ ಮೇಸ್ತ್ರಿಗೆ ಭಕ್ಷೀಸ್ ಸಿಕ್ಕುತ್ತಿತ್ತು. ಕೆಲಸಗಾರರು ದಿನವೂ ತಪ್ಪದೆ ಕೆಲಸ ಮಾಡುವಂತೆ ಮಾಡಿದರೆ 'ಹಾಜರಿ ಬೋನಸ್' ಎಂದು ಒಬ್ಬ ಕೆಲಸಗಾರನಿಗೆ 4 ಪೈಸೆಯಂತೆ (ಈಗಿನ ಪೈಸೆಯಲ್ಲ, ಹಿಂದಿನ ರೂಪಾಯಿ, ಆಣೆ, ಕಾಸು) ಕೆಲಸಗಾರರನ್ನು ಒದಗಿಸಿದವರಿಗೆ ಕೊಡಲಾಗುತ್ತಿದ್ದಿತು. ಒಟ್ಟಿನಲ್ಲಿ ಒಬ್ಬ

ಆಳು ಒದಗಿಸಿದರೆ ವರ್ಷಕ್ಕೆ 20 ರೂಪಾಯಿಗಳಿಂದ 30 ರವರೆಗೆ ಸಿಕ್ಕುತ್ತಿತ್ತು.

ಮೇಸ್ತ್ರಿಗಳು ಪ್ಲಾಂಟರಿಂದ ಸಾವಿರಾರು ರೂಪಾಯಿ ಮುಂಗಡ ಪಡೆದು, ಕೆಲಸಗಾರರು ಸಿಕ್ಕುವ ಊರುಗಳಿಗೆ ಹೋಗಿ (ಹಿಂದೆ ಸಾಮಾನ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ) ಅವರನ್ನು ಪುಸಲಾಯಿಸಿ, ಕಾಫಿ ತೋಟಕ್ಕೆ ಬರುತ್ತೇವೆಂದು ಒಪ್ಪಿದವರಿಗೆ ತಲಾ 30 ರೂಪಾಯಿಗಳಿಂದ 50 ರವರೆಗೆ ಮುಂಗಡ ಕೊಡುತ್ತಿದ್ದರು. ಈ ಹಣದಿಂದ ಆ ಜನರು ತಮ್ಮ ಸಣ್ಣ ಪುಟ್ಟ ಕೈಸಾಲ, ವೈ ಸಾಲಗಳನ್ನು ತೀರಿಸಿಕೊಳ್ಳುತ್ತಿದ್ದರು, ಅಥವ ಬೇರೆ ಖರ್ಚುಗಳಿಗೋಸ್ಕರ ಆ ಹಣವನ್ನು ಉಪಯೋಗಿಸಿ ದಾರಿ ಖರ್ಚಿಗೆ ಸ್ವಲ್ಪ ಉಳಿಸಿ ಕೊಳ್ಳುತ್ತಿದ್ದರು. ಹೀಗೆ ಮೇಸ್ತ್ರಿ ಹತ್ತು ಇಪ್ಪತ್ತು ಜನರನ್ನು ಒಂದು ಕಡೆ ಕೂಡಿ ಹಾಕಿ, ಅವರನ್ನು ನಡೆಸಿಕೊಂಡೋ (ಈಗಿನ ಬೆಳ್ತಂಗಡಿ ತಾಲ್ಲೂಕಿನ ಕಿಲ್ಲೂರು, ಬಂಗಾಡಿಗಳಿಂದ ಕಳಸದ ಸುತ್ತ ಮುತ್ತಲ ಕಾಫಿ ತೋಟಗಳಿಗೆ) ಬಸ್ಸಿನ ಸೌಕರ್ಯವಿದ್ದೆಡೆ ಬಸ್ಸಿನಲ್ಲಿಯೋ ಕರೆದುಕೊಂಡು ಹೋಗುತ್ತಿದ್ದ. ತೋಟದಲ್ಲಿ ಒಂದು ವರ್ಷ ಕೆಲಸ ಮಾಡಿದ ನಂತರ ಕೆಲಸಗಾರ ಸಂಪಾದಿಸಿದ ಕೂಲಿ ಹಣದಲ್ಲಿ ಹಿಂದೆ ಕೊಟ್ಟ ಮುಂಗಡ ಹಣ ಕಳೆದು ಲೆಕ್ಕಾಚಾರ ಮಾಡಿ ಉಳಿದ ಹಣವನ್ನು ಅವನ ಕೈಗೆ ಕೊಡುತ್ತಿದ್ದರು. ಇಡೀ ಸಂಸಾರದವರೆಲ್ಲ ಕೆಲಸ ಮಾಡಿದರೇನೇ ಸಾಮಾನ್ಯವಾಗಿ ಕೈಯಲ್ಲಿ ಒಂದಿಷ್ಟು ಹಣ ಉಳಿಯುತ್ತಿತ್ತು. ಹಾಗಿಲ್ಲದೆ ಒಂದು ಕುಟುಂಬದಲ್ಲಿ ಒಬ್ಬಿಬ್ಬರು ಮಾತ್ರ ಕೆಲಸ ಮಾಡಿ ಕೆಲಸ ಮಾಡದ ಮಕ್ಕಳು ಮರಿಗಳನ್ನು ಸಾಕಬೇಕಾಗಿ ಬಂದಾಗ ಸಂಪಾದಿಸಿದ್ದು ಸಾಲದೆ ಮುಂಗಡವಾಗಿ ಪಡೆದ ಹಣ ಇನ್ನೂ ಬಾಕಿಯಾಗಿಯೇ ಉಳಿಯುತ್ತಿತ್ತು. ಆಗ ಮೇಸ್ತ್ರಿ ಆ ಬಾಕಿಯನ್ನು ತೀರಿಸುವುದಕ್ಕೆ ಮತ್ತೊಮ್ಮೆ ಮುಂಗಡ ಹಣ ಕೊಟ್ಟು ಮುಂದಿನ ವರ್ಷವೂ ಕೆಲಸಗಾರ ತೋಟದಲ್ಲಿ ದುಡಿಯುವಂತೆ ಮಾಡುತ್ತಿದ್ದ. ಒಟ್ಟಿನಲ್ಲಿ ಸಂಪಾದಿಸಿದ್ದು ಸಾಲದೆ ವರ್ಷೇ ವರ್ಷ ಸಾಲ ಮಾಡಿಕೊಂಡು ಜೀವನದುದ್ದಕ್ಕೂ ಸಾಲದಲ್ಲಿಯೇ ಮುಳುಗಿ ತೇಲುತ್ತಾ, ಸತ್ತ ನಂತರವೂ ಮಕ್ಕಳ ಮೇಲೆ ಅಷ್ಟೋ ಇಷ್ಟೋ ಸಾಲದ ಹೊರೆ ಹೇರಲಾಗುತ್ತಿತ್ತು.

ಹಿಂದೆ ದಕ್ಷಿಣ ಭಾರತದ ಕಾಫಿ ತೋಟಗಳಲ್ಲಿ 'ಕಂಗಾಣಿ' ಪದ್ಧತಿ ಅನುಷ್ಠಾನದಲ್ಲಿದ್ದಿತು. ಬಹುತೇಕ ಪ್ಲಾಂಟರುಗಳು ತಮಗೆ ಬೇಕಾದ ಕೆಲಸಗಾರರನ್ನು ಈ ಕಂಗಾಣಿಗಳ ಅಂದರೆ ಮೇಸ್ತ್ರಿಗಳು ಅಥವಾ ದಳ್ಳಾಳಿಗಳ ಮೂಲಕ ತೆಗೆದುಕೊಳ್ಳುತ್ತಿದ್ದರು. ಈ ಪದ್ಧತಿಯಿಂದ ಪ್ಲಾಂಟರಿಗೂ ಕೆಲಸಗಾರರಿಗೂ ಸಂಬಂಧವೇ ಇರುತ್ತಿರಲಿಲ್ಲ. ಕೆಲಸಗಾರರನ್ನು ತರುವ, ಅವರನ್ನು ಹೇಗೆಂದರೆ ಹಾಗೆ ನಡೆಸಿಕೊಳ್ಳುವ ಕೆಲಸ ಕಂಗಾಣಿಯದು. ಈ ಪದ್ಧತಿಯನ್ನು ತಪ್ಪಿಸುವ ಕೆಲಸ 1951 ರಲ್ಲಿ ಆರಂಭವಾಗಿ 1958 ರಲ್ಲಿ ಪೂರ್ಣವಾಯಿತು. ಪ್ಲಾಂಟರುಗಳು ತಮಗೆ ಬೇಕಾದ ಕಾರ್ಮಿಕರನ್ನು ತಾವೇ ನೇರವಾಗಿ ನೇಮಿಸಿಕೊಳ್ಳುವ ಪದ್ಧತಿ ಬಂದಿತು.

ಮೊದಲಿಗೆ ಕಾರ್ಮಿಕರನ್ನು ವರ್ಷದಲ್ಲಿ ಕೆಲಸವಿರುವಷ್ಟು ಕಾಲ ನೇಮಿಸಿಕೊಂಡು ವರ್ಷದ ಕೊನೆಯಲ್ಲಿ ಅವರ ಲೆಕ್ಕಾಚಾರ ಮಾಡಿ ಮನೆಗೆ ಕಳಿಸುತ್ತಿದ್ದರು. ಮಾರನೆಯ ವರ್ಷ ಹೊಸ ಕರಾರು ಮಾಡಿಕೊಳ್ಳುತ್ತಿದ್ದರು. 1947 ರ ಕೈಗಾರಿಕಾ ವಿವಾದಗಳ ಕಾಯಿದೆಯನ್ನು 1957ರಲ್ಲಿ ಪ್ಲಾಂಟೇಷನ್‌ಗಳಿಗೆ ಅನ್ವಯಿಸಿದುದರಿಂದ ಈ ಪದ್ಧತಿ ತಪ್ಪಿತು.

ಕಾಫಿ ತೋಟಗಳಲ್ಲಿ ವರ್ಷವೆಲ್ಲ ಕೆಲಸವಿರುತ್ತದೆ—ಎಲ್ಲಾ ತರಹ ಕೃಷಿಯಲ್ಲೂ ಇರುವಂತೆ ಕಾಫಿ ಹಣ್ಣು ಕೊಯ್ಯುವಾಗ ಹೆಚ್ಚು ಜನ ಬೇಕಾಗುತ್ತದೆ. ಆಗ ಹಂಗಾಮಿಯಾಗಿ ಕೆಲಸಗಾರರು ಬಂದು ಹಣ್ಣು ಕೊಯ್ದು ಹೋಗುತ್ತಾರೆ. ಅವರಿಗೆ 'ಹದಿನಾರು ದಿನದ' ಕೆಲಸಗಾರರು ಎಂದು ಕರೆಯುತ್ತಾರೆ.

ಮೂರು ದಶಕಗಳ ಹಿಂದೆ ಮೂಡಿಗೆರೆಯಲ್ಲಿ ಸಿನಿಮಾ ಇರಲಿಲ್ಲ, ಕಳಸದಲ್ಲೂ ಇರಲಿಲ್ಲ. ಚಿಕ್ಕಮಗಳೂರಿನಲ್ಲಿ 'ಜ್ಯೋತಿ' (ಕಟ್ಟಡ ಹಾಳು ಬಿದ್ದಿದೆ) ಮತ್ತು 'ಗುರುನಾಥ' ಟಾಕೀಸುಗಳು ಮಾತ್ರ ಇದ್ದುವು. ಆಗ ಟ್ರಾನ್ಸಿಸ್ಟರ್ ರೇಡಿಯೋ ಇರಲಿಲ್ಲ. ಆದರೆ ಇಂದು ಕಳಸ, ಬಣಕಲ್‌ನಂತಹ ಊರುಗಳಲ್ಲಿಯೂ ಟೆಂಟ್ ಸಿನಿಮಾಗಳಿವೆ, ಮೂಡಿಗೆರೆಯಲ್ಲಿ ಎರಡು ಸಿನಿಮಾ ಟಾಕೀಸುಗಳಿವೆ. ಬಹುತೇಕ ತೋಟ ಕಾರ್ಮಿಕರ ಮನೆಗಳಲ್ಲಿ ಇಂದು ಟ್ರಾನ್ಸಿಸ್ಟರ್ ರೇಡಿಯೋ ಇದೆ. ಆಕಾಶವಾಣಿ ಬಿತ್ತರಿಸುವ ವಾರ್ತೆಗಳನ್ನು, ಪ್ರದೇಶ ಸಮಾಚಾರವನ್ನು ಕೇಳುತ್ತಾರೆ. 1977 ರ ಮಾರ್ಚ್ 22 ರಂದು ಆಕಾಶವಾಣಿಯ ವಾರ್ತಾ ಪ್ರಸಾರದಲ್ಲಿ ಕಾಮ್ರೇಡ್ ಎ. ಕೆ. ಗೋಪಾಲನ್‌ರವರ ನಿಧನದ ಸುದ್ದಿಯನ್ನು ಕೇಳಿದ ಹನಿವೇಲ್ ಎಸ್ಟೇಟಿನ (ಅಂದು ಬಿಲ್ಲಟ್ಟು ಎಸ್ಟೇಟ್ ಹನಿವೇಲ್ ಎಸ್ಟೇಟಿನ ಒಂದು ಡಿವಿಜನ್

ಹೀಗೆ ಹೊಟ್ಟೆಪಾಡಿಗಾಗಿ ಹೋದವರಲ್ಲಿ ಬಹಳ ಜನ ಹಿಂದಿರುಗಿ ಬರುತ್ತಿರಲಿಲ್ಲ. ಹಿಂದಿರುಗಬೇಕಾದರೆ ಸಾಲ ಕೊಟ್ಟು ಮಾಲೀಕ ಅವನಿಗಿಂತ ಹೆಚ್ಚಾಗಿ ದಲ್ಲಾಳಿ ಬಿಡುತ್ತಿರಲಿಲ್ಲ. ಆಗ ಉಳಿಯುತ್ತಿದ್ದುದು ಒಂದೇ ದಾರಿ ರಾತ್ರೋ ರಾತ್ರಿ ಪರಾರಿ

—"ಬೆಟ್ಟದಿಂದ ಬಟ್ಟಲಿಗೆ"ಯಿಂದ

ಆಗದ್ದಿತು) ಕಾರ್ಮಿಕರು ಯಾರೂ ಕೆಲಸಕ್ಕೆ ಹೋಗದೆ ಶೋಕತಪ್ತರಾದರು.

ಆ ಕಾಲದಲ್ಲಿ ತೋಟ ಕೆಲಸಗಾರರನ್ನು ಹೊಡೆಯುವುದು ಸರ್ವೇ ಸಾಮಾನ್ಯವಾಗಿದ್ದಿತು. ಏನಾದರೂ ಸ್ವಲ್ಪ ಮಿಸುಕಿದರೆ ಸಾಕು ಏಟು ಬೀಳುತ್ತಿದ್ದಿತು. ಮರಕ್ಕೆ ಕಟ್ಟಿ ಹಾಕಿ ಬಾಸುಂಡೆ ಬರುವಂತೆ ಹೊಡೆಯುತ್ತಿದ್ದುದೂ ಇದೆ. 1970ರಲ್ಲಿಯೂ ಸಹ ಹಾಲಮಕ್ಕಿ ತೋಟದಲ್ಲಿ ಬೆಳಗಿನ ಗಣತಿಯಲ್ಲಿ ಹಾಜರಿ ತೆಗೆದುಕೊಳ್ಳುವಾಗ ಯಾರಾದರೂ ಮಿಸುಕಾಡಿದರೆ ಕುಟ್ಟಿ ಶೆಟ್ಟರು ಮೇಲಿಂದ ಜಗಿದು ಒದೆಯುತ್ತಿದ್ದರು. ಈ ದಬ್ಬಾಳಿಕೆ ತೋಟ ಕೆಲಸಗಾರರಲ್ಲಿ ಸಂಘಟನೆಯ ಅವಶ್ಯಕತೆಯನ್ನು ಮೂಡಿಸುತ್ತಿತ್ತು. ಇಂದು

೧೯೭೭ರ ಮಾರ್ಚ ೨೨ ರಂದು ಆಕಾಶವಾಣಿಯ ವಾರ್ತಾ ಪ್ರಸಾರದಲ್ಲಿ ಕಾ|| ಎ. ಕೆ. ಗೋಪಾಲನ್ ರವರ ನಿಧನದ ಸುದ್ದಿಯನ್ನು ಕೇಳಿದ ಹನಿವೇಲ್ ಎಸ್ಟೇಟಿನ ಕಾರ್ಮಿಕರು ಯಾರೂ ಕೆಲಸಕ್ಕೆ ಹೋಗದೆ ಶೋಕತಪ್ತರಾದರು.

ತೋಟಗಳಲ್ಲಿ ಕಾರ್ಮಿಕರನ್ನು ಹೊಡೆಯುವುದು ಬಹಳ ಅಪರೂಪ. ಪ್ಲಾಂಟರುಗಳು ಈಗ ಅಗತ್ಯವೆನಿಸಿದರೆ ಆ ಕೆಲಸವನ್ನು ಪೋಲೀಸರಿಂದ ಮಾಡಿಸುತ್ತಾರೆ. ಇಂದೂ ಅಷ್ಟೆ. ಎಲ್ಲಿ ಹೊಡೆತದ ಸಂಭವವಿದೆಯೋ ಅಲ್ಲಿಯ ಕಾರ್ಮಿಕರು ಸಂಘವನ್ನು ಸೇರುವ ವಿಚಾರ ಮಾಡುತ್ತಾರೆ.

ಕಾಫಿ ಪ್ಲಾಂಟೇಷನ್‌ಗಳಲ್ಲಿರುವ ಕೆಲಸಗಾರರು ವಾಸಿಸುವ ಮನೆಗಳ ಸಾಲನ್ನು 'ಕೂಲಿ ಲೈನು' ಎನ್ನುತ್ತಾರೆ. ಸಾಮಾನ್ಯವಾಗಿ ಸ್ಥಳೀಯರ ಒಡೆತನದಲ್ಲಿರುವ ಕಾಫಿ ತೋಟಗಳಲ್ಲಿ ತೋಟ ಕೆಲಸಗಾರರು ವಾಸಿಸುವ ಮನೆಗಳು ಪ್ಲಾಂಟೇಷನ್ ಲೇಬರ್ ರೂಲ್ಸಿನಲ್ಲಿರುವ 'ಸ್ಟ್ಯಾಂಡರ್ಡ್ ಟೈಪ್' ಮನೆಗಳಲ್ಲ, ಒಂದು ಕೋಣೆಯ ಕತ್ತಲೆಯ ಕೂಪಗಳು. ಮೇಲಿನಿಂದ ಹರಿದು ಬರುವ ನೀರನ್ನೋ, ಹೊಂಡದ ನೀರನ್ನೋ ಉಪಯೋಗಿಸಬೇಕು. "ಸ್ಟಾಂಡರ್ಡ್ ಟೈಪ್" ಮನೆ ಕೊಡಬೇಕೆಂಬುದು ಪುಸ್ತಕದ ಬದನೆಕಾಯಿಯಷ್ಟೆ. ಆ ರೀತಿಯ ಮನೆ ಬೇಕೆಂದು ಕೇಳಿದರೆ, ಭಾರತದ ಸಂಸತ್ತು ಮಾಡಿರುವ ಕಾನೂನನ್ನು ಜಾರಿ ಮಾಡಬೇಕೆಂದು ಕೇಳಿದರೆ, ಸ್ವಲ್ಪ ಕಾಲದಲ್ಲಿಯೇ ಬರುತ್ತಾರೆ ಪೋಲೀಸರು. ಮನೆ ಕೇಳಿದವರನ್ನು ಕಾಫಿ ಕದ್ದಿದ್ದಾರೆ ಎಂತಲೋ, ಮೈಲುತುತ್ತ ಕದ್ದಿದ್ದಾರೆ ಎಂತಲೋ (ಪ್ಲಾಂಟರು ಏನನ್ನು ಕದ್ದಿದ್ದಾರೆ ಎಂದು ದೂರು ಕೊಟ್ಟಿದ್ದಾರೋ ಅದನ್ನು ಅವಲಂಬಿಸಿ) ಆರೋಪಿಸಿ ಪೋಲೀಸು ಭಾಷೆಯಲ್ಲಿ ಬಯ್ದು ಪೋಲೀಸು ಠಾಣೆಗೆ ಎಳೆದುಕೊಂಡು ಹೋಗುತ್ತಾರೆ- ಅಲ್ಲಿ ಕರೆದುಕೊಂಡು ಹೋದ ಕೆಲಸಗಾರರಿಗೆ ಚಿತ್ರಹಿಂಸೆ ಕೊಡುತ್ತಾರೆ. ಇದರಿಂದಾಗಿಯೇ ಸ್ಥಳೀಯರ ಕಾಫಿ ತೋಟಗಳಲ್ಲಿ ಕಾರ್ಮಿಕರು ವರ್ಷದ ಲೆಕ್ಕಾಚಾರವಾಗುತ್ತಲೇ ಆ ತೋಟವನ್ನು ಬಿಟ್ಟು ಇನ್ನೊಂದು ತೋಟಕ್ಕೆ ಹೋಗುತ್ತಾರೆ. ಇದು ಅಂದಿದ್ದ ಪರಿಸ್ಥಿತಿಯೂ ಹೌದು. ಇಂದಿರುವ ಪರಿಸ್ಥಿತಿಯೂ ಹೌದು !

ಮನೆಗಳಿಗೆ ವರ್ಷಕ್ಕೊಮ್ಮೆ ಸುಣ್ಣ ಬಳಿಸಬೇಕು. ಕಾರ್ಮಿಕ ಸಂಘದ ಸದಸ್ಯರಿರುವ ತೋಟಗಳಲ್ಲಿ ಸಂಘದ ಪ್ರಯತ್ನದ ಮೂಲಕ ಕೆಲಸವಾಗುತ್ತದೆ. ಮೂರು ವರ್ಷಗಳಿಗೊಮ್ಮೆ ಬಾಗಿಲು ಕಿಟಕಿಗಳಿಗೆ ವಾರ್ನಿಷ್ ಹೊಡೆಯಬೇಕು, ಬಣ್ಣ ಬಳಿಯಬೇಕು ಎಂದಿದೆ. ಹೀಗೆ ಬಣ್ಣ ಬಳಿದಿದ್ದುದನ್ನು ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಒಂದು ಟೀ ತೋಟದಲ್ಲಿ ನೋಡಿದ್ದೇನೆ. ಆದರೆ ಕರ್ನಾಟಕದ ಕಾಫಿ ತೋಟಗಳಲ್ಲಿ ಇದು ಪುಸ್ತಕದ ಬದನೆ ಕಾಯಿಯೇ ಆಗಿದೆ. ಎಷ್ಟೋ ಕಾಫಿ ತೋಟಗಳ ಕೂಲೀ ಲೈನುಗಳಿಗೆ ಕಿಟಕಿಗಳೇ ಇರುವುದಿಲ್ಲ. ಅವುಗಳ ಬಾಗಿಲುಗಳು ಎಂತಹವೆಂದರೆ ಅವುಗಳು ಬಣ್ಣ ಬಳಿಸಿಕೊಳ್ಳುವ ಯೋಗ್ಯತೆಯನ್ನೇ ಪಡೆದಿರುವುದಿಲ್ಲ.

"ಸ್ಟ್ಯಾಂಡರ್ಡ್ ಟೈಪ್" ಮನೆಗೆ ಬಚ್ಚಲು ಮನೆ, ಕಕ್ಕಸು ಇರಬೇಕು. ಕಂಪೆನಿಗಳ ಒಡೆತನದಲ್ಲಿರುವ ಕೆಲವು ತೋಟಗಳಲ್ಲಿ, ಕೈ ಬೆರಳಲ್ಲೆಣಿಸುವಷ್ಟು ವೈಯಕ್ತಿಕ ಒಡೆತನದ ಕಾಫಿ ತೋಟಗಳಲ್ಲಿ "ಸ್ಟ್ಯಾಂಡರ್ಡ್ ಟೈಪ್" ಮನೆಗಳಿವೆ.

ಕೂಲಿ ಲೈನುಗಳಲ್ಲಿ ತೋಟ ಕೆಲಸಗಾರರ ಜನತೆ ತಿಗಣೆಗಳು, ಚಿಗಟಗಳೂ ವಾಸಿಸುತ್ತವೆ. 1970 ರಲ್ಲಿ ಹತ್ತು ದಿವಸಗಳ ಪಾದಯಾತ್ರೆ ಹೋಗುವಾಗ ಎರಡನೆಯ ರಾತ್ರಿ ನಾಗಸಂಪಿಗೆ ನಾನು ತೋಟದಲ್ಲಿ ಉಳಿಯಬೇಕಾಯಿತು. ತಲೆ ಕೆಳಗಿಟ್ಟ ಐದು ನಿಮಿಷಗಳಲ್ಲಿಯೇ ಮೇಲೆದ್ದ ದಿವಂಗತ ಎ. ಕೆ. ನಾರಾಯಣರು ನನ್ನನ್ನು ಎಬ್ಬಿಸಿದರು. ದೀಪ ಹಚ್ಚಿ ಮಲಗಿದ್ದ ಚಾಪೆಯನ್ನು ಮೇಲೆತ್ತಿದರು. ಒಂದು ಅಪೂರ್ವವಾದ ದೃಶ್ಯ ಹುರುಳಿಕಾಳು ಗಾತ್ರದ, ಅದಕ್ಕಿಂತಲೂ ದೊಡ್ಡ ಸೈಜಿನ ನೂರಾರು ತಿಗಣೆಗಳು ಹರಿದಾಡುವ ದೃಶ್ಯ. ಅಲ್ಲಿಗೆ ಮುಗಿಯಿತು ನನ್ನ ನಿದ್ದೆ. ಆದರೆ ಮೊನ್ನೆ ಬಲ್ಲಟ್ಟ ಎಸ್ಟೇಟಿನಲ್ಲಿ ನಾವು ಮಲಗಿದ್ದ ಎಂ. ಕೆ. ಸುಬ್ರಾಯ ಮೇಸ್ತ್ರಿಯವರ ಮನೆಯಲ್ಲಿ ತಿಗಣೆಗಳಿರಲಿಲ್ಲ.

ಹಿಂದೆ ಒಮ್ಮೆ ಗುಮ್ಮನ ಕಾನು ಟೀ ತೋಟದಲ್ಲಿ ದಿವಂಗತ ಕರ್ಪಸ್ ಕುಟ್ಟಿ ಮೇಸ್ತ್ರಿಯವರ ಮನೆಯಲ್ಲಿ—ಇದು ಸ್ಟ್ಯಾಂಡರ್ಡ್ ಟೈಪ್ ಮನೆ. ವಿದ್ಯು

ಚ್ಛಕ್ತಿ ದೀಪ ಇದೆ. ರಾತ್ರಿ ಸಿದ್ದೆ ಮಾಡುತ್ತಿದ್ದಾಗ ರಾತ್ರಿ ನೋವಿನಿಂದ ಎಚ್ಚರವಾಯಿತು. ಚಿಮುಟಗಳಿಂದ ಹಲವು ಕಡೆ ಚರ್ಮವನ್ನು ಕೀಳುವ ನೋವು. ಕರ್ಪುರಂಕುಟ್ಟೆಯವರನ್ನು ಎಬ್ಬಿಸಿದೆ. ಚಿಗುಟಗಳು ಕಚ್ಚುತ್ತಿವೆ ಎಂದು ಅವರು ಹೇಳಿದರು. ಚಿಗುಟದ ಕಡಿತದ ಮೊದಲ ಅನುಭವ ನನಗೆ.

ತೋಟಗಳಲ್ಲಿ ಕಾರ್ಮಿಕರ ಜೀವನ ಯಾತನಾಮಯದುದು. ಆದರೆ ಇದಕ್ಕೆ ಅಪವಾದಗಳಿಲ್ಲವೆಂದಲ್ಲ.

ಇಂದು ಮೂರು ಜಿಲ್ಲೆಗಳಲ್ಲಿ ನಲವತ್ತಕ್ಕಿಂತಲೂ ಹೆಚ್ಚು ತೋಟ ಕಾರ್ಮಿಕರ ಸಂಘಗಳಿವೆ.

ಅಂದಿನ ಕಾಲದಲ್ಲಿ ಪ್ಲಾಂಟೇಷನ್ ಪ್ರದೇಶದಲ್ಲಿ ಶಾಲೆಗಳೇ ಇರಲಿಲ್ಲವೆಂದರೆ ತಪ್ಪಾಗಲಾರದು. ಇಂದು ಚಿಕ್ಕಮಗಳೂರು ತಾಲ್ಲೂಕಿನ ಬಾಬಾಬುಡನ್ ಗಿರಿಯ ಮೇಲೆಯೇ ಅತ್ತಿಗುಂಡಿ, ಮಹಲ್, ಕೆಸವಿನಮನೆ, ಉಲುವತ್ತಿಗಳಲ್ಲಿ ಪ್ರಾಥಮಿಕ ಶಾಲೆಗಳಿವೆ,

ಆದರೆ ಆಸ್ಪತ್ರೆಗಳ ವಿಷಯದಲ್ಲಿ ಈ ಮಾತು ಹೇಳಲಾಗದು. ಮಲೇರಿಯ ಹೋಗಿದ್ದರೂ ಕಾಯಿಲೆ ಕಸಾಲೆಗಳೇನೂ ಕಡಿಮೆಯಾಗಿಲ್ಲ. ಪ್ಲಾಂಟೇಷನ್ ಲೇಬರ್ ರೂಲ್ಸ್ ಪ್ರಕಾರ ಇಂದಿಗೂ ಸಹ ಗ್ರೂಪ್ ಆಸ್ಪತ್ರೆಗಳನ್ನು, ಗಾರ್ಡನ್ ಆಸ್ಪತ್ರೆಗಳನ್ನು, ಡಿಸ್ಪೆನ್ಸರಿಗಳನ್ನು ಕಟ್ಟಿರುವುದಿಲ್ಲ.

ಕಾಲು ಶತಮಾನದ ಹಿಂದೆ ಕೊಡಗಿನಲ್ಲಿ ಒಂದು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ನಾಲ್ಕು ತೋಟ ಕಾರ್ಮಿಕರ ಮತ್ತು ಸಿಬ್ಬಂದಿಯ ಸಂಘಗಳಿದ್ದುವು. ಬೆಳೆಯುತ್ತಿದ್ದ ತೋಟ ಕಾರ್ಮಿಕರ ಒಗ್ಗಟ್ಟನ್ನು ಒಡೆಯುವಲ್ಲಿ ಪ್ಲಾಂಟರ್‌ಗಳು ಯಶಸ್ವಿಯಾಗಿದ್ದಾರೆ. ಇಂದು ಮೂರೂ ಜಿಲ್ಲೆಗಳಲ್ಲಿ ನಲವತ್ತಕ್ಕಿಂತಲೂ ಹೆಚ್ಚು ತೋಟ ಕಾರ್ಮಿಕರ ಸಂಘಗಳಿವೆ.

ಪ್ಲಾಂಟೇಷನ್ ಕೆಲಸಗಾರರ ಶೋಷಣೆ ಮುಂದುವರೆದಿದೆ, ದಬ್ಬಾಳಿಕೆ ಕಡಿಮೆಯಾಗುತ್ತಾ ಬಂದಿದೆ. ಅವರ ಸಂಘಟನೆಗೆ ಹಿಂದಿದ್ದ ಅನುಕೂಲ ಇಂದಿಲ್ಲ, ಹಿಂದಿದ್ದ ಅನಾನುಕೂಲವೂ ಇಂದಿಲ್ಲ, ಬದಲಾಗುತ್ತಾ ಬಂದಿರುವ ಪರಿಸ್ಥಿತಿ ಹೊಸ ಸಮಸ್ಯೆಗಳನ್ನು ಹುಟ್ಟಿಸಿದೆ.

○

ಕಾಫಿ ತೋಟಗಳಲ್ಲಿ ಕಾರ್ಮಿಕರು

ಮೈಸೂರಿನ ಕಾಫಿ ತೋಟಗಳಲ್ಲಿ 1964-65 ರಲ್ಲಿ ಕೆಲಸಮಾಡುತ್ತಿದ್ದ ದಿನದ ಸರಾಸರಿ ಆಳುಗಳ ಸಂಖ್ಯೆ ಹೀಗಿತ್ತು :

ಜಿಲ್ಲೆ	ತೋಟದಲ್ಲಿಯೇ ವಾಸವಿದ್ದ ಖಾಯಂ ಆಳುಗಳು	ತೋಟದ ಹೊರಗಡೆ ವಾಸವಿದ್ದು ತೋಟದಲ್ಲಿ ಕೆಲಸ ಮಾಡುತ್ತಿದ್ದ ಖಾಯಂ ಆಳುಗಳು	ಕೆಲಸವಿದ್ದಾಗ ಮಾತ್ರ ಬಂದು ದುಡಿಯುವ ಆಳುಗಳು	ಒಟ್ಟು
ಚಿಕ್ಕಮಗಳೂರು	46,307	12,033	15,012	73,352
ಹಾಸನ	11,656	1,633	5,046	18,335
ಕೊಡಗು	29,160	27,889	14,899	71,947
ಮೈಸೂರು	531	119	30	680
ಶಿವಮೊಗ್ಗ	39	22	64	125
ದಕ್ಷಿಣ ಕನ್ನಡ	235	—	—	235
ಇಡೀ ಮೈಸೂರಿನಲ್ಲಿ	87,928	41,695	35,051	1,64,674

ಇವರಲ್ಲಿ ಗಂಡಸರು ಶೇ: ಸುಮಾರು 50, ಹೆಂಗಸರು 44 ಮತ್ತು ಮಕ್ಕಳು 6.

ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಕಾಫಿ ತೋಟಗಳಲ್ಲಿ 1974-75 ರಲ್ಲಿ ಕೆಲಸ ಮಾಡುತ್ತಿದ್ದ ಸರಾಸರಿ ಆಳುಗಳ ಸಂಖ್ಯೆ ದಿನಾ 2,31,208.

ಪ್ಲಾಂಟೇಷನ್‌ಗಳ ಆರಂಭ

1856ರಲ್ಲಿ ಇಡೀಮೈಸೂರು ಪ್ರಾಂತದಲ್ಲಿ ಇದ್ದ ಏಳು ಜನ ಪರಂಗಿ ತೋಟಗಾರರ ಸಂಖ್ಯೆ 1890ರಲ್ಲಿ 662ಕ್ಕೆ ಏರಿದ ವಿಷಯ ಆಗಿನ ದಿನವಾರು ಎಲಿಯಟನಿಗೆ ಒದಗಿಸಿದ ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಈ 662 ಪರಂಗಿಯವರಿಗೆ ಸೇರಿದ ತೋಟಗಳ ವಿಸ್ತೀರ್ಣ 50,000 ಎಕರೆಗಳಷ್ಟಿತ್ತು. ಸ್ಥಳದ ತೋಟಗಾರರಿಗೆ 1891ರಲ್ಲಿ ಇದ್ದ ತೋಟಗಳ ಸಂಖ್ಯೆ 27,180 ಇದ್ದು, ಆ ತೋಟಗಳ ವಿಸ್ತೀರ್ಣ 96,814 ಎಕರೆಗಳಷ್ಟಿತ್ತು. ಎಲ್ಲಾ ತೋಟಗಾರರಿಗೆ ಸೇರಿದ ವಿಸ್ತೀರ್ಣ 146,676 ಎಕರೆಗಳು.

"ಮಾಡರ್ನ್ ಟೈಮ್ಸ್", "ಸಿಟಿ ಲೈಟ್", "ದಿ ಗ್ರೇಟ್ ಡಿಕ್ಟೇಟರ್" ಮೊದಲಾದ ಚಿತ್ರಗಳ ಸರಮಾಲೆಯ ಚಾರ್ಲಿ ಚಾಪ್ಲಿನ್ನನ ಹೆಸರು ಯಾರಿಗೆ ಗೊತ್ತಿಲ್ಲ. ನಗೆಯ ಮೂಲಕವೇ ಬದುಕಿನ ಹಿಂದೆ ಅಡಗಿರುವ ಕಣ್ಣೀರಿನ ಕಡಲನ್ನು ಬಿಚ್ಚಿ ತೋರಿಸಿದ, ಈ ಮಹಾನ್ ನಟ.

ಈ ಕಣ್ಣೀರಿಗೆ, ಎರಡನೇ ಮಹಾಯುದ್ಧದ ಸಮಯದಲ್ಲಿ ಜಗತ್ತಿನೆಲ್ಲಾ ಜನರ ಕಣ್ಣೀರಿಗೆ ಕಾರಣವಾದ ಹಿಟ್ಲರ್ ಎಂಬ ಮಾನವ ರೂಪಿ ರಕ್ಕಸನ ವಿರುದ್ಧ ಚಾಪ್ಲಿನ್ ಸಿಡಿದೆದ್ದದ್ದರಲ್ಲಿ ಏನಾಶ್ಚರ್ಯ. ಇಂದು ಮತ್ತೊಂದು ರಾಕ್ಷಸ ಶಕ್ತಿ ಇಡೀ ಜಗತ್ತನ್ನೇ ಕಬಳಿಸಲು ಹೊಂಚು ಹಾಕುತ್ತಿರುವಾಗ ಚಾಪ್ಲಿನ್ ಗ್ರೇಟ್ ಡಿಕ್ಟೇಟರ್ ಚಿತ್ರದ ಕೊನೆಯ ಸಂದೇಶವನ್ನು ನೆನಪಿಸಿಕೊಳ್ಳೋಣ.

ನಿರಂಕುಶ ಪ್ರಭುಗಳು ಸಾಯುತ್ತಾರೆ ಮಾನವದ್ವೇಷ ಅಳಿಯುತ್ತದೆ

★ ಚಾರ್ಲಿ ಚಾಪ್ಲಿನ್

★ ಅನು : ರಂಗಾರೆಡ್ಡಿ ಕೋಡಿರಾಂಪುರ

"ದಯವಿಟ್ಟು ಕ್ಷಮಿಸಿ, ನಾನು ಸಾಮ್ರಾಜ್ಯಾಧಿಪತಿಯಾಗಿ ಮೆರೆಯಲು ಇಷ್ಟಪಟ್ಟಿಲ್ಲ. ನಾನು ಯಾರನ್ನು ಆಳಲೂ, ಯಾವ ದೇಶವನ್ನು ಆಕ್ರಮಿಸಲೂ ಇಷ್ಟಪಡುವುದಿಲ್ಲ. ಉತ್ತಮ ವರ್ಗಕ್ಕೆ ಸೇರಿದವರಾಗಲೀ, ಶ್ವೇತವರ್ಣದವರಾಗಲೀ ಕಪ್ಪು ವರ್ಣದವರಾಗಲೀ, ಅಥವಾ ಜ್ಯೂಗಳೇ ಆಗಲೀ—ಯಾರಿಗೇ ಆಗಲಿ ನನ್ನ ಕೈಲಾದಷ್ಟು ಸಹಾಯ ಮಾಡಬಯಸುತ್ತೇನೆ.

ಪರಸ್ಪರ ಸಹಾಯ ಮಾಡುವುದೇ ನಮ್ಮ ಗುರಿ. ಹಾಗೆ ಮಾಡುವುದರಿಂದಲೇ ನಾವು ಮನುಷ್ಯರೆನಿಸಿಕೊಳ್ಳುತ್ತೇವೆ. ಪರಸ್ಪರರ ಸಂತೋಷದ ಮೇಲೆ ನಮ್ಮ ಬದುಕು ನಿಂತಿದೆಯೇ ಹೊರತು, ಪರಸ್ಪರರ ದುಃಖದ ಮೇಲಲ್ಲ. ನಾವು ಒಬ್ಬರನ್ನೊಬ್ಬರು ದ್ವೇಷಿಸುವುದರಿಂದಲೂ, ಕೀಳಾಗಿ ಕಾಣುವುದರಿಂದಲೂ, ಮಾನವ ಕುಲಕ್ಕೆ ಒಳಿತಾಗುವುದಿಲ್ಲ. ಈ ಜಗತ್ತಿನಲ್ಲಿ ಎಲ್ಲರಿಗೂ ಸ್ಥಾನವಿದೆ. ಸಮೃದ್ಧಿಯೂ ಕರುಣಾಮಯಿಯೂ ಆಗಿರುವ ಈ ಭೂಮಿ ಎಲ್ಲರಿಗೂ ಆಶ್ರಯ ನೀಡುವಂಥದು.

ನಮ್ಮ ಜೀವನವು ಸೌಂದರ್ಯದಾಯಕವೂ ಸ್ವಾತಂತ್ರ್ಯಪೂರ್ಣವೂ ಆಗಲು ಸಾಧ್ಯ. ಆದರೆ ನಾವು ದಾರಿ ತಪ್ಪಿದ್ದೇವೆ. ಮನುಷ್ಯನ ಮನಸ್ಸು ದುರಾಸೆಯ ವಿಷದಿಂದ ಹಾಳಾಗಿದೆ. ಜಗತ್ತನ್ನು ನಮ್ಮ ದ್ವೇಷಪೂರಿತ ಮನಸ್ಸಿನಿಂದ ಛಿದ್ರಗೊಳಿಸಿ ಬೇಲಿ ಹಾಕಿಕೊಂಡಿದ್ದೇವೆ. ರಕ್ತಪಾತ ಮತ್ತು ದುಃಖದ ಮಡುವನ್ನಾಗಿ ಈ ಜಗತ್ತನ್ನು ಮಾರ್ಪಡಿಸಿದ್ದೇವೆ. ಜಗತ್ತು ವೇಗವಾಗಿ ಮುಂದುವರಿಯುತ್ತಿದೆ. ಆದರೆ ನಾವು ಸಂಕುಚಿತಗೊಳ್ಳುತ್ತಿದ್ದೇವೆ. ಯಾವ ಯಂತ್ರ ನಮ್ಮ ಬದುಕನ್ನು ಸಮೃದ್ಧಗೊಳಿಸಬೇಕಾಗಿತ್ತೋ, ಅದು ನಮ್ಮ ಜೀವನವನ್ನು ಬರಡಾಗಿಸಿದೆ. ನಮ್ಮ ಜ್ಞಾನ ಸಂಪತ್ತು ನಮ್ಮನ್ನು ಸಿನಿಕರನ್ನಾಗಿ ಮಾಡಿದೆ; ನಮ್ಮ ಬುದ್ಧಿವಂತಿಕೆ ನಮ್ಮನ್ನು ನಿರ್ದಯರನ್ನಾಗಿಯೂ, ಕ್ರೂರಿಗಳನ್ನಾಗಿಯೂ, ಮಾಡಿದೆ. ನಾವು ಬುದ್ಧಿವಂತರು, ಆದರೆ ಅಂತಃಕರಣ

ಹೀನರು. ನಮಗೆ ಯಂತ್ರಗಳಿಗಿಂತ ಮುಖ್ಯವಾಗಿ ಬೇಕಾಗಿರುವುದು ಮಾನವೀಯತೆ: ಬುದ್ಧಿವಂತಿಕೆಗಿಂತ ಸದ್ವರ್ತನೆ ಮತ್ತು ಅಂತಃಕರಣ. ಇವುಗಳಿಲ್ಲದಿದ್ದಲ್ಲಿ ಬದುಕು ಕ್ರೂರವಾಗುತ್ತದೆ ಹಾಗೂ ನಾಶವಾಗುತ್ತದೆ.

ರೇಡಿಯೋ ಮತ್ತು ಗಗನಯಾನ ನಮ್ಮನ್ನು ಪರಸ್ಪರ ಹತ್ತಿರಕ್ಕೆ ತಂದಿದೆ. ಇವುಗಳ ಅನ್ವೇಷಣೆಯೇ ಮಾನವ ಜನಾಂಗವೆಲ್ಲವನ್ನು ಒಂದುಗೂಡಿಸುವ ವಿಶ್ವ ಬಂಧುತ್ವದ ಸಂಕಲ್ಪ. ಅನಾಯಕರನ್ನು ಬಂಧಿಸುವ ಮತ್ತು ಚಿತ್ರಹಿಂಸೆಗೊಳಪಡಿಸುವ ವ್ಯವಸ್ಥೆಯೊಂದಕ್ಕೆ ಬಲಿಪಶುಗಳಾಗಿ ವಿಶ್ವದಾದ್ಯಂತ ಹರಡಿರುವ ಕೋಟ್ಯಾಂತರ ಪುಟ್ಟ ಪುಟ್ಟ ಮಕ್ಕಳಿಗೂ, ಹತಾಶರಾದ ಸ್ತ್ರೀ ಪುರುಷರಿಗೂ ಈಗಲೂ ನನ್ನ ಧ್ವನಿಯು ತಲುಪುತ್ತಿದೆ. ಕತ್ತೆತ್ತಿ ನನ್ನ ಧ್ವನಿಯನ್ನು ಆಲಿಸುತ್ತಿರುವ ಜನಗಳೇ "ನೀವು ಹತಾಶರಾಗಬೇಡಿ" ಎಂದು ಹೇಳುತ್ತೇನೆ. ಮಾನವ ಅಭ್ಯುದಯಕ್ಕೆ ಅಂಜುವ ಪ್ರೀತಿರಹಿತ ಮನುಷ್ಯನ ದುರಾಸೆಯ ಫಲವಾಗಿ ನಾವು ಇಂದು ಸಂಕಷ್ಟಗಳಿಗೆ ಒಳಗಾಗಿದ್ದೇವೆ. ನಿರಂಕುಶ ಪ್ರಭುಗಳು ಸಾಯುತ್ತಾರೆ; ಮಾನವ ದ್ವೇಷ ಅಳಿಯುತ್ತದೆ. ಜನಗಳಿಂದ ಇವರು ಕಿತ್ತುಕೊಂಡಿರುವ ಅಧಿಕಾರ ಜನಗಳಿಗೆ ಹಿಂತಿರುಗುತ್ತದೆ. ಮನುಷ್ಯನಿಗೆ ಸಾವಿರುವುದರಿಂದ ಸ್ವಾತಂತ್ರ್ಯಕ್ಕೆ ಚ್ಯುತಿಯಿಲ್ಲ.

"ಯೋಧರೆ! ನಿಮ್ಮನ್ನು ಗುಲಾಮರನ್ನಾಗಿಸುವ ನೀವು ಏನು ಯೋಚಿಸಬೇಕು, ಏನು ಭಾವನೆಗಳಿರಬೇಕು, ಏನು ಕೆಲಸಗಳನ್ನು ಮಾಡಬೇಕು ಎಂದು ನಿಮ್ಮ ಬದುಕನ್ನು ನಿಯಂತ್ರಿಸುವ, ನಿಮ್ಮನ್ನು ಹತಾಶರನ್ನಾಗಿ ಮಾಡುವ; ನಿಮ್ಮನ್ನು ಪಳಗಿಸುವ, ನಿಮ್ಮನ್ನು ಪಥ್ಯಗೊಳಿಸುವ, ಪಶುವಿನಂತೆ ಕಾಣುವ ಹಾಗೂ ಫಿರಂಗಿಗಳ ಮದ್ದಿನಂತೆ ಉಪಯೋಗಿಸುವ ಈ ಕ್ರೂರಿಗಳಿಗೆ ನಿಮ್ಮನ್ನು ಒಪ್ಪಿಸಿಕೊಳ್ಳಬೇಡಿ. ಯಂತ್ರ ಹೃದಯವನ್ನೂ, ಯಂತ್ರ ಮನಸ್ಸನ್ನೂ ಉಳ್ಳ ಅಸ್ವಾಭಾವಿಕವಾದ ಯಂತ್ರ ಮಾನವರಿಗೆ ನೀವು ಶರಣಾಗಬೇಡಿ. ನೀವು ಯಂತ್ರಗಳಲ್ಲ; ಮನುಷ್ಯರು. ನಿಮ್ಮ ಹೃದಯದಲ್ಲಿರುವುದು ಮಾನವ ಪ್ರೇಮ, ದ್ವೇಷ ಬಿಡಿ.

"ಯೋಧರೆ! ಗುಲಾಮಗಿರಿಗಾಗಿ ಹೊಡೆದಾಡಬೇಡಿ; ಸ್ವಾತಂತ್ರ್ಯಕ್ಕಾಗಿ ಹೋರಾಡಿ. ಸೈಂಟ್ ಲೂಕ್‌ನ ಹದಿನೇಳನೇ ಅಧ್ಯಾಯದಲ್ಲಿ ಬರೆದಿರುವಂತೆ ದೇವರ ರಾಜ್ಯ ಮನುಷ್ಯನೊಳಗಿದೆ, ಒಬ್ಬನೊಳಗಲ್ಲ, ಒಂದು ಗುಂಪಿನ ಮನುಷ್ಯನ್ನೊಳಗಲ್ಲ ಆದರೆ ಎಲ್ಲ ಮನುಷ್ಯರ ಅಂತರಾಳದಲ್ಲಿ ನಿಮ್ಮಲ್ಲಿ, ಯಂತ್ರಗಳನ್ನು ಸೃಷ್ಟಿಸುವ ಸಾಮರ್ಥ್ಯವಿದೆ. ಸಂತೋಷವನ್ನು ಸೃಷ್ಟಿಸುವ ಸಾಮರ್ಥ್ಯವಿದೆ ಬದುಕನ್ನು ಸೌಂದರ್ಯಗೊಳಿಸುವ, ಸ್ವಾತಂತ್ರ್ಯ ಪೂರ್ಣಗೊಳಿಸುವ ಅದ್ಭುತ ಸಾಹಸ ಸೃಷ್ಟಿಸುವ ಸಾಮರ್ಥ್ಯವಿದೆ. ಈ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳೋಣ. ಜನತಂತ್ರದ ಹೆಸರಿನಲ್ಲಿ ಎಲ್ಲರೂ ಒಂದಾಗೋಣ. ಎಲ್ಲರಿಗೂ ಉದ್ಯೋಗದ ಅವಕಾಶ ಕಲ್ಪಿಸುವಂಥ ಹೊಸ ಜಗತ್ತಿನ-ಯುವ ಜನಾಂಗಕ್ಕೆ ಭವಿಷ್ಯವನ್ನು ಇಳಿ ವಯಸ್ಸಿನವರಿಗೆಭದ್ರತೆಯನ್ನು ಕೊಡುವ ಗೌರವಯುತ ಹೊಸ ಜಗತ್ತಿನ ಸೃಷ್ಟಿಗಾಗಿ ಹೋರಾಡೋಣ.

"ಈ ವಾಗ್ದಾನಗಳಿಂದಲೇ ಕಟುಕರು ಅಧಿಕಾರಕ್ಕೇರಿದ್ದಾರೆ. ಆದರೆ ಅವರು ಭ್ರಷ್ಟರು. ಆ ವಾಗ್ದಾನವನ್ನು ಅವರು ಎಂದೆಂಗೂ ನೆರವೇರಿಸುವುದಿಲ್ಲ. ನಿರಂಕುಶ ಪ್ರಭುಗಳು ತಾವು ಸ್ವಾತಂತ್ರ್ಯ ಅನುಭವಿಸುತ್ತಾರೆ; ಆದರೆ ಜನ ಸಮುದಾಯವನ್ನು ಗುಲಾಮಗಿರಿಗೆ ತಳ್ಳುತ್ತಾರೆ. ಸಂಕುಚಿತ ರಾಷ್ಟ್ರೀಯ ಭಾವನೆ, ದ್ವೇಷ, ದುರಾಸೆ, ಅಸಹನೆಗಳಿಂದ ಪ್ರಪಂಚವನ್ನು ಮುಕ್ತಗೊಳಿಸುವ ಸಲುವಾಗಿ ಹೋರಾಡೋಣ. ಎಲ್ಲರಿಗೂ ಸಂತೋಷವನ್ನು ನೀಡಬಲ್ಲ ವಿಜ್ಞಾನ ಮತ್ತು ಪ್ರಗತಿಗೆ ಜಾಗವಿರುವ ವೈಚಾರಿಕ ಜಗತ್ತಿಗಾಗಿ ಹೋರಾಡೋಣ.

ಕೃಪೆ: ಸಮುದಾಯ ವಾರ್ತಾ ಪತ್ರ

"ಚಾರ್ಲಿ ಚಾಪ್ಲಿನ್"

'ದಿ ಗ್ರೇಟ್ ಡಿಕ್ಟೇಟರ್' ಯೂರೋಪಿನಾದ್ಯಂತ ವಿಶೇಷ ರೀತಿಯ ಪ್ರತಿಕ್ರಿಯೆಯನ್ನು ಉಂಟುಮಾಡಿದ ಕೆಲವೇ ಚಿತ್ರಗಳಲ್ಲಿ ಒಂದು. ಈ ಚಿತ್ರದ ಕೊನೆಯ ಸಂದೇಶವು ಕಮ್ಯೂನಿಸಮ್ ಪರವಾದ ಪ್ರಚಾರವೆಂದು ಹೀಗಳೆದ ಪತ್ರಿಕೆಗಳಿಗೇನೂ ಕಡಿಮೆಯಿಲ್ಲ. ಈ ಭಾಷಣಕ್ಕೆ ಮಿಶ್ರ ಪ್ರತಿಕ್ರಿಯೆಗಳು ಅಮೆರಿಕದಲ್ಲೂ ಯೂರೋಪಿನಲ್ಲೂ ಕಂಡು ಬಂದವು. ನ್ಯೂಯಾರ್ಕ್‌ನ ಡೈಲಿ ನ್ಯೂಸ್ ಪತ್ರಿಕೆಯಂತೂ ಚಾರ್ಲಿ ಚಾಪ್ಲಿನ್‌ನನ್ನು ಅಪರಾಧಿಯಂತೆ ಕಮ್ಯೂನಿಸ್ಟನೆಂದು ಬೆರಳು ಮಾಡಿ ತೋರಿಸಿತು. ಚಿತ್ರವು ಬಿಡುಗಡೆಯಾದಾಗ ಬಂದ ಈ ರೀತಿಯ ಮಿಶ್ರ ಪ್ರತಿಕ್ರಿಯೆಗಳಿಗಿಂತಲೂ ಈ ಚಿತ್ರವನ್ನು ತೆಗೆಯುವಲ್ಲಿ ಚಾಪ್ಲಿನ್‌ನನ್ನು ಧೃತಿಗೆಡಿಸುವಂತಹ ಹಲವಾರು ಸಂಗತಿಗಳೂ ಅಮೇರಿಕದಲ್ಲಿ ನಡೆದವು. ಅಮೇರಿಕ-ವಿರೋಧಿ ಚಟುವಟಿಕೆಗಳಿಗಾಗಿ ಬಂಧಿಸಬೇಕಾದ ವ್ಯಕ್ತಿಗಳ ಪಟ್ಟಿಯಲ್ಲಿ ಚಾಪ್ಲಿನ್‌ನ ಹೆಸರನ್ನು ಸೇರಿಸಲು ಮೆಕಾರ್ಥಿ ಮರೆಯಲಿಲ್ಲ. ಜೊತೆಗೆ ದಿ ಡಿಕ್ಟೇಟರ್ ಚಿತ್ರವನ್ನು ತೆಗೆಯುತ್ತಿದ್ದ ಸ್ಟುಡಿಯೋ ಮೇಲೆ ಬಾಂಬ್ ಹಾಕುವ ಬೆದರಿಕೆಯನ್ನು ಅಮೆರಿಕಾದಲ್ಲಿರುವ ಹಿಟ್ಲರ್‌ವಾದಿಗಳು ಹಾಕಿದ್ದರು. ಚಿತ್ರ ಸಿದ್ಧವಾಗುವುದಾದರೂ ಅದರ ಬಿಡುಗಡೆ ಸಮಾರಂಭದಲ್ಲಿ ಬಾಂಬ್ ಸ್ಫೋಟಿಸುವ ಅವರ ಸಂಚಿನ ಯೋಜನೆಗಳು ಚಾಪ್ಲಿನ್‌ಗೆ ತಿಳಿದು ಬಂದಿದ್ದವು. ಚಾಪ್ಲಿನ್ ತನ್ನ ನಿರ್ಧಾರವನ್ನು ಬದಲಿಸಲಿಲ್ಲ. ಸ್ನೇಹಿತರೂ ಧೈರ್ಯ ನೀಡಿದರು. ಎರಡನೇ ಮಹಾಯುದ್ಧದ ಬೆಂಕಿಯಲ್ಲಿ ಜಗತ್ತು ಬೇಯುತ್ತಿದ್ದ ಸಂದರ್ಭದಲ್ಲೂ 1940ರಲ್ಲಿ-ಚಾಪ್ಲಿನ್ ಸ್ಥೈರ್ಯಗೆಡದೆ ಈ ಚಿತ್ರ ನಿರ್ಮಿಸಿ ಹಿಟ್ಲರ್‌ವಾದಿಗಳಿಗೆ ಸವಾಲಾದ. ಅಮಾನುಷ ಸರ್ವಾಧಿಕಾರದ ವಿರುದ್ಧ ತನ್ನನ್ನು ಗುರುತಿಸಿಕೊಂಡ. ಇಡೀ ಚಿತ್ರದಲ್ಲಿ ಬಹುಮುಖ್ಯವಾದ ಕೊನೆಯ ಭಾಗವು ಎರಡನೇ ಮಹಾಯುದ್ಧದ ಭೀಕರ ಕ್ರೌರ್ಯಕ್ಕೆ ಬಲಿಯಾಗಿದ್ದ ಯೂರೋಪಿಗೆ ಸ್ಫೂರ್ತಿದಾಯಕ ಮಾನವೀಯ ಸಂದೇಶವಾಗಿ ಕಾಣುವುದೆಂದೂ, ಲಿಂಕನ್ನನ ಗೆಟ್ಟೀಸ್‌ಬರ್ಗ್ ಭಾಷಣದಷ್ಟೇ ಮಹತ್ವದೆಂದೂ ಹಾಲಿವುಡ್‌ನ ಮುಖ್ಯ ನಿರ್ದೇಶಕರಲ್ಲಿ ಒಬ್ಬನಾದ ಮೇಯೋ ಬರೆದ.

ಮಾನವೀಯತೆಯ ಬಗೆಗೆ, ಯುದ್ಧರಹಿತ ಜಗತ್ತಿನ ಬಗೆಗೆ ಚಾಪ್ಲಿನ್ ಎಂತಹ ಬದ್ಧತೆಯನ್ನು ಉಳ್ಳವನಾಗಿದ್ದ ಎಂಬುದು ಅವನ ದಿ ಡಿಕ್ಟೇಟರ್ ಚಿತ್ರದ ಕೊನೆಯ ಭಾಷಣವನ್ನು ಓದಿದರೆ ತಿಳಿಯುತ್ತದೆ.

—ಅನುವಾದಕ

ಹಿಂದಿನ ಮೈಸೂರು ಸಂಸ್ಥಾನದಲ್ಲಿದ್ದ ಕೋಲಾರ ಜಿಲ್ಲೆಯ ಮಾರಿಕುಪ್ಪಂ ಮತ್ತು ಊರಿಗಾಂ ಎಂಬ ಪ್ರದೇಶಗಳಲ್ಲಿ ಚಿನ್ನದ ಅದುರು ಹೇರಳವಾಗಿ ದೊರೆಯುತ್ತಿತ್ತು. ಭೂಮಿಯ ಮೇಲ್ಪದರದಿಂದ ಅದುರನ್ನು ಅಗೆದು ತೆಗೆಯಲಾಗುತ್ತಿತ್ತು. ಈ ಅಗೆತ 1880ನೇ ಇಸವಿಯಿಂದ ಪ್ರಾರಂಭವಾಯಿತು. ಬ್ರಿಟಿಷರ ವಸಾಹತು ಭಾರತದಲ್ಲಿ ಈ ಊರಿಗಾಂ ಮತ್ತು ಮಾರಿಕುಪ್ಪಂ ಪ್ರದೇಶಗಳ ಚಿನ್ನದ ಗಣಿಗಳ ಜಾನ್ ಟೇಲರ್ ಅಂಡ್ ಸನ್ಸ್ ಎಂಬ ಬಿಳಿಯ ದೊರೆಗಳ ಖಾಸಗೀ ಒಡೆತನದಲ್ಲಿತ್ತು. ಮೈಸೂರು ಸಂಸ್ಥಾನದಲ್ಲಿ ಆರಂಭಗೊಂಡ ಈ ಗಣಿಯಲ್ಲಿ ಸೂಪರ್‌ವೈಸರ್‌ಗಳು, ಇಂಜಿನಿಯರುಗಳು ಮತ್ತು ಇತರ ಮೇಲಧಿಕಾರಿಗಳೆಲ್ಲರೂ ಬಿಳಿಯರಾಗಿದ್ದರು. ಗಣಿಯೊಳಕ್ಕೆ ಇಳಿದು ಜೀವದ ಹಂಗು ತೊರೆದು ಬಂಗಾರವನ್ನು ಹೊರ ತೆಗೆಯುವ ಕಾರ್ಮಿಕರು ಮದರಾಸ್ ಪ್ರಾಂತ್ಯದ ಉತ್ತರ ಆರ್ಕಾಟ್, ಸೇಲಂ, ಧರ್ಮಪುರಿ ಮತ್ತು ಮಲಬಾರ್ ಪ್ರಾಂತ್ಯಗಳಿಂದ ಬಂದವರು. ವಿದ್ಯಾಭ್ಯಾಸವಾಗಲೀ, ಸ್ವಂತ ಆಸ್ತಿಯಾಗಲೀ, ದುಡಿಯುವ ಯಾವುದೇ ಉದ್ಯೋಗವಾಗಲೀ ಇಲ್ಲದ ಕಡುಬಡವ ಕಾರ್ಮಿಕರಿವರು. ಹಲವಾರು ವರ್ಷಗಳ ನಂತರ ಸುತ್ತಮುತ್ತಲ ಹಳ್ಳಿಗಳಾದ ಬೂದಿಕೋಟೆ, ಕಾಮಸಂದ್ರ, ಗುಡಿಸಲ್ಲಿ, ಬಿಸನಾಥಂ ಮುಂತಾದ ಪ್ರದೇಶಗಳಿಂದ ಕಾರ್ಮಿಕರು ಬಂದು ಸೇರಿದರು.

ಕೆ. ಜಿ. ಎಫ್.ನ ಕಾರ್ಮಿಕ ಚಳುವಳಿ

ಕಮ್ಯುನಿಸ್ಟರ ಪಾತ್ರ

ಬಂಗಾರದ ಗಣಿಗಳಲ್ಲಿ ಭೂಗರ್ಭವನ್ನೂ ಹೊಕ್ಕು ದೇಶಕ್ಕೆಲ್ಲಾ ಚಿನ್ನ ನೀಡುವ ಕೆ.ಜಿ.ಎಫ್. ಕಾರ್ಮಿಕರ ಚಳುವಳಿಯ ಇತಿಹಾಸ ಕರ್ನಾಟಕದ ಕಾರ್ಮಿಕ ಚಳುವಳಿ, ಹಾಗೂ ಸ್ವಾತಂತ್ರ್ಯ ಚಳುವಳಿಗೊಂದು ಅಪೂರ್ವ ಕೊಡುಗೆ.

ಈ ಚಳುವಳಿಯ ಬಗ್ಗೆ ಕಾ|| ಅಚ್ಯುತ ವಿವರವಾದ ಮಾಹಿತಿಯನ್ನು ಶ್ರಮವಹಿಸಿ ಕಲೆ ಹಾಕಿದ್ದಾರೆ.

ಕಾರ್ಮಿಕರು ದಿನಕ್ಕೆ 10ರಿಂದ 12ಗಂಟೆಗಳ ಕಾಲ ಅವಿರತವಾಗಿ ಜೀವದ ಹಂಗು ತೊರೆದು ಭೂಗರ್ಭದೊಳಗೆ ದುಡಿಯಬೇಕಿತ್ತು. ಕಾರ್ಮಿಕರ ವಾಸಕ್ಕೆ ಎಂಟು ಅಡಿ ಚಚ್ಚೌಕದ ಬಿದಿರಿನ ತಟ್ಟೆಗಳ ಗೋಡೆಗಳಿರುವ ಗುಡಿಸಲುಗಳು. ಆ ಗುಡಿಸಲುಗಳಲ್ಲಿ ಹೆಂಡತಿ, ಮಕ್ಕಳು, ವಯಸ್ಸಾದ ತಂದೆ-ತಾಯಿ ಎಲ್ಲರೂ ವಾಸಿಸಬೇಕಿತ್ತು. ಅಡಿಗೆ ಕೋಣೆ, ಸ್ನಾನದ ಮನೆ, ಮಲಗುವ ಕೋಣೆ ಎಲ್ಲವೂ ಈ ಎಂಟು ಅಡಿ ಚಚ್ಚೌಕದ ಕೋಣೆಯೇ ! ಕಾರ್ಮಿಕರನ್ನು ಕಾಂಟ್ರಾಕ್ಟ್ ಪದ್ಧತಿಯ ಮೂಲಕ ನೇಮಿಸಿಕೊಳ್ಳಲಾಗುತ್ತಿತ್ತು. ಬಿಳಿಯ ದೊರೆಗಳು ತಮ್ಮ ಮರ್ಜಿಗೆ ತಕ್ಕಂತೆ ಕಾರ್ಮಿಕರನ್ನು ದುಡಿಸುತ್ತಿದ್ದರು. ಈ ಅತೀ ಕಷ್ಟಕರವಾದ ಕೆಲಸವನ್ನು ಬಿಟ್ಟು ಓಡಿಹೋಗಲು ಕಾರ್ಮಿಕರು ಪ್ರಯತ್ನಿಸಿದುದಿದೆ. ಅದಕ್ಕಾಗಿ ಅವರ ಹತ್ತು ಬೆರಳುಗಳ ಗುರುತುಗಳನ್ನು ತೆಗೆದಿಡುತ್ತಿದ್ದರಲ್ಲದೆ ಅವರ ಕೈಗೆ ಕೆ ಜಿ ಎಂ ಎಲ್ ಎಂದು ಬರೆದಿರುವ ಗುರುತಿನ ಬಿಲ್ಲೆಗಳನ್ನು ಕಟ್ಟಲಾಗುತ್ತಿತ್ತು. ಕಾರ್ಮಿಕರು ಎಲ್ಲಿ ಓಡಿಹೋದರೂ ಅವರನ್ನು ಹಿಡಿದು ತಂದು ದುಡಿಸಲು ಉಪಯೋಗವಾಗುತ್ತಿತ್ತು. ಗಣಿಯೊಳಗೆ ಕೆಲಸದ ಸ್ಥಳಗಳಲ್ಲಿ ಸುರಕ್ಷಿತ ವ್ಯವಸ್ಥೆ ಯಾವುದೂ ಇರಲಿಲ್ಲ. ಕೆಳಗೆ ಇಳಿದ ಕಾರ್ಮಿಕ ಮೇಲೆ ಬರುವನೋ ಇಲ್ಲವೋ ಹೇಳಲಾಗದು. ಯಾವ ಸಂದರ್ಭದಲ್ಲಿ ಗಣಿಯೊಳಗೆ ಮಣ್ಣು ಕುಸಿದು ಸಮಾಧಿಯಾಗುವರೋ ಹೇಳಲಾಗದು. ಒಟ್ಟಾರೆ ಬ್ರಿಟಿಷರ ಕೈ ಕೆಳಗೆ ಗುಲಾಮರಾಗಿ, ಜೀತಗಾರರಾಗಿ ಕಾರ್ಮಿಕರು ದುಡಿದರು. ದಬ್ಬಾಳಿಕೆಯನ್ನು ವಿರೋಧಿಸಿ ನಡೆದ ಚಿಕ್ಕಪುಟ್ಟ ಪ್ರತಿಭಟನೆಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಗುತ್ತಿತ್ತು.

ಕೆ.ಜಿ.ಎಫ್‌ನಲ್ಲಿ ಈ ಮೊದಲು ಅನೇಕ ಸಣ್ಣಪುಟ್ಟ ಹೋರಾಟಗಳು ನಡೆದಿದ್ದರೂ ಮೊದಲ ಮುಷ್ಕರ—ಅತಿ ದೊಡ್ಡ

ಪ್ರಮಾಣದ ಮುಷ್ಕರ 1931 ರಲ್ಲಿ ನಡೆಯಿತು. 24 ದಿನಗಳ ಕಾಲ ನಡೆದು ಅಂದಿನ ಮೈಸೂರು ಸಂಸ್ಥಾನದ ದಿವಾನರೇ ಸ್ವತಃ ಕೆ.ಜಿ.ಎಫ್‌ಗೆ ಭೇಟಿ ಮಾಡಿ ಕಾರ್ಮಿಕರ ಅಹವಾಲುಗಳನ್ನು ಕೇಳಿ ಅವರ ಬೇಡಿಕೆಯನ್ನು ಮನ್ನಿಸಬೇಕಾಯಿತು.

1930 ಏಪ್ರಿಲ್ 7 ರಿಂದ ಆರಂಭವಾದ ಈ ಮುಷ್ಕರದ ಮುಖ್ಯ ಬೇಡಿಕೆ ಇಂದಿನ ಸಂದರ್ಭಕ್ಕೆ ಹೋಲಿಸಿದರೆ ವಿಚಿತ್ರವೆನ್ನುವಂತೆ ಕಾಣಬಹುದು. ಆಗ ಕಾರ್ಮಿಕರ ಹತ್ತು ಬೆರಳುಗಳ ಗುರುತನ್ನು ಆಡಳಿತ ವರ್ಗ ತೆಗೆದುಕೊಳ್ಳುತ್ತಿತ್ತು. ಇದು ಅವರನ್ನು ಖಾಯಂ ಕೆಲಸಗಾರರನ್ನಾಗಿ ಮಾಡಲು ಎಂಬ ಸುದ್ದಿಯೇ ಕಾರ್ಮಿಕರನ್ನು ಕಳವಳಕ್ಕೀಡುಮಾಡಿತ್ತು. ಅವರು ತಮ್ಮ ಹಳ್ಳಿಗಳನ್ನು ಬಿಟ್ಟು ಖಾಯಮ್ಮಾಗಿ ಗಣೀ ಕಾರ್ಮಿಕರಾಗಿ ಉಳಿಯಲು ಸಿದ್ಧರಿರಲಿಲ್ಲ. ಈ ಮುಷ್ಕರ ಅಂದಿನ ಬ್ರಿಟನ್ ಸರಕಾರದ ಮಂತ್ರಿಯ ಗಮನವನ್ನೂ ಸೆಳೆಯಿತು, ಎಂಬದೇ ದಿವಾನರ ಮಧ್ಯ ಪ್ರವೇಶಕ್ಕೂ ಕಾರಣವಾಯಿತು. ಅವರ ಕೈಗುರುತುಗಳನ್ನು ತೆಗೆದುಕೊಳ್ಳುವುದನ್ನು ಕೈಬಿಡಿ ಎಂಬ ದಿವಾನರ ಸಲಹೆಯ ಮೇಲೆ ಈ ಮುಷ್ಕರ ನಿಂತಿತು.

(ಆಧಾರ Dimensions of Socio Political change in Mysore 1918-1940 & ಪುಟ 110-111)

1938ರ ಹೋರಾಟ

1938 ರಲ್ಲಿ ಚಿನ್ನದ ಗಣಿಯಲ್ಲಿ ಆಗ ಕೆಲಸ ಮಾಡುತ್ತಿದ್ದ 28,000 ಮಂದಿ ಕಾರ್ಮಿಕರೂ ನಾವು ಗುರುತಿನ ಪಟ್ಟಿಯನ್ನು ಕಟ್ಟಿಕೊಳ್ಳಲಾರೆವು, ಕೂಲಿ ಜಾಸ್ತಿ ಮಾಡಿ, ನಮಗೆ ಯೂನಿಯನ್ ಕಟ್ಟಲು ಅವಕಾಶ ನೀಡಿ ಮುಂತಾದ ಬೇಡಿಗಳನ್ನಿಟ್ಟು ಭಾರೀ ಮುಷ್ಕರವನ್ನು ಆರಂಭಿಸಿದರು. ಇದು ಕಾರ್ಮಿಕರು ನಡೆಸಿದ ಭಾರೀ ಹೋರಾಟ. ಇದರ ನಾಯಕತ್ವವನ್ನು ಎ. ಟಿ. ಲಕ್ಷ್ಮಣ ಮೊದಲಿಯಾರ್, ಕೆ.ಸಿ. ಫಿಲಿಪ್ಸ್, ಪಿ.ಬಿ. ಮುನ್ನಯ್ಯ ಮತ್ತು ವಜ್ರವೇಲು ಚೆಟ್ಟಿ ವಹಿಸಿದ್ದರು. ಜಾನ್ ಟೇಲರ್ ಆಡಳಿತ ಅಸಂಖ್ಯಾತ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿತು. ಆ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಕಾಂ॥ ಪಿ. ರಾಮಮೂರ್ತಿ, ಕಾಂ॥ ಜೀವಾನಂದಂ, ಕಾ॥ ಕಲ್ಯಾಣ ಸುಂದರಂರವರನ್ನು ಭೇಟಿಯಾಗಿ ಹೋರಾಟಕ್ಕೆ ಮಾರ್ಗದರ್ಶನ ಪಡೆಯಲು ವಜ್ರವೇಲು ಚೆಟ್ಟಿ ಮದರಾಸಿಗೆ ಹೋದರು. ಈ ನಾಯಕರು ಶ್ರೀ ಪಿ. ಆರ್. ಕೆ ಶರ್ಮ ಎಂಬವರನ್ನು ಅವರು ಸೂಚಿಸಿದರು.

ಕಾರ್ಮಿಕ ಸಂಘದ ಆರಂಭ

ಕಾರ್ಮಿಕ ಸಂಘವನ್ನು ಆರಂಭಿಸಲು ತಯಾರಿ ಸಭೆಗಳು ನಡೆದವು. ಆಗ ಕೆ. ಜಿ. ಎಫ್. ಪ್ರದೇಶದೊಳಗೆ ಯಾವುದೆ ಸಭೆಗಳನ್ನು ನಡೆಸಲು ಅನುಮತಿ ಇರಲಿಲ್ಲ. ಆದುದರಿಂದ ಆಂಧ್ರ, ಮದರಾಸ್ ಮತ್ತು ಮೈಸೂರು ಪ್ರಾಂತ್ಯಗಳ ಗಡಿ ಪ್ರದೇಶದಲ್ಲಿರುವ ಬೂದಗೂರು ಎಂಬ ಹಳ್ಳಿಯ ಒಂದು ದೊಡ್ಡ ಹುಣಸೇ ಮರದ ಬುಡದಲ್ಲಿ ಮೊತ್ತ ಮೊದಲ ಸಭೆ ಸೇರಿತು. ಈ ಸಭೆಯಲ್ಲಿ ಕಾ॥ ಪಿ. ರಾಮಮೂರ್ತಿ, ಶ್ರೀ ವಿ. ವಿ. ಗಿರಿ ಮುಂತಾದ ಎ. ಐ. ಟಿ ಯು. ಸಿ. ಮುಖಂಡರು ಭಾಗವಹಿಸಿದ್ದರು. ಆ ಸಭೆಯಲ್ಲಿ ಕುಡುಗೋಲು, ಸುತ್ತಿಗೆ ಇರುವ ಕೆಂಬಾವುಟದ ಸಂಘವನ್ನು ಗಣಿಯಲ್ಲಿ ಕಟ್ಟಬೇಕೆಂದು ತೀರ್ಮಾನಿಸಲಾಯಿತು. ಕೆ. ಜಿ. ಎಫ್. ನಲ್ಲಿ ದೀರ್ಘಕಾಲ ಸಭೆಗಳಿಗೆ ಪ್ರತಿಬಂಧಕಾಜ್ಞೆ ಇದ್ದುದರಿಂದ ಮುಂದೆ ಹಲವಾರು ಸಲ ಇಲ್ಲೇ ಸಭೆಗಳನ್ನು ನಡೆಸಬೇಕಾಗಿ ಬಂತು. 1941ರಲ್ಲಿ ಶ್ರೀ ವಜ್ರವೇಲು ಚೆಟ್ಟಿ, ಎನ್. ಕೆ. ದೊರೆರಾಜ್, ಉತ್ತಿರಿನಾಥನ್, ಚಿತ್ತಿರೈ ದಶರಥನ್, ಆರೋಗ್ಯಸ್ವಾಮಿ, ಚಂದ್ರಹಾಸನ್, ದೊರೈರಾಜ್ ಮುಂತಾದವರು ಸೇರಿ ಮೈಸೂರು ಟ್ರೇಡ್ ಯೂನಿಯನ್ ಆಕ್ಟ್‌ನನ್ವಯ ಸಂಘವನ್ನು ರಿಜಿಸ್ಟರ್ ಮಾಡಿದರು. ಎಲ್ಲಾ ಗಣಿಗಳಿಗೂ ಸೇರಿ ಒಂದೇ ಯೂನಿಯನ್ ಇರಬೇಕೆಂದು ತೀರ್ಮಾನವಾಗಿತ್ತು. ಆದರೆ ಬಿಳಿಯ ದೊರೆಗಳು ಇದಕ್ಕೆ ಅನುಮತಿಸಲಿಲ್ಲ. ಆದುದರಿಂದ ಒಂದೊಂದು ಗಣಿಗೂ ಪ್ರತ್ಯೇಕ ಯೂನಿಯನ್‌ಗಳನ್ನು ಸಂಘಟಿಸಲಾಯಿತು.

1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಕಾರ್ಮಿಕರಿಗೆ ಶ್ರೀ ಶರ್ಮಾರವರ ಮೇಲೆ ತೀವ್ರ ಅಸಮಾಧಾನ ಉಂಟಾಯಿತು. ಅವರನ್ನು ಸಂಘದಿಂದ ತೆಗೆಯಬೇಕೆಂಬ ಬೇಡಿಕೆ ಬಂತು. ಆ ಸಮಯದಲ್ಲಿ ವಿ. ಡಿ. ಲಕ್ಷ್ಮಣ ಮೊದಲಿಯಾರ್, ಮ. ಷಣ್ಮುಗಂ ಎಂಬ ಕೆ.ಜಿ. ಎಫ್. ನಾಯಕರು ಕೆ. ಜಿ. ಎಫ್. ನಿಂದ ಗಡೀಪಾರಾಗಿ ಬೆಂಗಳೂರಿನಲ್ಲಿದ್ದರು. ಆಗ ಬೆಂಗಳೂರಿಗೆ ಬಂದಿದ್ದ ಕಾ॥ ಎಸ್.ಎಲ್. ಉಪಾಧ್ಯಾಯರನ್ನು ಅವರು ಸಂಧಿಸಿ ಕೆ. ಜಿ. ಎಫ್. ನ ಬಗ್ಗೆ ದೀರ್ಘ ಮಾತುಕತೆ ನಡೆಸಿ ಕೆ. ಜಿ. ಎಫ್. ನಿಂದ ಕೆಲವು ಕಾರ್ಮಿಕರನ್ನು ಬೆಂಗಳೂರಿಗೆ ಬರುವಂತೆ ಮಾಡಿ, ಕುಪ್ಪಂನಲ್ಲಿದ್ದ ವಜ್ರವೇಲು ಚೆಟ್ಟಿಯಾರ್‌ರವರನ್ನು ಸಂಧಿಸಿ ಯೋಜನೆ ಹಾಕಲಾಯಿತು. 1943 ರ ಆರಂಭದಲ್ಲಿ ಮೈಸೂರು ಮೈನ್ಸ್ ಯೂನಿಯನ್‌ಗೆ ಚುನಾವಣೆ ನಡೆಸಬೇಕಾಗಿ ಬಂದಾಗ ಎಲ್ಲರೂ ಸೇರಿ ವಜ್ರವೇಲು ಚೆಟ್ಟಿಯವರನ್ನು ಅಧ್ಯಕ್ಷ ಸ್ಥಾನಕ್ಕೆ ಸಲ್ಲಿಸುವ ತೀರ್ಮಾ

ನವಾಯಿತು. ಆದರೆ ಆ ಸಂದರ್ಭದಲ್ಲಿ ಚೆಟ್ಟಿಯಾರ್‌ರವರ ಬಂಧನವಾಗಿ ಅಧ್ಯಕ್ಷ ಸ್ಥಾನಕ್ಕೆ ಬೇರೆ ಯಾರನ್ನು ನಿಲ್ಲಿಸಬೇಕೆಂದು ಯೋಚನೆ ಮಾಡಲೂ ಸಮಿತಿ ಇಲ್ಲದಿದ್ದಾಗ ವಜ್ರವೇಲುರವರ ಜೊತೆಗಿದ್ದ ಕಾ॥ ವಿ. ಎಂ. ಗೋವಿಂದನ್‌ರವರ ಹೆಸರನ್ನು ಸೂಚಿಸಲಾಯಿತು. ಅವರು ಚುನಾವಣೆಯಲ್ಲಿ ಗೆದ್ದರು. ಕಾರ್ಮಿಕರು ಅದನ್ನು ಸಂತೋಷದಿಂದ ಸ್ವಾಗತಿಸಿದರು. ಅದರ ನಂತರ ಕೆ. ಜಿ. ಎಫ್. ನಲ್ಲಿ ವರ್ಗ ಹೋರಾಟದ ಧೋರಣೆಯ ನೇತೃತ್ವ ಬೆಳೆಯಲಾರಂಭವಾಯಿತು. ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಲು ಅಲ್ಲಿಂದ ಪ್ರಯತ್ನ ನಡೆಯಿತು. 1944 ರಲ್ಲಿ ವಜ್ರವೇಲು ಚೆಟ್ಟಿಯವರು ಜೈಲಿನಿಂದ ಬಿಡುಗಡೆಯಾಗಿ ಬಂದಮೇಲೆ ಪಕ್ಷದ ಸಮಿತಿಯನ್ನು ರಚಿಸಲಾಯಿತು.

1945 ರಲ್ಲಿ ಅಲ್ಲಿಯ ಚಳುವಳಿಯನ್ನು ಪರಿಣಾಮಕಾರಿಯಾಗಿ ಬೆಳೆಸಲು ಕರ್ನಾಟಕ ಪಾರ್ಟಿಯು ಕಾ॥ ಎಂ. ಸಿ. ನರಸಿಂಹನ್‌ರವರನ್ನು ಇಲ್ಲಿಗೆ ಕಳಿಸಿತು. ಆಮೇಲೆ ಕಾ॥ ಡಿ. ಆರ್. ಕೃಷ್ಣ ಎಂಬುವರನ್ನು ಕಳುಹಿಸಲಾಯಿತು.

1945ರ ಧೀರಹೋರಾಟದ ನಂತರ (ಬಾಕ್ಸ್ ನೋಡಿ) ಅಕ್ಟೋಬರ್ 1946ರ ದಕ್ಷಿಣ ಆಫ್ರಿಕಾದಿಂದ ಚಿನ್ನದ ಗಣಿಗೆ ಇಂಜಿನಿಯರಾಗಿ ಬಂದ ಮೌಲ್ಡನ್ ಎಂಬ ಬಿಳಿಯ ಅಧಿಕಾರಿಯನ್ನು ಇಲ್ಲಿಂದ ಹಿಂದಕ್ಕೆ ಓಡಿಸುವ ಘಟನೆ ನಡೆಯಿತು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರನ್ನು ಬ್ರಿಟಿಷರು ನಡೆಸಿಕೊಳ್ಳುತ್ತಿದ್ದ ರೀತಿಗೆ ಇದು ಪ್ರತಿಭಟನೆಯಾಗಿತ್ತು. ಆತ ಬಂದ ಕೆಲವೇ ದಿನಗಳಲ್ಲಿ ಕೆ. ಜಿ. ಎಫ್ ಬಿಟ್ಟು ಹೋಗಬೇಕಾಯಿತು. ಆಫ್ರಿಕಾಗೆ ಹೋಗುವುದಕ್ಕೆ ಮೊದಲು ಬೊಂಬಾಯಿಂದ ಆತ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಕಮ್ಯುನಿಸ್ಟರು ರಾಷ್ಟ್ರೀಯ ಸ್ವತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದಾರೆ. ಅವರಿಂದಾಗಿ ನಾನು ಕೆ. ಜಿ. ಎಫ್ ಬಿಡಬೇಕಾಯಿತೆಂದು ಹೇಳಿಕೆ ಕೊಟ್ಟ.

1948 ರಲ್ಲಿ ಕೇಂದ್ರ ಸರ್ಕಾರ ಕಮ್ಯೂನಿಸ್ಟ್ ಪಕ್ಷದ ಮೇಲೆ ಪ್ರಹಾರ ಆರಂಭಿಸಿತು. ದೇಶದಾದ್ಯಂತ ಕಮ್ಯೂನಿಸ್ಟ್ ಮುಖಂಡರನ್ನು ದಸ್ತಗಿರಿ ಮಾಡಿ ಕಮ್ಯೂನಿಸ್ಟ್ ಪಕ್ಷದ ಮೇಲೆ ಪ್ರತಿಬಂಧ ಹೇರಲಾಯಿತು. ಮೈಸೂರು ಪ್ರಾಂತ್ಯದಲ್ಲಿ ಮುಖ್ಯ ಮಂತ್ರಿಯಾಗಿ ಅಧಿಕಾರ ವಹಿಸಿದ ಶ್ರೀ ಚೆಂಗಲ್‌ರಾಯ ರೆಡ್ಡಿಯವರು 1948 ಏಪ್ರಿಲ್ ಒಂದನೇ ತಾರೀಖು ಕೆ. ಜಿ. ಎಫ್. ಗೆ ಬಂದರು. ಇಡೀ ಕೆ. ಜಿ. ಎಫ್. ನ ಕಾರ್ಮಿಕರು, ಯೂನಿಯನ್‌ಗಳು ಬಹಳ ವಿಜೃಂಭಣೆಯಿಂದ ಅವರನ್ನು ಬರಮಾಡಿಕೊಂಡಿತು. ಆದರೆ ಅದೇ ಕೆ. ಸಿ. ರೆಡ್ಡಿಯವರು ಏಪ್ರಿಲ್ 3ನೇ ತಾರೀಖು ಎಲ್ಲ ಕಮ್ಯೂನಿಸ್ಟ್ ಮುಖಂಡರನ್ನು ಸುಮಾರು 70 ಮಂದಿ ಮುಂಚೂಣಿಯ ಕಾರ್ಯಕರ್ತರನ್ನು ಬಂಧಿಸಲು ಆಜ್ಞೆ ಹೊರಡಿಸಿದರು. ಎಲ್ಲರನ್ನು ಬಂಧಿಸಿ ಸೆಂಟ್ರಲ್ ಜೇಲಿನಲ್ಲಿಡಲಾಯಿತು.

1949 ರಲ್ಲಿ ಎಲ್ಲ ಮುಖಂಡರನ್ನೂ ಕಾರ್ಯಕರ್ತರನ್ನೂ ಬಿಡುಗಡೆ ಮಾಡಿ ಗಡೀಪಾರು ಮಾಡಲಾಯಿತು. 70 ಮಂದಿ ಕಾರ್ಮಿಕರೂ ಕೆಲಸ ಕಳೆದುಕೊಂಡರು. 1951 ರವರೆಗೂ ಮುಖಂಡರಾರೂ ಕೆ. ಜಿ. ಎಫ್. ಗೆ ಬರಲು ಸಾಧ್ಯವಾಗಲಿಲ್ಲ. ಈ ಮಧ್ಯೆ ಯೂನಿಯನ್‌ಗೆ ನೇತೃತ್ವ ಕೊಡಲು ನಾಯಕರಾರೂ ಇರಲಿಲ್ಲ. ಆದುದರಿಂದ ಮೈಸೂರು ಮೈನ್ಸ್ ಲೇಬರ್ ಯೂನಿಯನ್ ಆನಂದರಾವ್ ಬೋಂಸ್ಲೆಯ ನಾಯಕತ್ವದಲ್ಲಿ ಸಮಾಜವಾದಿಗಳ ಕೈಗೆ ಹೋಯಿತು. ಚಾಂಪಿಯನ್ ಲೇಬರ್ ಅಸೋಸಿಯೇಷನ್ನಿನ ಕಣ್ಣನ್ ಎಂಬ ಕಾಂಗ್ರೆಸ್ಸಿಗರ ಕೈಗೆ ಹೋಯಿತು. ನಂದಿದುರ್ಗ, ಊರಿಗಾಂ ಇವೆಲ್ಲ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲೇ ಉಳಿಯಿತು. ಗಡಿಪಾರು ಮುಗಿದು ಕೆ. ಜಿ. ಎಫ್. ಗೆ ಕಮ್ಯೂನಿಸ್ಟ್ ಮುಖಂಡರು ಬಂದಾಗ ಎರಡು ಯೂನಿಯನ್‌ಗಳೂ ಕಮ್ಯೂನಿಸ್ಟರ ನೇತೃತ್ವ

1945 ರಲ್ಲಿ ಕೆಂಪು ಸ್ವಯಂಸೇವಕರು

1945 ರಲ್ಲಿ ಕಾರ್ಮಿಕರ ಬಹಳ ವರ್ಷಗಳ ಬೇಡಿಕೆಗಳಾದ ವಸತಿ, ಬೆಳಕು, ಕೂಲಿಯ ಹೆಚ್ಚಳ ಮುಂತಾದ ಸುಮಾರು 26 ಬೇಡಿಕೆಗಳನ್ನಿಟ್ಟು ಕಾ॥ ವಾಸನ್ ಮತ್ತು ಕಾ॥ ಗೋವಿಂದನ್ ನಾಯಕತ್ವದಲ್ಲಿ ಮೈನ್ಸ್‌ನ ಎಲ್ಲಾ ಯೂನಿಯನ್‌ಗಳನ್ನು ಒಗ್ಗೂಡಿಸಿ ಮುಷ್ಕರಕ್ಕೆ ಕರೆ ಕೊಡಲಾಯಿತು. ಇದನ್ನು ತಿಳಿದಕೂಡಲೇ ಆಗಿನ ಲೇಬರ್ ಕಮೀಷನರ್ ಕಾರ್ಮಿಕರಿಂದ ಮುಷ್ಕರದ ಪರ ವಿರೋಧ ಅಭಿಪ್ರಾಯ ಮತ ನಡೆಸಬೇಕೆಂದು ಹೇಳಿದರು. 1945 ಡಿಸೆಂಬರ್ ತಿಂಗಳಲ್ಲಿ ಅಭಿಪ್ರಾಯ ಮತ ನಡೆಯಿತು. ಒಟ್ಟು 28,000 ಮಂದಿ ಕಾರ್ಮಿಕರಲ್ಲಿ ಬರೇ 76 ಮತಗಳು ಮುಷ್ಕರದ ವಿರುದ್ಧ ಬಿದ್ದವು. 1946 ಜನವರಿ 7 ರಂದು ಮುಷ್ಕರ ಆರಂಭಗೊಂಡು ಮಾರ್ಚ್ 22 ರಂದು ಮುಕ್ತಾಯವಾಯಿತು. ಒಟ್ಟು 26 ಬೇಡಿಕೆಗಳಲ್ಲಿ 18 ಬೇಡಿಕೆಗಳು ಕೂಡಲೇ ಈಡೇರಿದವು. ಈ ಮುಷ್ಕರ ಕೆಂಬಾವುಟದ ಘನತೆಯನ್ನು ಹೆಚ್ಚಿಸಿತು. ಆಗ ಯೂನಿಯನ್‌ಗೆ ಕೆಂಪು ಸಮವಸ್ತ್ರಧಾರಿ ಸ್ವಯಂಸೇವಕರ ಸಂಘಟನೆಗಳಿದ್ದುವು. ಅದಕ್ಕೆ ಕಮಾಂಡರ್‌ಗಳಿದ್ದರು. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಈ ಕೆಂಪು ಸ್ವಯಂಸೇವಕರು ಮಹತ್ವದ ಪಾತ್ರವಹಿಸಿದ್ದಾರೆ.

ಕೊಲೆಯ ಸಂಚು

ಗಣಿ ಕಾರ್ಮಿಕರ ಸಮರಶೀಲತೆಯಿಂದ ಕಂಗಾಲಾದ ಬ್ರಿಟಿಷ್ ದೊರೆಗಳು ಆಗ ಇಲ್ಲಿದ್ದ ಶೆಡ್ಯೂಲ್ಡ್ ಕಾಸ್ಟ್ ಫೆಡರೇಶನ್ ನಾಯಕರೊಂದಿಗೆ ಗುಪ್ತ ಸಮಾಲೋಚನೆ ನಡೆಸಿ ಕಮ್ಯುನಿಸ್ಟರ ವಿರುದ್ಧ ಗಲಭೆ ಎಬ್ಬಿಸಲು ಪ್ರಚೋದಿಸಿದರು. ಕಾ॥ ಕೆ. ಎಸ್. ವಾಸನ್‌ರವರನ್ನು ಕೊಲೆ ಮಾಡಲು ಸಂಚು ಹೂಡಿ ನವೆಂಬರ್ 3,1946 ರಂದು ಕಾ॥ ವಾಸನ್ ಮೇಲೆ ಹಲ್ಲೆ ನಡೆಯಿತು. ಕಾ॥ ವಾಸನ್ ಮತ್ತು ಇನ್ನೊಬ್ಬ ಸಂಗಾತಿ ತೀವ್ರವಾಗಿ ಗಾಯಗೊಂಡರು. ಈ ವಿಷಯ ತಿಳಿದ ಕೂಡಲೇ ಸಾವಿರಾರು ಮಂದಿ ಕಾರ್ಮಿಕರು ಕಾ॥ ವಾಸನ್‌ರವರನ್ನು ನೋಡಲು ಧಾವಿಸಿ ಬಂದರು. ಮರುದಿನ ನವೆಂಬರ್ 4, 1946 ರಂದು ಗಣಿಯೊಳಗೆ ಕೆಲಸಕ್ಕೆ ಹೋಗಿದ್ದ ಕಾರ್ಮಿಕರಿಗೆ ಮತ್ತೆ ವಾಸನ್ ಮನೆಯ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ವದಂತಿ ಹಬ್ಬಿ ಇರುವೆಗಳ ಸಾಲಿನಂತೆ ಕಾರ್ಮಿಕರು ಸುರಂಗದಿಂದ ಹೊರಬಂದು ಕಾ॥ ವಾಸನ್‌ರವರನ್ನು ಕಾಣಲು ಬಂದರು. ಆಗ ಬ್ರಿಟಿಷರೊಂದಿಗೆ ಶಾಮೀಲಾಗಿದ್ದ ಮೈಸೂರು ಮಹಾರಾಜರ ಪೋಲೀಸರು ಕಾರ್ಮಿಕರ ಮೇಲೆ ಗುಂಡಿನ ಸುರಿಮಳೆಗರೆದರು. 6 ಮಂದಿ ಮುಂಚೂಣಿಯ ಕಾರ್ಮಿಕರು ಸ್ಥಳದಲ್ಲೆ ಮೃತಪಟ್ಟು 12 ಮಂದಿಗೆ ತೀವ್ರಗಾಯಗಳಾದವು. ನೂರಾರು ಮಂದಿ ಕಾರ್ಮಿಕರನ್ನು ದಸ್ತಗಿರಿ ಮಾಡಲಾಯಿತು. ಕಾ॥ ಎಂ. ಕೆ. ದೊರೆರಾಜ್, ಕಾ॥ ಕೆ. ಎಸ್. ಮೇಷಕ್, ಕಾ॥ ಎ. ವೈ. ಸಾಮುವೆಲ್ ಮತ್ತು ಕಾ॥ ಎಂ. ಎಸ್. ಇರುದಯನಾದನ್ ಮೇಲೆ ತೀವ್ರತರವಾದ ಆಪಾದನೆಗಳನ್ನು ಹೊರಿಸಲಾಯಿತು. ಮೈಸೂರು ಮೈನ್ಸ್ ಮತ್ತು ಚಾಂಪಿಯನ್ ಮೈನ್ ಯುನಿಯನ್‌ನ ಕಾ॥ ವಾಸನ್, ಗೋವಿಂದನ್‌ರಲ್ಲದೆ ಇತರ ಮುಖಂಡರನ್ನೂ ಗಡಿಪಾರು ಮಾಡಲಾಯಿತು. ಎಲ್ಲರ ಮೇಲೂ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಯಿತು. ಕಮ್ಯುನಿಸ್ಟರು ಮತ್ತು ಶೆಡ್ಯೂಲ್ಡ್ ಕಾಸ್ಟ್ ಫೆಡರೇಶನ್‌ನವರಿಗೂ ಮಧ್ಯೆ ನಡೆದ ಜಾತೀಯ ಗಲಭೆ ಇದೆಂದೂ ಸಾಬೀತುಪಡಿಸಲು ಬ್ರಿಟಿಷರು ಹೆಣಗಿದರು. ಕೆಲವು ಮಂದಿ ಶೆಡ್ಯೂಲ್ಡ್ ಕಾಸ್ಟ್ ಫೆಡರೇಶನ್‌ನವರನ್ನು ನಾಮಕಾವಾಸ್ಥೆ ಬಂಧಿಸಿದರು. ಆದರೆ ನಿಜಸಂಗತಿ ಬೇರೆಯೇ ಆಗಿತ್ತು. ನಾಯಕರೆಲ್ಲರ ಬಂಧನದಿಂದ ಚಳುವಳಿ ಸ್ಥಗಿತಗೊಂಡಿತು. ಆಗ ಜೈಲಿನಿಂದ ಹೊರಗಿದ್ದ ಕಾ॥ ಎಂ. ಸಿ. ನರಸಿಂಹನ್, ಕಾ॥ ಪಿ. ವಿ. ದೇವದಾಸ್, ಕಾ॥ ಸವರಿದಾಸ್ ಕಾರ್ಮಿಕರನ್ನು ಸಂಘಟಿಸುವ ಕೆಲಸ ಮಾಡಿದರು. ಕಾ॥ ಎಸ್. ಎಲ್. ಉಪಾಧ್ಯಾಯ, ಕಾ॥ ಎಂ. ಸಿ. ನರಸಿಂಹನ್ ಲಾಯರನ್ನು ಗೊತ್ತುಮಾಡಿದರು. ಆ ಸಂದರ್ಭದಲ್ಲಿ ಕೋಲಾರದಲ್ಲಿ ವಕೀಲರಾಗಿದ್ದ ಕಾ॥ ಆರ್. ಎನ್. ಬೈರಾರೆಡ್ಡಿಯವರು ಕಮ್ಯುನಿಸ್ಟ್ ಪಕ್ಷದ ಸಂಪರ್ಕಕ್ಕೆ ಬಂದರು. ಮೊಕದ್ದಮೆಯಲ್ಲಿ ಅವರು ತಮಿಳುನಾಡಿನ ವಕೀಲ ಮಣಿ ಐಯರ್‌ರವರಿಗೆ ಸಹಕಾರ ನೀಡಿದರು.

ದಿಂದ ಬಿಟ್ಟುಹೋಗಿತ್ತು. ಚಾಂಪಿಯನ್ ಮೈನ್ಸ್ ಲೇಬರ್ ಅಸೋಸಿಯೇಷನ್‌ನಲ್ಲಿ ಕಾ॥ ವಾಸನ್‌ರವರಿಗೆ ಸಲಹೆಗಾರರಾಗಿ ಕೆಲಸ ಮಾಡಲು ಅವಕಾಶ ಕೊಟ್ಟಿತು. ಕಾ॥ ಸವರಿದಾಸ್ ಕೂಡ ಚಾಂಪಿಯನ್‌ನಲ್ಲಿ ಕೆಲಸ ಮಾಡಲು ಆರಂಭಿಸಿದರು. ಆದರೆ ಮೈಸೂರು ಮೈನ್ಸ್ ಲೇಬರ್ ಅಸೋಸಿಯೇಷನ್‌ನ ಸೋಷಿಯಲಿಸ್ಟರು ಕಾ॥ ಗೋವಿಂದನ್ ಮತ್ತು ಇತರ ಸಂಗಾತಿಗಳಿಗೆ ಅಲ್ಲಿ ಕೆಲಸ ಮಾಡಲು ಅವಕಾಶ ನೀಡಲಿಲ್ಲ. ಕಾ॥ ಗೋವಿಂದನ್ ಕೇರಳಕ್ಕೆ ಹೋದರು. ಆ ಸಮಯದಲ್ಲಿ ಕಾ॥ ಕೆ. ಎಸ್. ಮೋಷಕ್ ಮತ್ತು ಕಾ॥ ಕೆ. ಎ. ಮುನಿಸ್ವಾಮಿ "ತೊಳಿಳ್ ಸಂಘ ಮುನ್ನೇಟ್ರ ಕಳಗಂ" ಎಂಬ ಹೆಸರಿನಲ್ಲಿ ಒಂದು ಸಂಘಟನೆಯನ್ನು ಆರಂಭಿಸಿ ಕಾರ್ಮಿಕರು ಆ ಸಂಘದಲ್ಲಿ ಸೇರಬೇಕೆಂದೂ ಜೈಲಿನಿಂದ ಬಿಡುಗಡೆಯಾಗಿ ಬಂದ ನಾವು ನಿಮ್ಮ ಸೇವೆ ಮಾಡಲು ಸಿದ್ಧರಿದ್ದೇವೆಂದೂ ಎಲ್ಲ ಕಾರ್ಮಿಕರೂ 4 ಆಣೆ ಚಂದಾ ಕೊಡಬೇಕೆಂದೂ ವಿನಂತಿಸಿಕೊಂಡರು. ಮೈಸೂರು ಮೈನ್ಸ್‌ನಲ್ಲಿ ಆಗ ಸುಮಾರು 8,000 ಮಂದಿ ಕಾರ್ಮಿಕರಿದ್ದರು. ಮಾಸಿಕ ಚಂದಾ ನಾಲ್ಕಣೆಯಂತೆ 669 ರೂಪಾಯಿ 8 ಆಣೆ ಚಂದಾ ವಸೂಲಾಯಿತು. ನಂತರ ಕಾ॥ ಕೆ. ಎಸ್. ವಾಸನ್, ಕಾ॥ ಸವರಿದಾಸ್, ಕಾ॥ ಮೋಷಕ್, ಕಾ॥ ಮುನಿಸ್ವಾಮಿ ಮತ್ತು ಇತರರು ಸಭೆ ನಡೆಸಿ ಯೂನಿಯನ್ ಮೇಲೆ ಅವಿಶ್ವಾಸ ನಿರ್ಣಯ ತರಬೇಕೆಂದೂ ಅದಕ್ಕಾಗಿ ಸಹಿ ಸಂಗ್ರಹ ಮಾಡಬೇಕೆಂದೂ ತೀರ್ಮಾನಿಸಲಾಯಿತು. ಸುಮಾರು 8,000 ಮಂದಿ ಕಾರ್ಮಿಕರಲ್ಲಿ 7,000 ಮಂದಿ ಕಾರ್ಮಿಕರು ಸಹಿ ಹಾಕಿದರು. ಅದನ್ನು ಸೋಷಿಯಲಿಸ್ಟ್ ಮುಖಂಡರಿಗೆ ಕೊಡಲಾಯಿತು. ಅವರು ಪ್ರತಿಕ್ರಿಯಿಸಲಿಲ್ಲ. ಆದುದರಿಂದ ಪ್ರತ್ಯೇಕವಾದ ಬಂದು ಸಂಘವನ್ನು ಆರಂಭಿಸಬೇಕೆಂದು ತೀರ್ಮಾನಿಸಲಾಯಿತು. ಮೈಸೂರು ಮೈನ್ಸ್‌ನ ಹೈಗ್ರೌಂಡ್ಸ್‌ನಲ್ಲಿ ಒಂದು ಭಾರೀ ಬಹಿರಂಗ ಸಭೆಯನ್ನು ಕರೆಯಲಾಯಿತು ಮದ್ರಾಸಿನಿಂದ ಕಾ॥ ಜೀವಾನಂದಂ, ಕಾ॥ ಪದ್ಮಾವತಿ, ಕಾ॥ ಮುಗವೈ ನಾಜಮಾಣಿಕ್ಯಂ ಮುಂತಾದ ಮುಖಂಡರು ಸಭೆಯಲ್ಲಿ ಭಾಗವಹಿಸಿದರು. "ತೊಳಿಳ್ ಸಂಘ ಮುನ್ನೇಟ್ರ ಕಳಗಂ" ಮೂಲಕ ಸಂಗ್ರಹವಾದ ಹಣವನ್ನು ಹೊಸ ಯೂನಿಯನ್ ಆರಂಭಿಸಲು ಉಪಯೋಗಿಸಲಾಯಿತು. ಹೀಗೆ ಮೈಸೂರು ಮೈನ್ಸ್ ವರ್ಕರ್ಸ್ ಯೂನಿಯನ್ (ಎಂ ಎಂ

ಡಬ್ಲ್ಯು ಯು) ನ ಆರಂಭವಾಯಿತು. ಕಾ॥ ಎ. ಎಂ. ಗೋವಿಂದನ್‌ರವರನ್ನು ಮತ್ತೆ ಕೆ. ಜಿ. ಎಫ್. ಗೆ ಕರೆಸಿಕೊಳ್ಳಲಾಯಿತು. ಚುನಾವಣೆ ನಡೆಯಿತು. ಕಾ॥ ವಿ. ಎಂ. ಗೋವಿಂದನ್ ಅಧ್ಯಕ್ಷರಾದರು, ಆನಂದರಾವ್ ಬೋಸ್ಲೆಯ ಸೋಷಿಯಲಿಸ್ಟ್ ಯೂನಿಯನ್ ಹೇಳ ಹೆಸರಿಲ್ಲದಂತೆ ಹೋಯಿತು. ಈ ಸಂದರ್ಭದಲ್ಲಿ ಕೆ. ಜಿ. ಎಫ್. ನಲ್ಲಿ ಕೆಂಬಾಟದ ಯೂನಿಯನ್‌ನ ಜನಪ್ರಿಯತೆ ಎಷ್ಟರ ಮಟ್ಟಿಗೆ ಹೆಚ್ಚಿತೆಂದರೆ ಇತರ ಸುಧಾರಣಾವಾದಿ ಕಾರ್ಮಿಕ ಮುಖಂಡರು ಕೂಡ ಕೆಂಬಾವುಟದ ಯೂನಿಯನ್‌ನೊಂದಿಗೆ ಸೇರಿ ಕೆಲಸ ಮಾಡಬೇಕಾಯಿತು. ಇದನ್ನು ಕಂಡು ಜಾನ್ ಟೇಲರ್ ಆಡಳಿತಕ್ಕೆ ಸಹಿಸಲಾಗಲಿಲ್ಲ. ಆದುದರಿಂದ ಹೆನ್ರೀಸ್ ಶಾಸ್ಟ್‌ಗೆ ಬೆಂಕಿ ಹಚ್ಚಿದರೆಂದು ಪಿತೂರಿಯ ಮೊಕದ್ದಮೆ ಹೂಡಿ ಎಲ್ಲ ನಾಯಕರನ್ನು ಬಂಧಿಸಲಾಯಿತು. ಕಾರ್ಮಿಕರೆಲ್ಲ ಮೊಕದ್ದಮೆಯ ವಿರುದ್ಧ ಹೋರಾಡಲು ಪಣ ತೊಟ್ಟರು. ಈ ಮೊಕದ್ದಮೆಯಲ್ಲಿ ಜಾನ್ ಟೇಲರ್ ಅಡಳಿತ ಸೋತಿತು. ನಾಯಕರೆಲ್ಲರ ಬಿಡುಗಡೆಯಾಯಿತು.

ಆಗ ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಕಾ॥ ಆರ್. ವೆಂಕಟರಾಮಯ್ಯ, ಕಾ॥ ಡಿ. ನಾರಾಯಣ, ಪಿ. ವೆಂಕಟಗಿರಿಯಪ್ಪ, ಕಾ॥ ಅಬ್ದುಲ್ ಮಜೀದ್, ಟಿ. ಕೆ. ಗಂಗಿರೆಡ್ಡಿ, ಅಬ್ದುಲ್ ಸುಬಾನ್, ಎಸ್. ಲಕ್ಕಯ್ಯ, ಹೆಚ್. ಎಸ್. ರಾಮರಾವ್, ಎ. ವಿ. ಅಪ್ಪಸ್ವಾಮಿರೆಡ್ಡಿ ಮೊದಲಾದವರ ಸಂಪರ್ಕ ಬೆಳೆಯಿತು. ಆ ಸಂದರ್ಭದಲ್ಲೇ ಎಸ್. ಸವರಿದಾಸು, ಎ. ಎಂ. ಗೋವಿಂದನ್ ಮತ್ತು ಮೇಲೆ ಹೇಳಿದ ಇತರ ಸಂಗಾತಿಗಳು ಸೇರಿ ಕಾ॥ ಆರ್, ವೆಂಕಟರಾಮಯ್ಯನವರು ಕಾರ್ಯದರ್ಶಿಯಾಗಿ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

ಯುದ್ಧ ಬಂತು! ಯುದ್ಧ ಬಂತು!

ಬಾಂಬಯುಲ ತುಂಬ ಬರಿಯ ಬಾಂಬರುಗಳ ಹಿಂಡನಲೆಸಿ
ಬೆಂಕಿ-ಬೀಜಗಳನೆ ಬಿತ್ತಿ
ಭುಗಿಲ್ಲೆಂದು ಜಿಗಿವ ಜ್ವಾಲೆಗಳ ಕೆರಳಿದ ಬೆಳೆಯನೆತ್ತಿ

ಇಳೆಯ ಚೆಲುವೊ ಹುಲ್ಲುಕರಿಕೆ-
ಯೆಂದು ಅದನು ಕರಿಕುಮರಿಸಿ,
ಇಳೆಯ ಒಲವೊ ಬಂಜೆ ಬಯಕೆ-
ಯೆಂದು ಅದನು ಹಿಂಡಿ ಹಿಳಿದು,
ಇಳೆಯ ನಲವೊ ಬರಿಯ ಬವಣೆ-
ಯೆಂದು ಅದಕೆ ಉರುಲನಿಕ್ಕಿ,

ಸಾಕಿ ಸಲಹುವವನ ಮೇಲೆ ಸುಟ್ಟು ಗೆಲುವ ತೋರಿದ!
ಮನೆ-ಮಂದಿರ ಮೆರೆಯುವಲ್ಲಿ ಮಸಣಛಾಯೆ ತೂರಿದ!

ತಿರೆಯೆದೆಯದೊ ಕೆಂಡವಾಯ್ತು
ಬಂದುದನ್ನೆ ನುಂಗಲೆಂದು ಬಾಯ್ದೆರೆದ ಕೊಂಡವಾಯ್ತು!

ಈ ಬೆಂಕಿಮಡುವೊಳಯ್ಯೊ
ದೇಶ ಹುರಿದು ಹೊರಳಿದುವೊ
ಹೊಳಲು ಚೀರಿ ಉರುಳಿದುವೊ
ಜೀವಜಾತಿ ನರಳಿದುವೊ
ಬೆಂದು ಉರಿದು ಒರಲಿದುವೊ!

ಈ ವಿಶ್ವಮೇಧ-ಮದವದೇರಿ ಹಿಗ್ಗಿ ನಕ್ಕನಲಾ
ಅದೊ ರಕ್ಕಸ ನಕ್ಕನಲಾ

ಉರಿ-ನೀರನೆ ಬಿಡುತ ಅವನ ಕೆನ್ನಾಲಗೆ ನೆಕ್ಕಿತಲಾ!
ನಾಲ್ಕೂ ದಿಕ್ಕ ನೆಕ್ಕಿತಲಾ!

ಅವನ ವಿಷದ ಉಸಿರ ಹಬೆಗೆ ಹಸಿವೆ ದಾಳಿ ಇಟ್ಟಿತೋ
ಕಾಲಪಾಶದಂತೆ ಬೀಸಿ ಬಂದು ಪ್ರಾಣ ತಟ್ಟಿತೋ
ಅದರ ರುಕ್ಷಸ್ಪರ್ಶಕಯ್ಯೊ ಜೀವಸೆಲೆಯೆ ಬತ್ತಿತೋ
ಬೆವತು ಬಾಡಿ ಬೆಂಡಾಗಿ ಜಗದ ಜೀವ ಸತ್ತಿತೋ!

ಹರಣ ಹೀರಿ ಹೆಣವ ಮಾಡಿ
ತಿರೆಯನುರಿಸಿ ಚಿತೆಯ ಹೂಡಿ
ಸುಡುತ ಭೂಲೀಲೆಯಾಡಿ
ಹುಚ್ಚೆದ್ದು ಮಣಿದನು
ಕೂಲುವ ದುಂದಿನಲ್ಲಿ
ಕಾಳನಂತೆ ಕಣಿದು ತಣಿದನು!

—ಗಂಗಾದರ ಚಿತ್ತಾಲ

ಚುನಾವಣೆಗಳಲ್ಲಿ ಕಮ್ಯುನಿಸ್ಟರ ಜಯ

1952ರ ನಾಯಕರು ಜೈಲಿನಿಂದ ಹೊರ ಬರುತ್ತಲೇ ಕಮ್ಯುನಿಸ್ಟ್ ಪಕ್ಷ ಚುನಾವಣೆಯ ಕಣಕ್ಕೆ ಇಳಿಯಿತು. ಆವರೆಗೂ ಕೆ.ಜಿ.ಎಫ್. ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದ ಕಾ॥ ವಜ್ರವೇಲು ಚೆಟ್ಟಿಯವರು ಕುಪ್ಪಂ ಸ್ಪರ್ಧಿಸಲು ಅಲ್ಲಿಗೆ ಹೋದರು. ಕೆ. ಜಿ. ಎಫ್. ನಲ್ಲಿ ಜನರಲ್ ವಿಧಾನ ಸಭಾ ಕ್ಷೇತ್ರದಲ್ಲಿ ಕಮ್ಯೂನಿಸ್ಟ್ ಪಕ್ಷದಿಂದ ಕಾ॥ ಕೆ. ಎಸ್. ವಾಸನ್ ಮತ್ತು ರಿಸರ್ವ್ ಕ್ಷೇತ್ರದಿಂದ ಷೆಡ್ಯೂಲ್ ಕ್ಯಾಸ್ ಫೆಡರೇಶನ್‌ನ ಶ್ರೀ ಸ್ವಾಮಿದೊರೈ ಕಮ್ಯೂನಿಸ್ಟ್ ಪಕ್ಷದ ಸಹಾಯದಿಂದ ಕಾಂಗ್ರೆಸ್ ಪ್ರತಿಸ್ಪರ್ಧಿಗಳನ್ನು ಸೋಲಿಸಿ ಗೆದ್ದರು. ಹೀಗೆ ಪ್ರಚಂಡ ಬಹುಮತದಿಂದ ಆರಿಸಿ ಬಂದ ಕಾ॥ ಕೆ. ಎಸ್. ವಾಸನ್ ಮೈಸೂರು ವಿಧಾನ ಸಭೆಯ ಮೊಟ್ಟ ಮೊದಲ ಕಮ್ಯೂನಿಸ್ಟ್ ಶಾಸಕರಾದರು. ಕೋಲಾರ ಕ್ಷೇತ್ರದಿಂದ ಲೋಕಸಭಾ ಸ್ಥಾನಕ್ಕೂ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿ ಸ್ಪರ್ಧಿಸಿ ಗಮನಾರ್ಹ ಮತ ಗಳಿಸಿದರು.

1957 ರಲ್ಲಿ ಮತ್ತೆ ಸಾರ್ವತ್ರಿಕ ಚುನಾವಣೆ ನಡೆದಾಗ ಕಾ॥ ಎಂ. ಸಿ. ನರಸಿಂಹನ್ ಕಮ್ಯುನಿಸ್ಟ್ ಪಕ್ಷದ ಶಾಸಕರಾಗಿ ಚುನಾಯಿತರಾದರು. ರಿಸರ್ವ್ ಕ್ಷೇತ್ರದಿಂದ ಶ್ರೀ ಸಿ. ಎಂ. ಆರುಮುಗಂ ಕಮ್ಯುನಿಸ್ಟ್ ಬೆಂಬಲ ದಿಂದ ಗೆದ್ದರು.

1962 ರ ನಂತರ ಕಮ್ಯೂನಿಸ್ಟ್ ಪಕ್ಷಕ್ಕೆ ವಿಧಾನ ಸಭಾ ಶಾಸಕ ಸ್ಥಾನ ದೊರಕಲಿಲ್ಲ. ನಂತರದ ಪ್ರತಿ ಚುನಾವಣೆಯಲ್ಲೂ ಸೋಲು ಅನುಭವಿಸಲಾಯಿತು. 1977 ರಿಂದ ಕಾ॥ ಟಿ.ಎಸ್. ಮಣಿಯವರೂ ಸ್ಪರ್ಧಿಸುತ್ತಾ ಬಂದರು. 1983ರ ಚುನಾವಣೆಯಲ್ಲಿ ಅತ್ಯಂತ ಹೆಚ್ಚು ಮತಗಳನ್ನು ಪಡೆದರು. ಕೆಲವೇ ಮತಗಳ ಅಂತರದಲ್ಲಿ ಮಾತ್ರವೇ ಎ. ಐ ಡಿ. ಎಂ. ಕೆ ಅಭ್ಯರ್ಥಿ ಸೇರಲು ಅವಕಾಶವಾಯಿತು 1985ರ ಚುನಾವಣೆಯಲ್ಲಿ ಕಾ॥ ಟಿ. ಎಸ್. ಮಣಿಯವರು ಸುಮಾರು 28,000 ಕ್ಕೂ ಮೇಲ್ಪಟ್ಟ ಬಹುಮತವನ್ನು ಪಡೆದು ಮತ್ತೆ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ಕಮ್ಯೂನಿಸ್ಟ್ ಪಕ್ಷದ ಶಾಸಕರಾಗಿದ್ದಾರೆ.

ಅದೇ ಸಂದರ್ಭದಲ್ಲಿ ಜಾನ್ ಟೇಲರ್ ಕಂಪೆನಿ ಊರಿಗಾಂ ಮೈನ್ಸನ್ನು ಲಾಭದಾಯಕವಾಗಿಲ್ಲದಿರುವುದರಿಂದ ಮುಚ್ಚುವುದಾಗಿ ಘೋಷಿಸಿತು.ಆಗ ಕಾ॥ ಕೆ.ಎಸ್. ವಾಸನ್, ಕಾ॥ ಗೋವಿಂದನ್ ನಾಯಕತ್ವದಲ್ಲಿ ಎಲ್ಲಾ ರಾಜಕೀಯ ಪಕ್ಷಗಳನ್ನೂ ಒಗ್ಗೂಡಿಸಿ ಪ್ರಭಲವಾದ ಚಳುವಳಿಯನ್ನು ಸಂಘಟಿಸಲಾಯಿತು. ಆದರೆ ಶೆಡ್ಯೂಲ್ಡ್ ಕಾಸ್ಟ್ ಫೆಡರೇಶನ್ ಮೈನಿಂಗ್ ಮುಚ್ಚುವುದಕ್ಕೆ ಒಪ್ಪಿಗೆ ನೀಡಿ ಆಡಳಿತ ವರ್ಗದೊಂದಿಗೆ ಶಾಮೀಲಾಯಿತು. ಇದರಿಂದ ಸುಮಾರು 6,000 ಮಂದಿ ಕಾರ್ಮಿಕರು ತೊಂದರೆಗೊಳಗಾದರು. ಮುಂದೆ ಗಣಿಯನ್ನು ರಾಷ್ಟ್ರೀಕರಣಗೊಳಿಸಬೇಕೆಂದು ಕೆಂಬಾವುಟದ ಯೂನಿಯನ್‌ನ ನೇತೃತ್ವದಲ್ಲಿ ಪ್ರಭಲವಾದ ಹೋರಾಟವನ್ನು ಸಂಘಟಿಸಲಾಯಿತು. ಈ ಚಳುವಳಿಯ ಪರಿಣಾಮವಾಗಿ ಆಗಿನ ಪ್ರಧಾನ ಮಂತ್ರಿ ಪಂಡಿತ ಜವಾಹರ್‌ಲಾಲ್ ನೆಹರೂರವರು ಈ ಬೇಡಿಕೆಯನ್ನು ಒಪ್ಪಿಕೊಳ್ಳಬೇಕಾಯಿತು. ಹೀಗೆ 1956ರಲ್ಲಿ ಚಿನ್ನದ ಗಣಿಯು ರಾಷ್ಟ್ರೀಕರಣಗೊಂಡು ಮೈಸೂರು ಪ್ರಾಂತ ಸರಕಾರ ಇದರ ಆಡಳಿತ ವಹಿಸಿತು. ಸ್ವಾತಂತ್ರ್ಯ ನಂತರವೂ 7-8 ವರ್ಷ ಗಣಿಯನ್ನು ದೋಚಿದ ಜಾನ್ ಟೇಲರ್ ಅಂಡ್ ಸನ್ಸ್ ಕೆಂಪನಿಯ ಆಡಳಿತ ಅಂತ್ಯಗೊಂಡಿತು.

1957 ರಿಂದ ಕೋಲಾರ ಜಿಲ್ಲೆಯಲ್ಲಿ ರೈತ ಸಂಘಗಳನ್ನು ಕಟ್ಟಲು ಕೆಂಬಾವುಟದ ಯೂನಿಯನ್ ಸಹಾಯ ಮಾಡಿತು. ಜಿಲ್ಲೆಯ ರೈತರು ಜೋಡಿ ಇನಾಂ ಪದ್ಧತಿಯನ್ನು ರದ್ದುಗೊಳಿಸಬೇಕೆಂಬ ಬೇಡಿಕೆಯೊಂದಿಗೆ ಹೋರಾಟಕ್ಕಿಳಿದರು. ಈ ಚಳುವಳಿಯು ಜಿಲ್ಲೆಯಲ್ಲೇ ಪ್ರಭಲವಾಯಿತು. ಆಗ ಕಾ॥ ಎಸ್. ಎಂ. ಅಂತೋಣಿಕ್ರೂಜ್, ಕಾ॥ ಎನ್. ಸಿಂಧೂರಾಜ್, ಕಾ॥ ಎಸ್. ರಾಮದಾಸ್, ಕಾ॥ ಎಸ್. ಇಗ್ನೇಸಿಯಸ್ ಮತ್ತು ಕಾ॥ ಎಸ್. ಸವರಿದಾಸ್ ರವರನ್ನು ಕೆಂಬಾವುಟದ ಯೂನಿಯನ್‌ನಿಂದ ರೈತರ ಹೋರಾಟಕ್ಕೆ ಸಹಾಯ ಮಾಡಲು ಕಳುಹಿಸಲಾಯಿತು.

ಭೂ ಆಕ್ರಮಣದ ಮೂಲಕ ಸುಮಾರು 240 ಎಕರೆ ಭೂಮಿಯನ್ನು ಕೃಷಿ ಕಾರ್ಮಿಕರು ವಶಪಡಿಸಿಕೊಂಡರು. ರೈತ ಸಂಘದ ನೇತೃತ್ವದಲ್ಲಿ ಸರಕಾರಿ ಬಂಜರು ಭೂಮಿಯನ್ನು ಭೂ ಆಕ್ರಮಣ ಚಳುವಳಿಯ ಮೂಲಕ ಬಡ ಕೃಷಿ ಕೂಲಿಗಾರರೂ ಹಂಚಿಕೊಂಡರು ಈ ಚಳುವಳಿಯಲ್ಲಿ ಕಾ॥ ಎ. ಕೆ. ಜಿ. ನೇರವಾಗಿ ಭಾಗವಹಿಸಿದ್ದರು, ರೈತ ಸಂಘ ಮತ್ತು ಕಮ್ಯುನಿಸ್ಟ್ ಪಕ್ಷಗಳ ಉದಯದಿಂದ ಎರಡನೇ ಮಹಾ ಚುನಾವಣೆಯ ಸಮಯದಲ್ಲಿ ಒಂದು ಕಾಂಗ್ರೆಸ್ ವಿರೋಧಿ ಐಕ್ಯರಂಗವನ್ನು ಕಟ್ಟಿ, ಆಮೂಲಕ ಜಿಲ್ಲೆಯಲ್ಲಿ 11 ಮಂದಿ ಶಾಸಕರು ಚುನಾಯಿತವಾಗುವಂತೆ ಮಾಡಲಾಯಿತು. ಪ್ರಾಂತ್ಯಗಳ ಪುನರ್ವಿಂಗಡನಾ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರಮುಖ ಪಾತ್ರ ವಹಿಸಿತು.

"ಮೈಸೂರು ಚಲೋ"

1947 ಆಗಸ್ಟ್ 15 ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಸಂಸ್ಥಾನ ಮಹಾರಾಜರ ಆಡಳಿತದಲ್ಲಿತ್ತು. ಆಗ ಕೆ.ಜಿ.ಎಫ್‌ನ ಕಮ್ಯುನಿಸ್ಟ್ ಪಕ್ಷ ಕಾಂಗ್ರೆಸ್ ಜೊತೆ ಸೇರಿ ಜವಾಬ್ದಾರಿಯುತ ಆಡಳಿತ ಜ್ಯಾರಿಯಾಗಬೇಕೆಂದೂ, ಮೈಸೂರು ಮಹಾರಾಜರು ಕೂಡಲೇ ಅಧಿಕಾರ ಬಿಟ್ಟುಕೊಡಬೇಕೆಂದೂ ಮೈಸೂರು ಚಲೋ ಕಾರ್ಯಕ್ರಮ ಹಾಕಿಕೊಂಡರು. ಇದರೊಂದಿಗೆ ಕಮ್ಯುನಿಸ್ಟರ ನೇತೃತ್ವದಲ್ಲಿದ್ದ ಮೈಸೂರು ಮೈನ್ಸ್ ಮತ್ತು ಚಾಂಪಿಯನ್ ಮೈನ್ಸ್ ಕಾರ್ಮಿಕರು, ಈ ರಾಜಕೀಯ ಬೇಡಿಕೆಗಾಗಿ 18 ದಿನಗಳ ಮುಷ್ಕರ ಹೂಡಿದರು. ನಂತರ ಮೈಸೂರು ಮಹಾರಾಜ ಅಧಿಕಾರ ಬಿಟ್ಟುಕೊಟ್ಟು ಮೈಸೂರು ಪ್ರಾಂತ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಚಾಂಪಿಯನ್ ಮೈನ್ಸ್ ಲೇಬರ್ ಅಸೋಸಿಯೇಶನ್‌ನ ಅಧ್ಯಕ್ಷರಾಗಿದ್ದ ಶ್ರೀ ಕೆ. ಸಿ. ಚಂಗಲರಾಯ ರೆಡ್ಡಿಯವರು ಅಧಿಕಾರ ವಹಿಸಿಕೊಂಡರು. ಜವಾಬ್ದಾರಿಯುತ ಆಡಳಿತ ಜ್ಯಾರಿಗೆ ಬರುತ್ತಲೇ ಕೋರ್ಟು ಕೇಸ್‌ಗಳನ್ನು ಹಿಂತೆಗೆದುಕೊಳ್ಳಲಾಯಿತು. ಗಡಿಪಾರು ಆಜ್ಞೆಯನ್ನು ರದ್ದುಪಡಿಸಲಾಯಿತು. ಗಡಿಪಾರಿನಲ್ಲಿದ್ದ ಮುಖಂಡರು ಮತ್ತೆ ಕೆ.ಜಿ.ಎಫ್‌ಗೆ ಬಂದು ಯೂನಿಯನ್‌ಗಳಲ್ಲಿ ಕೆಲಸ ಆರಂಭಿಸಿದರು.

ಮುಂದೆ 1962ರಲ್ಲಿ ಕೇಂದ್ರ ಸರಕಾರದ ಮಿನಿಸ್ಟ್ರಿ ಆಫ್ ಮೈನ್ಸ್‌ನ ಅಧೀನಕ್ಕೆ ಚಿನ್ನದ ಗಣಿಯನ್ನು ತೆಗೆದು ಕೊಳ್ಳಲಾಯಿತು. ಕೇಂದ್ರದ ಅಧೀನಕ್ಕೆ ಗಣಿ ಬಂದಕೂಡಲೇ ಲಾಭದಾಯಕವಾಗಿಲ್ಲವೆಂದು ಮೈಸೂರು ಮೈನ್ಸ್‌ನ್ನು ಮುಚ್ಚುವುದಾಗಿ ಸರಕಾರ ಘೋಷಿಸಿತು. ಕೆಂಬಾವುಟದ ಯೂನಿಯನ್ ಇದನ್ನು ವಿರೋಧಿಸಿ ಹೋರಾಡಿ ತಡೆಹಿಡಿಯಿತು. ಈವರೆಗೂ ಮೈಸೂರು ಮೈನ್ಸ್‌ನಲ್ಲಿ ಬಂಗಾರ ಉತ್ಪತ್ತಿಯಾಗುತ್ತಿದೆ. 1962ರಲ್ಲಿ ರಾಜ್ಯ ವಿಧಾನ ಸಭಾಕ್ಕೆ ನಡೆದ ಚುನಾವಣೆಯಲ್ಲಿ ಕಾ॥ ಎಸ್. ರಾಜಗೋಪಾಲ್ ಕಮ್ಯುನಿಸ್ಟ್ ಪಕ್ಷದ ಶಾಸಕರಾಗಿ ಗೆದ್ದರು. ಮೀಸಲು ಮತ್ತು ಜನರಲ್ ಎರಡು ಸ್ಥಾನಗಳಿದ್ದುದು ಮೀಸಲು ಒಂದೇ ಸ್ಥಾನ ಮಾಡಲಾಗಿತ್ತು. ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಿಂದ ಸೋತ ಶೆಡ್ಯೂಲ್ಡ್ ಕಾಸ್ಟ್ ಫೆಡರೇಶನ್‌ನ ಶ್ರೀ ಸಿ. ಎಂ. ಆರ್ಮುಗಂ ಕಡೆಯವರು ಚಾಂಪಿಯನ್ ಪ್ರದೇಶದಲ್ಲಿ ಕೆಂಬಾವುಟದ ಸಂಗಾತಿಗಳ ಮೇಲೆ ಹಲ್ಲೆ ನಡೆಸಿ ಹಲವಾರು ಮನೆಗಳಿಗೆ ಬೆಂಕಿ ಹಚ್ಚಿದರು. ಪೋಲೀಸಿನವರೂ ಇವರೊಂದಿಗೆ ಶಾಮೀಲಾಗಿದ್ದರು. ಹಲವು ಮಂದಿ ಕಾರ್ಮಿಕರು ಮನೆ ಮಠಗಳನ್ನು ಕಳೆದು ಕೊಂಡರು.

ಆ ಸಮಯದಲ್ಲೇ ಚಿನ್ನದ ಗಣಿಯ ಎಲ್ಲ ಯೂನಿಯನ್‌ಗಳ ಒಕ್ಕೂಟದ ನೇತೃತ್ವದಲ್ಲಿ 80 ದಿನಗಳ ಹೋರಾಟ ನಡೆಯಿತು. 1962ರ ನಂತರ ಮೈಸೂರು ಮೈನ್ಸ್ ವರ್ಕರ್ಸ್ ಯೂನಿಯನ್ ಕಾ॥ ವಾಸನ್, ಕಾ॥ ಟಿ. ಎಸ್. ಮಣಿ ಮತ್ತು ಕಾ॥ ಕಣ್ಣನ್, ಕಾ॥ ಸವರಿದಾಸ್ ನೇತೃತ್ವದಲ್ಲಿತ್ತು. 1964ರಲ್ಲಿ ಕಮ್ಯೂನಿಸ್ಟ್ ಪಕ್ಷ ಇಬ್ಭಾಗವಾದಾಗ ಸಿ. ಪಿ. ಐ. (ಎಂ) ನ ಮೇಲೆ ಕೇಂದ್ರ ಸರ್ಕಾರದ ಪ್ರಹಾರ ನಡೆದಾಗ ಕಾಂ॥ ಸವರಿದಾಸ್‌ರವರು ಬಂಧಿಸಲ್ಪಟ್ಟು 1966ರವರೆಗೆ ಜೈಲಿನಲ್ಲಿದ್ದು ನಂತರ ಬಿಡುಗಡೆ ಹೊಂದಿದರು.

1980 ರಲ್ಲೇ ಭಾರತ್ ಗೋಲ್ಡ್ ಮೈನ್ಸ್‌ನಲ್ಲಿ ಎಲ್ಲ ವಿಭಾಗಗಳಿಗೂ ಒಂದೇ ಯೂನಿಯನ್‌ಗಾಗಿ ಚುನಾವಣೆ ನಡೆಯಿತು. ಆ ಚುನಾವಣೆಯಲ್ಲಿ ಬಿ. ಜಿ. ಎಂ. ಡಬ್ಲ್ಯು. ಯು. (ಸಿ.ಐ.ಟಿ.ಯು) ಪ್ರಚಂಡ ಬಹುಮತದಿಂದ ಗೆದ್ದು ಬಂತು. ಕಾ॥ ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷ, ಕಾ॥ ಟಿ. ಎಸ್. ಮಣಿ ಉಪಾಧ್ಯಕ್ಷ ಕಾ॥ ಕಣ್ಣನ್ ಉಪಾಧ್ಯಕ್ಷ, ಕಾಂ॥ ಎಸ್. ಸವರಿದಾಸ್ ಕಾರ್ಯದರ್ಶಿ ಕಾ॥ ರವೀಂದ್ರ ಜೊತೆ ಕಾರ್ಯದರ್ಶಿ ಕಾ॥ ಪ್ಯಾಟ್ರಿಕ್ ಆರೋಗ್ಯದಾಸ್ ಖಜಾಂಚಿಯಲ್ಲದೆ ಎಲ್ಲ ಕಾರ್ಯಕಾರಿ ಸಮಿತಿ ಸದಸ್ಯರೂ ಆರಿಸಿ ಬಂದರು. ಗಣಿ ಕಾರ್ಮಿಕರ ಬಹಳ ಹಳೆಯ ಬೇಡಿಕೆಗಳು ಈಡೇರಿಸಲಾಯಿತು. ಸಂಬಳದಲ್ಲಿ ಹೆಚ್ಚಳವಲ್ಲದೆ ಬೇರೆ ಬೇರೆ ಹೊಸ ಭತ್ಯಗಳನ್ನು ಪಡೆಯಲಾಯಿತು. ಆದರೆ ನಂತರ ನಡೆದ ಎರಡು ಚುನಾವಣೆಗಳಲ್ಲೂ ಸಿ. ಐ. ಟಿ. ಯು, ಸ್ವಲ್ಪ ಮತಗಳ ಅಂತರದಲ್ಲಿ ಸೋಲು ಅನುಭವಿಸಿತು.

ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ತಮಿಳು ಭಾಷೆ ಮಾತನಾಡುವ ಕಾರ್ಮಿಕರೇ ಅತ್ಯಧಿಕ ಸಂಖ್ಯೆಯಲ್ಲಿರುವುದರಿಂದ ತಮಿಳು ನಾಡಿನ ರಾಜಕೀಯ ಪ್ರಭಾವ ಅಲ್ಲಿ ಹೆಚ್ಚಾಗಿದೆ. ಡಿ.ಎಂ.ಕೆ., ಎ.ಐ.ಡಿ. ಎಂ. ಕೆ. ಪಕ್ಷಗಳು ಪ್ರಬಲವಾಗಿ ಕಮ್ಯೂನಿಸ್ಟ್ ಪಕ್ಷವನ್ನು ಈಗ ಎದುರಿಸುತ್ತಿವೆ. ಹಿಂದೆ ಕಾಂಗ್ರೆಸ್ ಮತ್ತು ರಿಪಬ್ಲಿಕನ್ ಪಾರ್ಟಿಗಳೊಂದಿಗೆ ನಮ್ಮ ಪಾರ್ಟಿ ಹೋರಾಡಬೇಕಾಗಿತ್ತು. ಈಗ ಹಲವಾರು ಪಾರ್ಟಿಗಳು ಈಗ ತಲೆ ಎತ್ತಿವೆ. ಇವರ ನಡುವೆ ಬಿ. ಇ. ಎಂ. ಎಲ್. ಕಾರ್ಖಾನೆ ಬಂದ ಮೇಲೆ ಕನ್ನಡಿಗರ ಸಂಖ್ಯೆಯೂ ಬೆಳೆಯುತ್ತಿದೆ. ಚಿನ್ನದ ಗಣಿಗಳಲ್ಲಿ ಚಿನ್ನದ ಉತ್ಪಾದನೆ ಕಡಿಮೆಯಾಗುತ್ತಿದೆ. ಅದರಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಿ. ಐ. ಟಿ. ಯು. ಮತ್ತು ಕಮ್ಯೂನಿಸ್ಟ್ ಪಾರ್ಟಿ ವಾಸ್ತವ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಯೋಗ್ಯ ಧೋರಣೆಯನ್ನು ರೂಪಿಸಿಕೊಂಡು ಜನತೆಗೆ ಸರಿಯಾದ ನೇತೃತ್ವ ಕೊಡುವುದಗತ್ಯವಿದೆ. ●

ಕರ್ನಾಟಕದಲ್ಲಿ ಕಾರ್ಮಿಕ ವರ್ಗದ ಉಗಮ

"ಬಂಡವಾಳಶಾಹಿ ತನ್ನ ಹುಟ್ಟಿನೊಡನೆಯೇ ತನ್ನ ಸಮಾಧಿಯನ್ನು ತೋಡುವ ಕಾರ್ಮಿಕ ವರ್ಗವನ್ನೂ ಕರೆ ತರುತ್ತಾನೆ ಎಂಬ ಮಾರ್ಕ್ಸ್‌ರವರ ಪ್ರಸಿದ್ಧವಾದ ಮಾತೊಂದಿದೆ.

ಇದರಂತೆಯೇ ಬ್ರಿಟಿಷರು ತಮ್ಮ ದೇಶದ ಕೈಗಾರಿಕೆಗಳಲ್ಲಿ ಉತ್ಪಾದಿಸಿ ತಂದು ಮಾರಿದ ಸಿದ್ಧ ವಸ್ತುಗಳ ಫಲವಾಗಿ ಇಲ್ಲಿ ಚಿಗುರಬಹುದಾಗಿದ್ದ ಕೈಗಾರಿಕೆಗಳ ಕುಡಿ ಮೊಗ್ಗುಗಳು (ಮಸ್ಲಿನ್, ರೇಷ್ಮೆ ಮೊದಲಾದ ಉದ್ಯಮಗಳು) ಒಣಗಿ ಮತ್ತೆ ಕೈಗಾರಿಕೆಗಳೆನ್ನಬಹುದಾದ ಚಟುವಟಿಕೆ ಆರಂಭವಾದದ್ದು ರೈಲು ಮಾರ್ಗಗಳನ್ನು ಹಾಕುವುದರ ಮೂಲಕ. ಕರ್ನಾಟಕದಲ್ಲಿ 19ನೇ ಶತಮಾನದ ಉತ್ತರಾರ್ಧದಲ್ಲಿ ಆರಂಭವಾಗಿ 20ನೇ ಶತಮಾನದ ಕೈಗಾರಿಕೆಗಳ ಬೆಳವಣಿಗೆಯ ಬಗ್ಗೆ "ಐಕ್ಯರಂಗ"ದ ರಾಜ್ಯೋತ್ಸವ ಸಂಚಿಕೆ ವಿವರಿಸಿದೆ.

1864 ರಲ್ಲಿ ಆರಂಭವಾದ ರೈಲ್ವೆ ಮಾರ್ಗಗಳು-ಬೆಂಗಳೂರು—ಮದರಾಸು, ಮದರಾಸು—ಮುಂಬಯಿ ಇತ್ಯಾದಿ, ಜೊತೆಗೆ 985 ರಲ್ಲಿ ಚಿನ್ನದ ಗಣಿ, 1883 ರಲ್ಲಿ ಮೈಸೂರು ಹತ್ತಿ ಗಿರಣಿ 1894ರಲ್ಲಿ ವಿದ್ಯುತ್ ತಯಾರಿಕೆ, ದ. ಕ. ಜಿಲ್ಲೆಯಲ್ಲಿ ಹೆಂಚಿನ ಉದ್ಯಮ, ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಹತ್ತಿ ವ್ಯಾಪಾರದೊಡನೆಯೇ ಜಿನ್ನಿಂಗ್ ಹಾಗೂ ಪ್ರೆಸ್ಸಿಂಗ್ ಉದ್ಯಮ ಹೀಗೆ ಪ್ರಯಾಸದಿಂದ ಸಣ್ಣ ಪುಟ್ಟ ಉದ್ಯಮಗಳು ಆರಂಭವಾದುವು. 1931-14 ರಲ್ಲಿ ಹಳೆಯ ಮೈಸೂರು ಸಂಸ್ಥಾನದಲ್ಲಿ 72 ಕಾರ್ಖಾನೆಗಳು ಹಾಗೂ ೧೨ ಚಿನ್ನದ ಗಣಿಗಳು, ಸಂಸ್ಥಾನದ ಶೇ. 8 ಪರ್ಸೆಂಟ್ ಜನಸಂಖ್ಯೆಯನ್ನು ಉದ್ಯೋಗದಲ್ಲಿ ತೊಡಗಿಸಿದ್ದವು.

ಕಾರ್ಮಿಕವರ್ಗ ಈ ಬಂಡವಾಳಶಾಹಿಯ ಬೆಳವಣಿಗೆಯೊಡನೆಯೇ ಜನಿಸಿತು. ಆದರೆ ಒಂದು ಪ್ರಮುಖ ವ್ಯತ್ಯಾಸವೆಂದರೆ ಯೂರೋಪಿನಲ್ಲಿ ಕಾರ್ಮಿಕರಾಗಿ ಕೈಗಾರಿಕೆಗಳಲ್ಲಿ ಮೊದಲು ದುಡಿಯಲಾರಂಭಿಸಿದವರು, ಈ ಬಂಡವಾಳಶಾಹಿ ಉತ್ಪಾದನೆಗಳೊಂದಿಗೆ ಸ್ಪರ್ಧಿಸಲಾರದೆ ಕೆಲಸ ಕಳೆದುಕೊಂಡ ಕುಶಲ ಕರ್ಮಿಗಳು, ಈ ಕೈಗಾರಿಕೆಗಳಿಗೆ ಇವರು ತಮ್ಮ ಕೌಶಲ್ಯವನ್ನು ಒಯ್ದರು. ಆದರೆ ಭಾರತದಲ್ಲಿ ದೇಶದ ಪರಂಪರಾಗತ ಕೈ ಕಸುಬುಗಳು, ಗೃಹ ಕೈಗಾರಿಕೆಗಳನ್ನು ಬ್ರಿಟಿಷರ ವಸಾಹತುಶಾಹಿಗಳ ಆಕ್ರಮಣಕ್ಕೆ ತುತ್ತಾಗಿ ನಾಶವಾದುವು. ಆದರೆ ಯೂರೋಪಿನಲ್ಲಾದಂತೆ ಕೂಡಲೆ ಈ ಕುಶಲ ಕರ್ಮಿಗಳ ಪ್ರಯೋಜನ ಪಡೆಯಲು ಕೈಗಾರಿಕೆಗಳು ಆರಂಭವಾಗಲಿಲ್ಲ. ಈ ಕೈಗಾರಿಕೆಗಳ ಆರಂಭಕ್ಕಾಗಿ ಹೂಡಲು ತಂತ್ರಜ್ಞಾನ, ಯಂತ್ರಗಳು, ಹಣ ಯಾವುದೂ ಇರಲಿಲ್ಲ. ಇದರಿಂದಾಗಿ ವಿಶ್ವ ಪ್ರಸಿದ್ಧ ನೇಯ್ಗೆಕಾರರು ಇತರ ಕುಶಲ ಕರ್ಮಿಗಳು ತಮ್ಮ ತಮ್ಮ ಊರುಗಳಿಗೆ ಮರಳಿ ಕೃಷಿಯ ಮೇಲೆಯೇ ಅವಲಂಬನೆ ಪಡೆಯಬೇಕಾಯಿತು. ಕೃಷಿಯ ಮೇಲೆ ಒತ್ತಡ ಹೆಚ್ಚಾಯಿತು. ಇಂತಹ ದುರಂತ ಸಂಭವಿಸಿದ ಒಂದೆರಡು ತಲೆಮಾರುಗಳಲ್ಲಿ ಈ ಕುಶಲ ಕರ್ಮಿಗಳಲ್ಲಿ ತಮ್ಮ ಕುಶಲತೆಯನ್ನು ಕಳೆದುಕೊಂಡು ಕೇವಲ ರೈತ, ಕೃಷಿ ಕಾರ್ಮಿಕರಾದರು. (ಆಧಾರ : ಸುಕೋಮಲ್ ಸೇನ್)

ಮುಂದೆ 50-100 ವರ್ಷಗಳ ನಂತರ ಆರಂಭವಾದ ಕೈಗಾರಿಕಾ ಸಂಬಂಧೀ ಚಟುವಟಿಕೆಗಳಲ್ಲಿ ಮತ್ತೆ ಉದ್ಯೋಗ ಪಡೆದವರು. ಹಿಂದಿನ ಕುಶಲ ಕರ್ಮಿಗಳ ಮೊಮ್ಮಕ್ಕಳು ಮರಿ ಮಕ್ಕಳು-ಹಳ್ಳಿಯೊಡನೆ ಗಾಢ ಸಂಬಂಧ ಬೆಳೆಸಿಕೊಂಡ ಕೃಷೀ ಕೂಲಿಕಾರರು. ○

ಬೆಂಜಮಿನ್ ಮೊಲಾಯಿಸ್

★ ಕೆರಳ್ಳಿ ಗುರುನಾಥರೆಡ್ಡಿ

ಕತ್ತಲೆಯ ನಾಡೊಳಗೆ ಬತ್ತಲೆಯ ಬದುಕು
ಬೆಳ್ಳಕ್ಕಿ ನುಂಗ್ಯಾವೋ ಬೆಳಕು
ದಟ್ಟ ಅರಣ್ಯಾಗ ಗಟ್ಯಾಗಿ ಕೂಗ್ಯಾದ
ದಿಟ್ಟ ಪುಟ್ಟ ಕೋಗಿಲೆಯೊಂದು
ದನಿಯೆತ್ತಿ ಹಾಡ್ಯಾದ ಹೋರಾಟ ಮಾಡ್ಯಾವ
ಹಂಗೀನ ಬದುಕು ಬ್ಯಾಡೆಂದು
ಕರುಣೆಯಲ್ಲದ ಕೈ ಹಿಡಿದಾವ ಕೊರಳು
ತೊಡಸ್ಯಾದ ಕಗ್ಗಂಟು ಉರುಳು
ಹ್ಯಾಂಗ ಮರೆತೇವು ನಾವು ನೀ ಹಾಟ ಹೊಂಟೆ
ಗೈರಹಾಜರಿಯಲ್ಲಿ ಅರಳಿ ಅಳತಾವ ಗಿಡಗಂಟೆ

(ಕೃಪೆ: ಕಪ್ಪುನಾಡಿನ ಕೆಂಪುಸೂರ್ಯ)

ನಮ್ಮ ಈ ಕರ್ತವ್ಯಗಳು ಅಪೂರ್ಣವಾಗಿಯೇ ಉಳಿಯಬೇಕೆ ?

ವಿ. ಜೆ. ಕೆ. ನಾಯರ್

ಟ್ರೇಡ್ ಯೂನಿಯನ್‌ಗಳಲ್ಲಿ ಕಮ್ಯೂನಿಸ್ಟರು ಕೆಲಸ ಮಾಡುವುದರ ಉದ್ದೇಶ ಕಾರ್ಮಿಕರಿಗೆ ಒಳ್ಳೆಯ ವೇತನ ಮತ್ತು ಸೇವಾ ಸೌಲಭ್ಯಗಳನ್ನು ದೊರಕಿಸಿಕೊಡುವುದಕ್ಕಷ್ಟೇ ಸೀಮಿತ ಅಲ್ಲ. ಇಡೀ ಕಾರ್ಮಿಕ ವರ್ಗವನ್ನು ಸಮಾಜವಾದದ ಕಡೆಗೆ ಗೆದ್ದುಕೊಳ್ಳುವುದು, ಕಾರ್ಮಿಕರ ಮಧ್ಯೆ ಇರುವ ನೂರಾರು ಸಮರ ಶೀಲ ಕಾರ್ಯಕರ್ತರನ್ನು ಪಕ್ಷದ ಕಡೆಗೆ ಆಕರ್ಷಿಸುವುದು ಮತ್ತು ಸಮಾಜವಾದಕ್ಕಾಗಿ ವರ್ಗ ಹೋರಾಟ ನಡೆಸಿ ಗೆಲ್ಲುವುದು ಇವೆಲ್ಲವೂ ಅವರ ಉದ್ದೇಶ. ಮೊದಲಿಗೆ ಸಮಾಜವಾದಿ ಸಮಾಜವನ್ನು ತಮ್ಮ ದೇಶದಲ್ಲೇ ಕಟ್ಟಿ ಅಂತಿಮವಾಗಿ ಮಾನವನಿಂದ ಮಾನವನ ಶೋಷಣೆಯನ್ನು ನಿಲ್ಲಿಸುವುದೂ ಅವರ ಗುರಿ.

ನಮ್ಮ ರಾಜ್ಯದಲ್ಲಿ ನಾವು ಈವರೆಗೆ ಏನು ಸಾಧಿಸಿದ್ದೇವೋ ಅದರ ಆಧಾರದಲ್ಲಿ ವಿಮರ್ಶಿಸುವುದಾದರೆ ಈ ಅಂತಿಮ ಗುರಿಯತ್ತ ಸಾಗುವಲ್ಲಿ ನಾವೇನಾದರೂ ಬದಲಾವಣೆ ಮಾಡಿದ್ದೇವೆಯೇ ಎನ್ನುವುದು ಸಂಶಯಾಸ್ಪದ. ನಾವು ನೇತೃತ್ವ ನೀಡಿರುವ ಕಾರ್ಮಿಕ ವರ್ಗದ ಒಂದು ಸಣ್ಣ ವಿಭಾಗದ ಪಾಲಿಗೆ ಒಳ್ಳೆಯ ವೇತನ ಮತ್ತು ಉತ್ತಮ ಸೇವಾ ಸವಲತ್ತುಗಳನ್ನು ಗಳಿಸಿಕೊಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ ನಿಜ. ಈ ಕುರಿತು ನಾವು ಸಾಕಷ್ಟು ಅಭಿಮಾನ ಪಟ್ಟುಕೊಳ್ಳಬಹುದು. ಆದರೆ ಕಡೇಪಕ್ಷ ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ನಾವು ಯಶಸ್ವಿಯಾಗಿರುವುದು 'ಆರ್ಥಿಕವಾದ'ದ ಸೀಮಿತ ಕ್ಷೇತ್ರದಲ್ಲಿ ಮಾತ್ರ ಹೊರತು ನಮ್ಮ ಅಂತಿಮ ಗುರಿಯ ಕಡೆಗೆ ಸಾಗುವಲ್ಲಿ ನಮ್ಮ ರಾಜಕೀಯ ಮುನ್ನಡೆ ಏನೇನೂ ಸಾಲದು. ನಾವು ಮುಂದೆ ಸಾಗಬೇಕಾದರೆ ನಮ್ಮ ಮುಂದಿರುವ ಕರ್ತವ್ಯಗಳ ಕುರಿತು ಮರು ಚಿಂತನೆ ನಡೆಸಿ ನಮ್ಮ ದೋಷಗಳನ್ನು ತಿದ್ದಿಕೊಳ್ಳಬೇಕುದುದು ತುಂಬಾ ಅಗತ್ಯವೆನಿಸುತ್ತದೆ.

(1)

ಟ್ರೇಡ್ ಯೂನಿಯನ್ ರಂಗದಲ್ಲಿ ದುಡಿಯುವ ರಾಜಕೀಯ ಕಾರ್ಯಕರ್ತನೊಬ್ಬನಾಗಿ ನನ್ನ ಅನುಭವದಿಂದ ನಾನಿಷ್ಟೇ ಹೇಳಬಲ್ಲೆ. ನಾವು ಮಾಡಿದ ಒಳ್ಳೆಯ ಕೆಲಸಗಳು ಸಂಪೂರ್ಣ ವ್ಯರ್ಥವಾಗದೇ ಇರಬಹುದು ; ಆದರೆ ಅವು ನಾವು ನಿರೀಕ್ಷಿಸಿದಂತಹ ಫಲಿತಾಂಶವನ್ನಾದರೂ ಖಂಡಿತಾ ನೀಡಿಲ್ಲ. ವೈಯಕ್ತಿಕವಾಗಿ ಒಬ್ಬ ಮುಂದಾಳು ಎಷ್ಟೇ ಒಳ್ಳೆಯ ಕೆಲಸ ಮಾಡಿಕೊಂಡಿದ್ದರೂ ಆದು ಸಾಮೂಹಿಕ ಕೆಲಸಕ್ಕೆ ಸರಿಪಾಟಿಯಾಗಲಾರದು. ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಕೆಲಸದ ಬಗ್ಗೆ ಪಕ್ಷದ ಹನ್ನೆರಡನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯೂ ಇದನ್ನೇ ಹೇಳಿದೆ (ಪುಟ 201). ನಮ್ಮ ರಾಜ್ಯದಲ್ಲಿನ ಟ್ರೇಡ್ ಯೂನಿಯನ್ ಚಟುವಟಿಕೆಗಳಿಗೆ ಕುರಿತಂತೆ ಪಕ್ಷದ ಹನ್ನೊಂದನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯಲ್ಲಿ ನಿರ್ದೇಶಿಸಿರುವಂತಹ 'ಯೋಜನೆ'ಯನ್ನು ನಾವು ಇನ್ನೂ ಸಿದ್ಧಪಡಿಸಿಕೊಳ್ಳಬೇಕಾಗಿದೆಯಷ್ಟೆ. "ನಮಗೆ ಸಿಕ್ಕಿರುವ ಸಾಕ್ಷ್ಯಾಧಾರಗಳ ಮೇಲಿಂದ ತಿಳಿದುಬರುವುದೇನೆಂದರೆ ಪಕ್ಷದ ಕೆಲವೇ ರಾಜ್ಯ ಸಮಿತಿಗಳು ಮಾತ್ರ ಯೋಜನಾಬದ್ಧವಾಗಿ ಮತ್ತು ತಮ್ಮ ಮುಂದಿರುವ ಸಮಸ್ಯೆಗಳನ್ನು ಸರಿಯಾಗಿ ಅರ್ಥೈಸಿಕೊಂಡು ತಮ್ಮ ರಾಜ್ಯದ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುತ್ತಿವೆ" ಯೆಂದು 13ನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯಲ್ಲಿ ಹೇಳಲಾಗಿತ್ತು. (ಪುಟ 154). ಈ ದಿಶೆಯಲ್ಲಿ ನಾವೂ ಸಹ ನಮ್ಮ ಸಾಮೂಹಿಕ ಹೊಣೆಗಾರಿಕೆಯನ್ನು ನಿರ್ವಹಿಸಲು ಯಾಕೆ ಸಾಧ್ಯವಾಗಲಿಲ್ಲವೆಂಬ ಕುರಿತು ಗಹನವಾಗಿ ಚಿಂತಿಸಬೇಕಾಗಿದೆ.

ತುರ್ತು ಪರಿಸ್ಥಿತಿಯ ಬಳಿಕ ಬೆಳವಣಿಗೆ

ಟ್ರೇಡ್ ಯೂನಿಯನ್ ರಂಗದಲ್ಲಿ ನಾವೇನು ಬೆಳವಣಿಗೆ ಸಾಧಿಸಿದ್ದೇವೋ ಅದೆಲ್ಲ ಸಾಧ್ಯವಾದದ್ದು ಮುಖ್ಯವಾಗಿ ತುರ್ತು ಪರಿಸ್ಥಿತಿಯ ನಂತರದ ಅವಧಿಯಲ್ಲಿ. ಈ ಅವಧಿಯಲ್ಲಿ ಬೇರೆ ಬೇರೆ ಟ್ರೇಡ್ ಯೂನಿಯನ್‌ಗಳಿಗೆ ಮುಂದಾಳತ್ವ ನೀಡಿರುವ ನಮ್ಮ ಪಕ್ಷದ ಮುಖಂಡರು ಅಂತಹ ಯೂನಿಯನ್‌ಗಳನ್ನು ಗೆದ್ದುಕೊಳ್ಳುವ ಮತ್ತು ಅವುಗಳನ್ನು ಉಳಿಸಿಕೊಂಡು ಆಯಾಯ ಟ್ರೇಡ್ ಯೂನಿಯನ್‌ಗಳ ಸದಸ್ಯರಿಗೆ ಕೆಲವು ಸವಲತ್ತುಗಳನ್ನು ಗಳಿಸಿಕೊಡುವುದವಷ್ಟರಲ್ಲೇ ಮಗ್ನರಾಗಿದ್ದರು. ಸಾಮೂಹಿಕ ಕೆಲಸಕ್ಕಾಗಿ ಅವರ ಬಳಿ ಸಮಯವೇ ಇರಲಿಲ್ಲ; ಅಥವಾ ಕೆಲವೊಮ್ಮೆ ಅವರಿಗೆ ಅದರ ಅಗತ್ಯವೂ ಕಂಡು ಬಂದಂತಿಲ್ಲ.

ಸಾಮಾನ್ಯ ಸದಸ್ಯರು ತೋರುವ ನಿರ್ಲಕ್ಷ್ಯ

ಪಕ್ಷದ ಕೇಂದ್ರ ಸಮಿತಿ ಹಾಗೂ ಪಕ್ಷದ ಮಹಾಧಿವೇಶನಗಳಲ್ಲಿ ನಮ್ಮ ಲೋಪ ದೋಷಗಳ ಬಗ್ಗೆ ಪದೇ ಪದೇ ಮಾಡಲಾಗಿರುವ ಟೀಕೆಗಳನ್ನು ಅರ್ಥಮಾಡಿಕೊಳ್ಳಬಲ್ಲ ಸಂಗಾತಿಗಳು ನಮ್ಮಲ್ಲಿ ಬಹಳ ಮಂದಿ ಇದ್ದಾರೆ. ಆದರೂ ಪಕ್ಷದ ಸಾಮಾನ್ಯ ಸದಸ್ಯರು ಛಲಹಿಡಿದು ಈ ದೌರ್ಬಲ್ಯಗಳನ್ನು ಸರಿಪಡಿಸುವ ಕೆಲಸ ಮಾಡುವಲ್ಲಿ ವಿಫಲರಾಗಿರುವುದು ತುಂಬಾ ಅಚ್ಚರಿಯ ಸಂಗತಿ. ಪಕ್ಷದ ಕಳೆದ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಬಹುಸಂಖ್ಯಾತ ಸಾಮಾನ್ಯ ಸದಸ್ಯರು ಕಾರ್ಮಿಕ ವರ್ಗದಿಂದ ಬಂದವರೇ ಆಗಿದ್ದರೂ ಈ ಕೆಲಸ ಅವರಿಂದ ಸಾಧ್ಯವಾಗದೇ ಹೋಗಿರುವುದು ಇನ್ನಷ್ಟು ಆಶ್ಚರ್ಯದ ವಿಷಯ. ನಮ್ಮ ಕೆ. ಜಿ. ಎಫ್. ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳಲ್ಲಿ ಶೇ. 53 ರಷ್ಟು ಸಾಮಾನ್ಯ ಸದಸ್ಯರು ಕಾರ್ಮಿಕ ವರ್ಗದಿಂದ ಬಂದಿದ್ದಾರೆ. ಹನ್ನೆರಡನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯಂತೆ ಇದು ಅತ್ಯಂತ ಗರಿಷ್ಟ ಪ್ರಮಾಣದ ಪ್ರಾತಿನಿಧ್ಯ. ಅಖಿಲಭಾರತ ಮಟ್ಟದ ಸರಾಸರಿಯೇ ಶೇ. [illegible]8 ಇದ್ದು ನಮ್ಮ ರಾಜ್ಯದ ಶೇಕಡ ಅಖಿಲ ಭಾರತಕ್ಕಿಂತ ಇಮ್ಮಡಿಯಾಗಿದೆ—ಪ್ರತಿನಿಧಿಗಳಲ್ಲಿ ಬಹುಸಂಖ್ಯಾತರು ದುಡಿಯುವ ವರ್ಗದ ಮೂಲದಿಂದಲೇ ಬಂದಿದ್ದರೂ ಈ ಕಾರ್ಮಿಕ ವರ್ಗದ ಹಿನ್ನೆಲೆ ಅವರಿಗೆ ಓದುವ, ಅರ್ಥಮಾಡಿಕೊಳ್ಳುವ, ವರದಿಗಳನ್ನು ಅಭ್ಯಸಿಸುವ ಮತ್ತು ಟ್ರೇಡ್ ಯೂನಿಯನ್ ರಂಗದಲ್ಲಿ ಕೇಂದ್ರ ಸಮಿತಿ ಹಾಗೂ ಪಕ್ಷದ ಮಹಾಧಿವೇಶನಗಳು ಹಾಕಿಕೊಟ್ಟಿರುವ ಧೋರಣೆಗಳೇನು ಎಂಬುದನ್ನು ತಿಳಿದುಕೊಳ್ಳುವ ಸಾಮರ್ಥ್ಯವನ್ನು ನೀಡಿಲ್ಲ. ಹಾಗಾಗಿ ಈ ಧೋರಣೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಮತ್ತು ಸೂಕ್ತ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ತಾವು ವಹಿಸಬೇಕಾದ ಪಾತ್ರವೇನು ಎಂಬ ಬಗ್ಗೆ ಅವರಿಗೆ ತಿಳುವಳಿಕೆ ಬಂದಿಲ್ಲವೆನ್ನುವುದು ಇದರಿಂದ ಗೊತ್ತಾಗುತ್ತದೆ. ಹನ್ನೆರಡನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯಿಂದ ಇನ್ನೂ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಹನ್ನೆರಡನೇ ಮಹಾಧಿವೇಶನಕ್ಕೆ ಹಾಜರಾಗಿದ್ದ ಪ್ರತಿನಿಧಿಗಳಲ್ಲಿ ಶೇ. 28 ರಷ್ಟು ಮಂದಿ ತುರ್ತು ಪರಿಸ್ಥಿತಿಯ ನಂತರ ಪಕ್ಷಕ್ಕೆ ಬಂದಿದ್ದಾರೆ. ಅದೇ ನಮ್ಮ ಕಳೆದ ರಾಜ್ಯ ಸಮ್ಮೇಳನಕ್ಕೆ ಹಾಜರಾದ ಪ್ರತಿನಿಧಿಗಳಲ್ಲಿ ತುರ್ತು ಪರಿಸ್ಥಿತಿಯ ಬಳಿಕ ಪಕ್ಷಕ್ಕೆ ಸೇರಿದವರ ಪ್ರಮಾಣ ಕೇವಲ ಶೇ. 29 ಮಾತ್ರ. ವಿಷಮ ಪರಿಸ್ಥಿತಿಯ ನಂತರದ ಅವಧಿಯಲ್ಲಿ ನಮ್ಮ ಟ್ರೇಡ್ ಯೂನಿಯನ್ ಚಳುವಳಿ ಅಪಾರವಾಗಿ ಬೆಳೆದಿದ್ದರೂ ಹೀಗಾಗಿದೆ. ಇದರರ್ಥ ಟ್ರೇಡ್ ಯೂನಿಯನ್ ಚಳುವಳಿ ಹೊಸದಾಗಿ ಎಲ್ಲೆಲ್ಲಿ ಬೆಳೆದಿದೆಯೋ ಅಲ್ಲಿ ನಮ್ಮ ಪಕ್ಷ ಬೆಳೆಯುಲಿಲ್ಲ. ಅಂಕಿ ಸಂಖ್ಯೆಗಳಿಂದ ಇನ್ನೂ ಒಂದು ಮುಖ್ಯವಾದ ಅಂಶ ತಿಳಿದು ಬರುತ್ತದೆ. ಅದೇನೆಂದರೆ ನಮ್ಮ ರಾಜ್ಯ ಸಮ್ಮೇಳನದಲ್ಲಿ ಪಾಲುಗೊಂಡ ಪ್ರತಿನಿಧಿಗಳಲ್ಲಿ ಬಹುಸಂಖ್ಯಾತರು ಕಾರ್ಮಿಕ ವರ್ಗದಿಂದ ಬಂದವರಷ್ಟೇ ಅಲ್ಲ; ಅವರು ಯುವಕರು ಕೂಡ. ಅಖಿಲ ಭಾರತ ಮಟ್ಟದಲ್ಲಿ ಬೇರೆ ಬೇರೆ ರಾಜ್ಯಗಳ ಸಮ್ಮೇಳನಕ್ಕೆ ಹಾಜರಾದ ಪ್ರತಿನಿಧಿಗಳಲ್ಲಿ ನಲವತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಕೇವಲ ಶೇ. 53. ಆದರೆ ನಮ್ಮ ರಾಜ್ಯದಲ್ಲಿ ಈ ಅದು ಶೇ. 74 ರಷ್ಟಿದೆ. ನಮ್ಮ ರಾಜ್ಯ ಸಮ್ಮೇಳನಕ್ಕೆ ಹಾಜರಾದ ಪ್ರತಿನಿಧಿಗಳ ವಯೋಮಿತಿ ಮತ್ತು ಅವರ ವರ್ಗ ಸ್ವರೂಪ ತುಂಬ ಚೆನ್ನಾಗಿದೆ. (ಕಾ॥ ಬಿ. ಟಿ. ಆರ್. ಅವರೇ ಈ ಅಂಶವನ್ನು ರಾಜ್ಯ ಸಮ್ಮೇಳನದಲ್ಲಿ ಉಲ್ಲೇಖಿಸಿದ್ದಾರೆ). ಆದರೆ ಈ ಪ್ರತಿನಿಧಿಗಳು ತುರ್ತು ಪರಿಸ್ಥಿತಿಯ ನಂತರ ಅಗಾಧವಾಗಿ ಬೆಳೆದು ಬಂದ ನಮ್ಮ ಟ್ರೇಡ್ ಯೂನಿಯನ್ ಚಳುವಳಿಯನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತಿಲ್ಲ ಎಂಬುದೂ ಅಷ್ಟೇ ನಿಜ. ವಿಷಮ ಪರಿಸ್ಥಿತಿಯ ಬಳಿಕ ನಮ್ಮ ಕಡೆಗೆ ಬಂದ ಸಮರಶೀಲ ಕಾರ್ಯಕರ್ತರನ್ನು ಉಪಯೋಗಿಸಿಕೊಂಡು ಪಕ್ಷವನ್ನು ಬೆಳೆಸುವಲ್ಲಿ ನಾವು ಗಂಭೀರವಾಗಿ ಸೋತಿದ್ದೇವೆ ಎನ್ನುವುದು ಇದರಿಂದ ಸಾಬೀತಾಗುತ್ತದೆ.

ಟ್ರೇಡ್ ಯೂನಿಯನ್ ಕಮ್ಯುನಿಸಮನ್ನು ಅಭ್ಯಾಸ ಮಾಡುವ ಒಂದು ಶಾಲೆ ಎಂದು ಕ್ರಾಂತಿವೀರ ಲೆನಿನ್ ಹೇಳಿದ್ದರು. ನಾವು ನಮ್ಮ ಶ್ರಮದಿಂದ, ಕಷ್ಟದಿಂದ ರಾತ್ರಿ ಹಗಲು ದುಡಿದು ನಡೆಸುತ್ತಿರುವ ಕಾರ್ಮಿಕ ಸಂಘಗಳು ಲೆನಿನ್ನರು ಹೇಳಿದಂತೆ ಕಮ್ಯುನಿಸಮನ್ನು ಅಭ್ಯಾಸ ಮಾಡುವ ಶಾಲೆಗಳಾಗಿವೆಯೇ ಅಥವಾ ಬರೇ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರ ಹೋರಾಡುವ ಸಂಘಟನೆಗಳಾಗಿವೆಯೇ ? ಕಾರ್ಮಿಕ ಮುಖಂಡರು ಆತ್ಮ ಸಂಶೋಧನೆ ಮಾಡಿಕೊಳ್ಳಲಿ.

ಸಮರ ಶೀಲರನ್ನು ಪಕ್ಷದ ಕಡೆಗೆ ಸೆಳೆದುಕೊಳ್ಳಲಾಗಿಲ್ಲ.

ತುರ್ತು ಪರಿಸ್ಥಿತಿಯ ನಂತರ ಟ್ರೇಡ್ ಯೂನಿಯನ್‌ಗಳ ಮುಂದಾಳತ್ವ ವಹಿಸಿದ್ದವರು ಪಕ್ಷದ ಮುಖಂಡರೇ ಆಗಿದ್ದರೂ ಮತ್ತು ಅವರಿಗೆ ಈ ಗಂಭೀರ ವೈಫಲ್ಯದ ಅರಿವು ಚೆನ್ನಾಗಿದ್ದರೂ ಸಮರ ಶೀಲ ಕಾರ್ಯಕರ್ತರನ್ನು ಪಕ್ಷದ ಕಡೆಗೆ ಗೆದ್ದುಕೊಳ್ಳಲು ನಮ್ಮಿಂದ ಯಾಕಾಗಲಿಲ್ಲ ಎಂಬ ಪ್ರಶ್ನೆಯನ್ನು ಕೇಳಲೇಬೇಕಾಗುತ್ತದೆ.

ಪಕ್ಷದ ಕೇಂದ್ರ ಸಮಿತಿ 1983ರಲ್ಲಿ ಸಿದ್ಧಪಡಿಸಿದ 'ಕಾರ್ಮಿಕ ರಂಗದಲ್ಲಿ ಕರ್ತ

ವ್ಯಗಳು' ಎಂಬ ದಸ್ತಾವೇಜಿನಲ್ಲಿ ನಮಗೆ ಈ ಪ್ರಶ್ನೆಗೆ ಉತ್ತರ ಸಿಗುತ್ತದೆ. ಈ ದಸ್ತಾವೇಜಿನ 76ನೇ ಪುಟದಲ್ಲಿ ಹೀಗೆ ಹೇಳಲಾಗಿದೆ. "ಇಂದಿನ ಪರಿಸ್ಥಿತಿಗೆ-ಅಂದರೆ ಕಾರ್ಮಿಕರನ್ನು ಪಕ್ಷದ ಕಡೆಗೆ ಆಕರ್ಷಿಸುವಲ್ಲಿ, ಪಕ್ಷವನ್ನು ಕಟ್ಟುವ ಮತ್ತು ಕಾರ್ಮಿಕರ ಪ್ರಜ್ಞೆಯನ್ನು ಎತ್ತರಕ್ಕೆ ಕೊಂಡೊಯ್ಯುವ ಕೆಲಸದಲ್ಲಿ ನಾವು ಸೋತಿರುವುದಕ್ಕೆ ಟ್ರೇಡ್ ಯೂನಿಯನ್ ಚಳುವಳಿಯಲ್ಲಿರುವ ದೋಷಗಳೇ ಕಾರಣವೆನ್ನುವುದು ಮಾರ್ಕ್ಸ್ ವಾದಕ್ಕೆ ವಿರುದ್ಧವಾದ ತಿಳುವಳಿಕೆ."

ಈ ದಸ್ತಾವೇಜಿನಲ್ಲಿ ಹೇಳಲಾಗಿರುವ ಇನ್ನೂ ಕೆಲವು ಅಂಶಗಳು ಹೀಗಿವೆ— "ಸಮಾಜವಾದಿ ಪ್ರಜ್ಞೆಯನ್ನು ಬೆಳೆಸುವ ಹೊಣೆಗಾರಿಕೆ ಪಕ್ಷದ್ದೇ ಹೊರತು ಟ್ರೇಡ್ ಯೂನಿಯನ್‌ಗಳದ್ದಲ್ಲ, ಟ್ರೇಡ್ ಯೂನಿಯನ್ ಹೋರಾಟಗಳು ತುಂಬಾ ಮಂದಿ ಕಾರ್ಮಿಕರನ್ನೂ, ಜನಸಾಮಾನ್ಯರನ್ನೂ ಆಕರ್ಷಿಸುತ್ತವೆ ನಿಜ, ಆದರೆ ಅಲ್ಲಿ ನಡೆಸಲಾಗುವ ಸಭೆ, ಹಂಚುವ ಕರಪತ್ರಗಳು ಇತ್ಯಾದಿಗಳೆಲ್ಲ ಕೇವಲ ಚಳುವಳಿಯ ಸ್ವರೂಪದ್ದಾಗಿರುತ್ತವೆ. ಅವರ ನಡುವೆ ಪ್ರಚಾರ ನಡೆಸುವ ಹೊಣೆಗಾರಿಕೆ ಪಕ್ಷದ್ದು" ಪ್ರಚಾರವನ್ನು ಬರಹದ ಮೂಲಕ, ಪುಸ್ತಕಗಳು ಮತ್ತಿತರ ಸಾಹಿತ್ಯದ ಮುಖಾಂತರ ಮಾಡಬೇಕೆಂದೂ ಆ ಮೂಲಕ ಕಾರ್ಮಿಕರ ಪ್ರಜ್ಞೆಯನ್ನು ಸಮಾಜವಾದಿ ಪ್ರಜ್ಞೆಯ ಸ್ತರಕ್ಕೆ ಎತ್ತರಿಸಬೇಕೆಂದೂ ಈ ದಸ್ತಾವೇಜಿನಲ್ಲಿ ಹೇಳಲಾಗಿದೆ.

ಕಾರ್ಖಾನೆ ಪ್ರಜ್ಞೆ—ಒಂದು ದೊಡ್ಡ ಆತಂಕ

"ಕಾರ್ಮಿಕರಂಗದಲ್ಲಿ ಕರ್ತವ್ಯಗಳು" ದಸ್ತಾವೇಜಿನಲ್ಲಿ ನಮಗೆ ನೀಡಲಾಗಿರುವ ಸ್ಪಷ್ಟವಾದ ನಿರ್ದೇಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಸೋತಿದ್ದೇವೆ ಎನ್ನುವುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಮಿಲಿಯಾಂತರ ಜನ ಮುಗ್ಗಟ್ಟಿನ ಹೊರೆಯಿಂದ ತತ್ತರಿಸುತ್ತಿದ್ದ ಕಾಲದಲ್ಲಿ, ಮಾಲೀಕವರ್ಗ ದುಡಿಯುವ ಜನರ ಮೇಲೆ ಆಕ್ರಮಣಗಳ ಸುರಿಮಳೆಗರೆಯುತ್ತಿದ್ದಾಗಲೂ ಅದನ್ನು ಎದುರಿಸಿ ಹೋರಾಡುವಲ್ಲಿ ಕಾರ್ಮಿಕವರ್ಗ ವಿಫಲವಾಗಿರುವುದಕ್ಕೆ ಕಾರ್ಮಿಕವರ್ಗದಲ್ಲಿರುವ 'ಕಾರ್ಖಾನೆಯ ಪ್ರಜ್ಞೆ'ಯೇ ಮೂಲ ಕಾರಣವೆಂದು 'ರಾಜಕೀಯ ಸಂಘಟನಾತ್ಮಕ ವರದಿ' ಹೇಳುತ್ತದೆ. ಟ್ರೇಡ್ ಯೂನಿಯನ್ ದಸ್ತಾವೇಜಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ಧೋರಣೆಯನ್ನು ಕಾರ್ಮಿಕ ಸಂಘಟನೆಗಳನ್ನು ಸಾರ್ವತ್ರಿಕವಾಗಿ ಬಾಧಿಸುತ್ತಿರುವ ಕಾಯಿಲೆ ಎಂದೂ ರಾಜಕೀಯ ಸಂಘಟನಾತ್ಮಕ ವರದಿ ಹೇಳಿಕೆ, ಕೆಲವು ಅಪರೂಪದ ಸಂದರ್ಭಗಳನ್ನು ಬಿಟ್ಟರೆ ಈ ಬಗ್ಗೆ ಯಾವುದೇ ತಿಳುವಳಿಕೆ ಉಂಟಾಗಿರುವ ಸೂಚನೆ ಎಲ್ಲೂ ಕಾಣ ಸಿಗುತ್ತಿಲ್ಲ, ಬಹುಶಃ ಇದಕ್ಕೆ ತಮಿಳುನಾಡು ಒಂದೇ ಅಪವಾದ ಇಲ್ಲಿನ ರಾಜ್ಯ ಸಮಿತಿ ನೀಡಿರುವ ವರದಿಯ ಪ್ರಕಾರ 'ಕಾರ್ಮಿಕ ರಂಗದಲ್ಲಿ ಕರ್ತವ್ಯಗಳು' ದಸ್ತಾವೇಜಿನಲ್ಲಿ ಹಾಕಿಕೊಡಲಾಗಿರುವ ನಿರ್ದೇಶಗಳನ್ನು ತಮಿಳುನಾಡಿನಲ್ಲಿ ಮುತುವರ್ಜಿ ವಹಿಸಿ ಕಾರ್ಯರೂಪಕ್ಕೆ ತರಲಾಗುತ್ತಿದೆ. (ಪುಟ. 74)

ನಮ್ಮ ಮುಂದಿರುವ ಪ್ಲೀನಂ

ಟ್ರೇಡ್ ಯೂನಿಯನ್ ರಂಗಕ್ಕೆ ಸಂಬಂಧಿಸಿದಂತೆ ಮುಂದೆ ನಡೆಯುವ ಪ್ಲೀನಮ್‌ಗೆ ವರದಿಯನ್ನು ಸಿದ್ಧಪಡಿಸಲು ಅನುಕೂಲವಾಗುವಂತೆ ರಾಜ್ಯ ಸಮಿತಿಯು ಬೇರೆ ಬೇರೆ ಪ್ರದೇಶಗಳಿಂದ ವರದಿಗಳನ್ನು ಸಂಗ್ರಹಿಸುತ್ತಿದೆ. ಪ್ಲೀನಮ್ ಯಶಸ್ವಿ ನಡೆಯಬೇಕಾದರೆ ಪಕ್ಷದ ಸದಸ್ಯರೆಲ್ಲರೂ ಟ್ರೇಡ್ ಯೂನಿಯನ್ ರಂಗಕ್ಕೆ ಸಂಬಂಧಿಸಿದಂತೆ ಪಕ್ಷದ ಧೋರಣೆಯನ್ನು ಕೂಲಂಕುಷವಾಗಿ ಅಭ್ಯಾಸ ಮಾಡಿ ತಮ್ಮ ಸಂಘಟನಾತ್ಮಕ ಕರ್ತವ್ಯಗಳನ್ನು ಚೆನ್ನಾಗಿ ಅರಿತುಕೊಂಡಿರಬೇಕಾದುದು ತೀರಾ ಅಗತ್ಯ. ಹಾಗೆ ಮಾಡಿದರೆ ಮಾತ್ರವೇ ಸರಿಯಾದ ಧೋರಣೆಯೊಂದನ್ನು ನಿರೂಪಿಸಲು ಮತ್ತು ಅದನ್ನು ಅನುಷ್ಠಾನಕ್ಕೆ ತರುವಲ್ಲಿ ಪಕ್ಷದ ರಾಜ್ಯ ಘಟಕಕ್ಕೆ ಅವರು ನೆರವಾಗಲು ಸಾಧ್ಯ. ಈ ರೀತಿ ಅಭ್ಯಾಸ ಮಾಡದೇಹೋದರೆ ಸಂಗಾತಿಗಳು ತಪ್ಪುಗಳನ್ನು ಅಲಕ್ಷಿಸಿ ಬಿಡುವ ಸಾಧ್ಯತೆ ಇದೆ, ಅಥವಾ ತಮ್ಮ ಸಾಧನೆಗಳನ್ನು ದೊಡ್ಡದಾಗಿ ಹೇಳಿಕೊಳ್ಳಬಹುದು. ಇಲ್ಲವೇ ಸಾಧನೆಗಳ ಬಗ್ಗೆ ಏನೂ ಹೇಳದೆ ಔಪಚಾರಿಕವಾಗಿ ವರದಿ ಸಲ್ಲಿಸುವ ಅಪಾಯ ಇದೆ. ಆದುದರಿಂದ ಈ ಲೇಖನದ ಎರಡನೇ ಭಾಗದಲ್ಲಿ ಟ್ರೇಡ್ ಯೂನಿಯನ್‌ಗಳ ಕಾರ್ಯದ ಕೆಲವೊಂದು ಮುಖ್ಯ ಅಂಶಗಳ ಕುರಿತು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ.

> ಎರಡು ಹೊತ್ತು ಗಂಜಿಗೂ ಸಾಲದಷ್ಟು ಕಡಿಮೆ ಸಂಬಳದಲ್ಲಿ ದುಡಿಯುತ್ತಿರುವವರು ನಮ್ಮ ಸುತ್ತಮುತ್ತಲ ಪ್ರದೇಶದಲ್ಲಿ ಕಾಣಸಿಗುತ್ತಾರೆ. ಅವರತ್ತ ಗಮನ ಹರಿಸುವಲ್ಲಿ, ಅವರನ್ನು ಸಂಘಟಿಸುವುದರಲ್ಲಿ, ಅವರ ಜೀವನಮಟ್ಟ ಎತ್ತರಿಸಲು ಹೋರಾಟ ನಡೆಸುವುದರಲ್ಲಿ ನಾವು ವಿಫಲರಾಗಿದ್ದೇವೆ. ಅಂಥ ವೈಫಲ್ಯವನ್ನು ಬಿಟ್ಟುಬಿಡೋಣ. ಅಂಥವರ ಸಂಘಟನೆಗೆ ಮುಂದಾಗೋಣ.

ತುರ್ತು ಪರಿಸ್ಥಿತಿಯ ನಂತರದ ಅವಧಿಯಲ್ಲಿ ನಮ್ಮ ರಾಜ್ಯದಲ್ಲಿ ಸಿ.ಐ.ಟಿ.ಯು. ಸದಸ್ಯತ್ವ ಜಾಸ್ತಿಯಾಗಿದೆ ಎಂದು ಮೊದಲೇ ಹೇಳಲಾಗಿದೆ. ವಾಸ್ತವವಾಗಿ ಈ ಸಂಖ್ಯೆ ಇಮ್ಮಡಿಯಾಗಿದೆ. ಕಳೆದ ಹದಿನೈದು ವರ್ಷಗಳಲ್ಲಿ ಸಿ.ಐ.ಟಿ ಯು. ನ ಸದಸ್ಯತನ 25,000 ದಿಂದ 50,000 ಕ್ಕೆ ಏರಿದೆ; ಅಂದರೆ ಪ್ರತಿವರ್ಷ ಸುಮಾರು 1600 ರಷ್ಟು ಹೆಚ್ಚು ಸದಸ್ಯರು ಸಿ ಐ. ಟಿ. ಯು ಗೆ ಸೇರ್ಪಡೆಯಾಗುತ್ತಿದ್ದಾರೆ.

ಈ ಅವಧಿಯಲ್ಲಿ ನಮ್ಮ ರಾಜ್ಯದ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆಯೂ 1971 ರಲ್ಲಿದ್ದ 2·8 ಲಕ್ಷದಿಂದ 19೮3ರಲ್ಲಿ 5.47 ಲಕ್ಷಕ್ಕೇರಿದೆ. ಅಂದರೆ ಪ್ರತಿವರ್ಷ ಕಾರ್ಮಿಕರ ಸಂಖ್ಯೆಯಲ್ಲಿ 24,000 ದಷ್ಟು ಏರಿಕೆಯಾಗಿದ್ದರೆ ಸಿ. ಐ. ಟಿ. ಯು. ಸದಸ್ಯರ ಸಂಖ್ಯೆ ಪ್ರತಿ ಇಪ್ಪತ್ನಾಲ್ಕಕ್ಕೆ ಒಬ್ಬರಂತೆ ಹೆಚ್ಚಾಗಿದೆ. ಅಷ್ಟಲ್ಲದೆ ಸಿ. ಐ. ಟಿ. ಯು. ಸದಸ್ಯರೆಂದರೆ ಫ್ಯಾಕ್ಟರಿ ಕಾರ್ಮಿಕರು ಮಾತ್ರವೇ ಅಲ್ಲ. ನಮ್ಮ ರಾಜ್ಯದಲ್ಲಿನ ಸಂಘಟಿತ ಕ್ಷೇತ್ರದ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರ ಸಂಖ್ಯೆ 1981 ರಲ್ಲಿ 11·35 ಲಕ್ಷ. ಅದೇ ವೇಳೆಗೆ ಫ್ಯಾಕ್ಟರಿಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರ ಸಂಖ್ಯೆ 4·92 ಲಕ್ಷ ದಷ್ಟಿತ್ತು. (ಈ ಎಲ್ಲ ಅಂಕಿ ಸಂಖ್ಯೆಗಳನ್ನು ಟಾಟಾ ಕನ್ಸಲ್ಟನ್ಸಿ ಸರ್ವಿಸ್‌ನವರ ಸ್ಟಾಟಿಸ್ಟಿಕಲ್ ಔಟ್‌ಲೈನ್ ಆಫ್ ಇಂಡಿಯಾದಿಂದ ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಅಂಕಿ ಸಂಖ್ಯೆಗಳಿಂದ ಉದ್ಧರಿಸಲಾಗಿದೆ). ಸ್ಟಾಟಿಸ್ಟಿಕಲ್ ಔಟ್‌ಲೈನ್ ಆಫ್ ಇಂಡಿಯಾದ ಅಂಕಿ ಸಂಖ್ಯೆ ಮತ್ತು ನಮ್ಮ ರಾಜಕೀಯ ಸಂಘಟನಾತ್ಮಕ ವರದಿಯಲ್ಲಿ ಲಭ್ಯವಿರುವ ಸಿ.ಐ.ಟಿ.ಯು. ಸದಸ್ಯತನದ ಸಂಖ್ಯೆ ಇವೆರಡನ್ನು ತುಲನೆ ಮಾಡಿ ನೋಡಿದರೆ ಅತ್ಯಂತ ಮುಂದುವರಿದ ರಾಜ್ಯಗಳಾದ ಪ. ಬಂಗಾಳ ಮತ್ತು ಕೇರಳಗಳಲ್ಲಿ ಕರ್ನಾಟಕ್ಕಿಂತ ಬೇರೆಯೇ ಆದ ಪರಿಸ್ಥಿತಿ ಇರುವುದನ್ನು ಕಾಣಬಹುದು. ಪ. ಬಂಗಾಳದಲ್ಲಿ 1971ರಲ್ಲಿ 8·39 ಲಕ್ಷದಷ್ಟಿದ್ದ ಕೈಗಾರಿಕಾ ಕಾರ್ಮಿಕರ ಸಂಖ್ಯೆ 1983 ರಲ್ಲೂ ಹೆಚ್ಚು ಕಡಿಮೆ ಅಷ್ಟೇ ಅಂದರೆ 9·05 ಲಕ್ಷದಷ್ಟಿದೆ. ಉದ್ಯೋಗಗಳ ನಿರ್ಮಾಣದಲ್ಲಿ ತೀವ್ರ ಸ್ಥಗಿತತೆ ಇದ್ದಾಗಲೂ ಸಿ. ಐ ಟಿ. ಯು. ಸದಸ್ಯತನ ಪ್ರತಿವರ್ಷ ಸರಾಸರಿ 12,000 ದಂತೆ ಹೆಚ್ಚಾಗಿದೆ. ಅದೇ ರೀತಿ ಕೇರಳದಲ್ಲಿ 1971 ರಲ್ಲಿ ಒಟ್ಟು ಕೈಗಾರಿಕಾ ಕಾರ್ಮಿಕರ ಸಂಖ್ಯೆ 2·08 ಲಕ್ಷ. ಇದು 1980 ರಲ್ಲಿ 3·02 ಲಕ್ಷಕ್ಕೇರಿ 1983 ರಷ್ಟಕ್ಕೆ ಮತ್ತೆ 2·9 ಲಕ್ಷಕ್ಕೆ ಇಳಿದಿದೆ. ಹಾಗಿದ್ದರೂ ಸಿ. ಐ. ಟಿ. ಯು. ಸದಸ್ಯತನ 1971 ರಲ್ಲಿ 0·99 ಲಕ್ಷವಿದ್ದರೆ 1983 3·22 ಲಕ್ಷಕ್ಕೆ ಬೆಳೆದಿದೆ (ಸಿ. ಐ. ಟಿ. ಯು. ಸದಸ್ಯತನದ ಸಂಖ್ಯೆ ಬಿಟ್ಟು ಕೈಗಾರಿಕಾ ಕಾರ್ಮಿಕರ ಸಂಖ್ಯೆಗಿಂತಲೂ ಹೆಚ್ಚಾಗಿರುವುದನ್ನು ಗಮನಿಸಬೇಕು. ಕಾರಣವೆಂದರೆ ಸಿ. ಐ. ಟಿ. ಯು. ಸದಸ್ಯತ್ವ ಬಹುಕಾಲ ಕೈಗಾರಿಕೇತರ ಕಾರ್ಮಿಕರನ್ನು ಒಳಗೊಂಡಿದೆ.) ಕೇರಳದಲ್ಲಿ ಸಿ. ಐ. ಟಿ. ಯು. ಸದಸ್ಯತ್ವ ವರ್ಷಕ್ಕೆ 18,583 ರಂತೆ ಹೆಚ್ಚಾಗುತ್ತಿದೆ.

ಕೈಗಾರಿಕಾ ಕಾರ್ಮಿಕರ ಸಂಖ್ಯೆ ತೀವ್ರಗತಿಯಲ್ಲಿ ವೃದ್ಧಿಯಾಗುತ್ತಿರುವುದು ಕರ್ನಾಟಕ ಮತ್ತು ಮಹಾರಾಷ್ಟ್ರ ಈ ಎರಡು ರಾಜ್ಯಗಳಲ್ಲಿ ಮಾತ್ರ. ಆದರೆ ಇವೆರಡೂ ರಾಜ್ಯಗಳಲ್ಲಿ ನಮ್ಮ ಟ್ರೇಡ್ ಯೂನಿಯನ್ ಚಳುವಳಿ ದುರ್ಬಲವಾಗಿದೆ. ಮಾಲೀಕ ವರ್ಗ ನಮ್ಮ ರಾಷ್ಟ್ರದಲ್ಲಿ ಕೊಬ್ಬಿ ಬೆಳೆಯುವುದಕ್ಕೆ ಸಿ. ಐ. ಟಿ. ಯು. ನ ನಿಧಾನಗತಿಯ ಬೆಳವಣಿಗೆಯೇ ಸಾಕಷ್ಟು ಅವಕಾಶ ಮಾಡಿಕೊಟ್ಟಿದೆ. ಇದು ಅಖಿಲ ಭಾರತ ಚಳುವಳಿಯೊಂದರ ಭಾಗವಾಗಿರುವ ನಮ್ಮ ಮೇಲಿನ ಹೊಣೆಗಾರಿಕೆಯನ್ನು ಇನ್ನಷ್ಟು ಹೆಚ್ಚಿಸಿದೆ.

ಔದ್ಯಮೀಕರಣ ಅತಿ ಹೆಚ್ಚಿರುವ ಪ್ರದೇಶದಲ್ಲೇ ನಮ್ಮ ದೌರ್ಬಲ್ಯ

ಅತ್ಯಂತ ದೊಡ್ಡ ಕೈಗಾರಿಕಾ ಕೇಂದ್ರವಾಗಿರುವ ಬೆಂಗಳೂರಿನಲ್ಲಿ ಕಮ್ಯೂನಿಸ್ಟ್ ಪಕ್ಷ ಒಂದೇ ಆಗಿದ್ದಾಗಲೂ ಇಲ್ಲಿನ ಟ್ರೇಡ್ ಯೂನಿಯನ್ ಚಳುವಳಿ

ಕೊನೆಯ ಬಯಕೆ

ಆಲ್ಟೋನಾದಲ್ಲಿ ನಾಜೀ ಪಡೆಗಳು
ನಾಲ್ವರು ಕ್ರಾಂತಿಕಾರಿಗಳನ್ನು ಹಿಡಿದಾಗ
ಅವರ ಶಿರಚ್ಛೇದನ ವೀಕ್ಷಿಸಲು
ಎಪ್ಪತ್ತೈದು ನಾಗರೀಕರನ್ನು ಎಳೆದು ತರಲಾಯಿತು.
ಶಿಕ್ಷೆ ವಿಧಿಸುವ ಮುನ್ನ
ಕೊನೆಯ ಬಯಕೆ ಏನೆಂದು ಕೇಳಿದಾಗ
ಅವರಲ್ಲೊಬ್ಬ ಹೇಳಿದ :
'ನನ್ನನ್ನು ಬಂಧಿಸಿರುವ ಈ
ಸರಪಳಿಗಳನ್ನು ಬಿಚ್ಚಿ
ನಾನು ಮತ್ತೊಮ್ಮೆ ಬಂಧಮುಕ್ತನಾಗಬೇಕು'
ಸರಪಳಿಗಳನ್ನು ಬಿಚ್ಚಿದ ಒಡನೆ ಆತ
ತನ್ನ ಬಲವನ್ನೆಲ್ಲಾ ಮುಷ್ಠಿಯೊಳಗೆ ತಂದುಕೊಂಡು
ನಾಜೀ ಕಮಾಂಡರನ ಮುಸುಡಿಯ ಮೇಲೆ ಗುದ್ದಿದ
ಕೊನೆಯ ಬಯಕೆ ಈಡೇರಿದ ಮರುಗಳಿಗೆ
ಅವನ ರುಂಡ ಮಣ್ಣಿನಲ್ಲಿ ಉರುಳಿ ಹೋಯಿತು.

—ಬ್ರೆಕ್ಟ್
—ಅನು : ಉದಯ

ಬ್ರಿಟಿಷ್ ಕಾರ್ಮಿಕರು ಗೋರ್ಬಚೆವ್‌ರ ಮಾತಿಗೇಕೆ ಕಿವಿ ಕೊಡುತ್ತಾರೆ ?

ಗೋರ್ಬಚೆವ್‌ರಲ್ಲಿ ಬ್ರಿಟನ್ನಿನ ಜನ ಜಗತ್ತಿನಾದ್ಯಂತವಿರುವ ದುಡಿಯುವ ಜನರ ಹಿತಾಸಕ್ತಿಗಳನ್ನು ಶಾಂತಿ, ಉದ್ಯೋಗ, ಇಳಿ ವಯಸ್ಸಿನಲ್ಲಿ ಭದ್ರತೆ ಮತ್ತು ಮಾನವ ಯೋಗ್ಯ ಜೀವನ ಪರಿಸ್ಥಿತಿಗಳು ಅವರ ಆಕಾಂಕ್ಷೆಗಳನ್ನು ವ್ಯಕ್ತಪಡಿಸುವ ಒಬ್ಬ ನಾಯಕನನ್ನು ಕಾಣುತ್ತಿದ್ದಾರೆ.........ಗೋರ್ಬಚೆವ್‌ರ ಮಾತಿಗೆ ಕಿವಿಗೊಡಲು (ಬ್ರಿಟನ್ನಿನ) ಜನ ಸಿದ್ಧರಿರುವ ಇನ್ನೊಂದು ಕಾರಣವನ್ನು ತಿಳಿಸಬಯಸುತ್ತೇವೆ. ಅದೆಂದರೆ ಆರ್ಥಿಕ ಬೆಳವಣಿಗೆ ಸಾಧಿಸಲಿಕ್ಕಾಗಿ ರಕ್ಷಣೆಯ ಮೇಲೆ ಖರ್ಚು ಕಡಿಮೆ ಮಾಡಬೇಕೆಂದು ಸೋವಿಯತ್ ಒಕ್ಕೂಟ ಬಯಸುತ್ತದೆ. ಅದರ ಫಲವಾಗಿ ನಾವು ರಕ್ಷಣೆಯ ಮೇಲೆ ಖರ್ಚು ಕಡಿಮೆ ಮಾಡುತ್ತೇವೆ ಎಂದು ಅವರು ತರ್ಕಿಸುತ್ತಾರೆ. ನಾವು ಮತ್ತು ಸೋವಿಯತ್ ಒಕ್ಕೂಟ ಒಂದೇ ಸಂಗತಿಯನ್ನು ಬಯಸುವುದರಿಂದ ಗೋರ್ಬಚೆವ್ ನಮ್ಮ ಪರವಾಗಿ ಮಾತನಾಡಿದಂತಾಗುತ್ತದೆ.

—ಬ್ರಿಟಿಷ್ ಕಾರ್ಮಿಕ ವರ್ಗದ ಪ್ರಸಿದ್ಧ ಪ್ರತಿನಿಧಿ ಹಾಗೂ ಲೇಬರ್ ಎಂ. ಪಿ. ಆ್ಯಂತೋಣಿ ಬೆನ್.

ದುರ್ಬಲವಾಗಿತ್ತು. ಕೆಲವು ಮುಖ್ಯ ಕೈಗಾರಿಕೆಗಳಾದ ಹೆಚ್. ಎಂ. ಟಿ., ಬಿ. ಇ. ಎಲ್., ಹೆಚ್. ಎ. ಎಲ್., ಐ. ಟಿ. ಐ. ಮತ್ತಿತರ ಕಡೆ ಕಾರ್ಮಿಕ ಸಂಘಗಳ ಮುಂದಾಳುತ್ವ ಒಂದಲ್ಲೊಂದು ಶರ್ತಿ ನಮ್ಮ ಯಾವುದಾದರೊಬ್ಬ ಸಂಗಾತಿಯ ಕೈಯಲ್ಲಿ ಇದ್ದದ್ದು ನಿಜ. ಆದರೂ ಈ ಕೈಗಾರಿಕೆಗಳ ಟ್ರೇಡ್ ಯೂನಿಯನ್‌ಗಳಲ್ಲಿದ್ದ ನಮ್ಮ ಪಕ್ಷದ ಸಂಘಟನೆ ತೀರಾ ದುರ್ಬಲವಾಗಿದ್ದ ಕಾರಣ ಪಕ್ಷವು 1964 ರಲ್ಲಿ ಇಬ್ಭಾಗವಾದಾಗ ಈ ಯಾವ ಟ್ರೇಡ್ ಯೂನಿಯನ್‌ಗಳೂ ಸಿ. ಪಿ. ಐ. (ಎಂ) ನ ವಶಕ್ಕೆ ಬಂದಿರಲಿಲ್ಲ. ಈ ಯೂನಿಯನ್‌ಗಳನ್ನು ಪರಿಷ್ಕರಣವಾದಿಗಳು ತಮ್ಮ ಕಪಿಮುಷ್ಟಿಯಿಂದ ಹೊರಕ್ಕೆ ಬಿಡಲೇ ಇಲ್ಲವೆಂದು ನಾವು ಅವರನ್ನು ದೂರುವುದು ಸಹಜ. ಆದರೆ ನಮ್ಮದೇ ದೌರ್ಬಲ್ಯಗಳಿಗೆ ನಾವು ಯಾರನ್ನೂ ದೂಷಿಸುವ ಹಾಗಿಲ್ಲ. ತುರ್ತು ಪರಿಸ್ಥಿತಿ ಕೊನೆಗೊಳ್ಳುವವರೆಗೂ ನಾವು ನಮ್ಮ ಹಲವಾರು ಸಮಸ್ಯೆಗಳಲ್ಲಿ ಮುಳುಗಿದ್ದೆವು. ಹನ್ನೊಂದನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯಲ್ಲಿ ಹೇಳಲಾಗಿರುವಂತೆ, "ಅವಿಭಕ್ತ ಸಿ. ಪಿ. ಐ. ಹಲವಾರು ಬೃಹತ್ ಕೈಗಾರಿಕಾ ಮತ್ತು ಶೈಕ್ಷಣಿಕ ಕೇಂದ್ರಗಳನ್ನು ಸಂಪೂರ್ಣವಾಗಿ ಅಲಕ್ಷಿಸಿತ್ತು. ಪರಿಷ್ಕರಣವಾದಿಗಳನ್ನು ದೂರ ಮಾಡಿ ನಾವು ಪ್ರತ್ಯೇಕ ಸಿ.ಪಿ.ಐ. (ಎಂ) ಆದಾಗ ಇದೇ ಸ್ಥಿತಿಗತಿ ನಮಗೆ ಸಿ.ಪಿ.ಐ. ನ ಬಳುವಳಿಯಾಗಿ ಬಂದಿತ್ತು." ವರದಿಯಲ್ಲಿ ಮುಂದೆ ಹೇಳಲಾಗಿರುವಂತೆ "ಸಿ.ಪಿ.ಐ. (ಎಂ) ಸಂಘಟನೆಗೆ ಸಂಬಂಧಿಸಿದಂತೆ 1967 ರ ಮತ್ತು 1973ರ ನಿರ್ಣಯಗಳನ್ನು ಅಂಗೀಕರಿಸಿರುವ ಕಾರಣ ಕರ್ನಾಟಕಕ್ಕೆ ಪೊಲಿಟ್ ಬ್ಯೂರೋ ಮತ್ತು ಕೇಂದ್ರ ಸಮಿತಿಯು ಧೋರಣೆಯನ್ನೇ ಅನ್ವಯಿಸಲಾಗುವುದು" ಎಂಬ ನೆಪದಲ್ಲಿ ಈ ಸ್ಥಿತಿಗತಿಯನ್ನು ಸಮರ್ಥಿಸಿಕೊಳ್ಳಲಾಯಿತು. ಉದಾಸೀನತೆ ಮತ್ತು ಅಪ್ಪಟ ನಿರ್ಲಕ್ಷ್ಯಕ್ಕೆ "ಕ್ರಾಂತಿಕಾರಿ ಕಣ್ಣೋಟ" ಮತ್ತು "ಪಕ್ಷದ ಸಂಘಟನಾ ನೀತಿ"ಯ ವೇಷ ತೊಡಿಸಲಾಯಿತು. ಇದರಿಂದಾಗಿ ರಾಜ್ಯದ ಬೃಹತ್ ಕೈಗಾರಿಕಾ ಕೇಂದ್ರಗಳಲ್ಲೂ ಸಾಂಸ್ಕೃತಿಕ ಕೇಂದ್ರಗಳಲ್ಲೂ ಪಕ್ಷದ ರಾಜಕೀಯ ಮತ್ತು ಸಂಘಟನಾತ್ಮಕ ಚಟುವಟಿಕೆಗಳಲ್ಲಿ ವಿಸ್ತರಿಸಲು ಅಪಾರ ಸಾಧ್ಯತೆಗಳಿದ್ದ ಕಾಲದಲ್ಲಿ ಪಕ್ಷದ ಮುಂದಾಳುತ್ವವು ಸಂಪೂರ್ಣ ನಿಷ್ಕ್ರಿಯವಾಗಿದ್ದು ತನ್ನದೇ ಚಿಪ್ಪಿನೊಳಗೆ ಹುದುಗಿಕೊಳ್ಳಲಾರಂಭಿಸಿತು.

ರಾಜ್ಯದಲ್ಲಿ 1978 ರಲ್ಲಿ ಪಕ್ಷದ ಪುನಃ ಸಂಘಟನೆಯಾದದ್ದು ಮತ್ತು ಆ ಬಳಿಕ ಆದ ಪ್ರಗತಿ ಇತ್ಯಾದಿಗಳ ಬಗ್ಗೆ ಉಲ್ಲೇಖಿಸಿರುವ ವರದಿ ಉದಾರವಾದ ಮತ್ತು ವಿಭಜನವಾದದಂತಹ ಅಪಾಯಕಾರಿ ಪ್ರವೃತ್ತಿಗಳ ಕುರಿತೂ ನಮಗೆ ಎಚ್ಚರಿಕೆ ನೀಡಿದೆ.

ಹನ್ನೆರಡನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯೂ ಈ ಅಪಾಯಕಾರಿ ತಪ್ಪುಗಳ ಬಗ್ಗೆ ಹೇಳದೆಯಿಲ್ಲದೆ 1982ರಲ್ಲಿ ಇದನ್ನು ಸರಿಪಡಿಸಲು ಕೈಗೊಂಡ ಕ್ರಮಗಳನ್ನು ಉಲ್ಲೇಖಿಸಿದೆ. 'ವೈಯಕ್ತಿಕ ಕಾರ್ಯನಿರ್ವಹಣೆಯ' ಸಮಸ್ಯೆಯನ್ನು ನಾವು ಇದೀಗ ಮತ್ತೊಮ್ಮೆ ಎದುರಿಸುತ್ತಿದ್ದೇವೆ. ಹನ್ನೆರಡನೇ ಮಹಾಧಿವೇಶನದ ವರದಿ ನಮಗೀಗಾಗಲೇ ಈ ಕುರಿತು ಎಚ್ಚರಿಕೆಯನ್ನು ನೀಡಿದೆ. (ಪು. 201).

ಪ. ಬಂಗಾಳ ಮತ್ತು ಕೇರಳದ ಪ್ರಗತಿಯಿಂದ ನಾವೇನಾದರೂ ಕಲಿಯುವಂತಿದ್ದರೆ ಈ ರಾಜ್ಯಗಳಲ್ಲಿ 'ರಾಜಕೀಯ'ವೇ ಪ್ರಧಾನ ಪಾತ್ರ ವಹಿಸಿದೆಯೆಂಬುದನ್ನು ಗಮನಿಸಬೇಕು. ಈ ರಾಜ್ಯಗಳ ಚಳುವಳಿ ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಮುಂದುರಿದುಕೊಂಡೇ ಬಂದ ಚಳುವಳಿ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲೂ ಪಕ್ಷವು ರಾಜಕೀಯ ಧೋರಣೆಯಿಂದ ತುಸುವೂ ವಿಚಲಿತವಾಗದೆ ಹಲವಾರು ಬೃಹತ್ ಸಾಮುದಾಯಿಕ ಹೋರಾಟಗಳನ್ನು ನಡೆಸಿತ್ತು. ಸ್ವಾತಂತ್ರ್ಯಾನಂತರವಂತೂ ಬೂರ್ಜ್ವಾ-ಭೂಮಾಲಿಕ ವರ್ಗಗಳ ಬೆನ್ನಟ್ಟಿ ಅವುಗಳ ವಿರುದ್ಧ ನಮ್ಮ ಪಕ್ಷವು ನಿರಂತರ ಹೋರಾಟಗಳನ್ನು ನಡೆಸಿರು

ವುದು ನಮಗೆ ಗೊತ್ತು. ಈ ರಾಜ್ಯಗಳಲ್ಲಿ ಎಡೆಬಿಡದೆ ನಡೆಯುತ್ತಿದ್ದ ರಾಜಕೀಯ ಹೋರಾಟಗಳಿಗೆ ಅಲ್ಲಿನ ಸಾಮುದಾಯಿಕ ಹೋರಾಟಗಳು ಅಧೀನವಾಗಿದ್ದವು.

ಈ ರಾಜ್ಯಗಳಲ್ಲಿನ ಹೋರಾಟಗಳು ಟ್ರೇಡ್ ಯೂನಿಯನ್ ರಂಗವೊಂದಕ್ಕೇ ಸೀಮಿತವಾಗಿರಲಿಲ್ಲವೆನ್ನುವುದು ಗಮನಿಸಬೇಕಾದ ಅಂಶ. ಅದು ರೈತರಂಗ, ವಿದ್ಯಾರ್ಥಿಗಳು, ಯುವಕರು, ಮಹಿಳಾರಂಗ ಮತ್ತು ಸಾಂಸ್ಕೃತಿಕರಂಗ ಹೀಗೆ ಎಲ್ಲಾ ಕ್ಷೇತ್ರಗಳಿಗೂ ವ್ಯಾಪಿಸಿದೆ. ಸೈದ್ಧಾಂತಿಕ ಹೋರಾಟದಲ್ಲಿ, ಸಾಂಸದಿಕ ಹೋರಾಟಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿದೆ.

ನಮಗೆ ತಕ್ಷಣ ಆಸಕ್ತಿಯಿರುವ ಟ್ರೇಡ್ ಯೂನಿಯನ್ ಚಳುವಳಿಯ ಬಗ್ಗೆ ಯೋಚಿಸೋಣ. ಈ ಹೋರಾಟದ ಮುಂಚೂಣಿ ವಿಭಾಗದಲ್ಲಿರಬೇಕಾದ ಕೈಗಾರಿಕಾ ಕಾರ್ಮಿಕರು ಮತ್ತು ಅದಕ್ಕೆ ನಿಕಟವಾಗಿ ಹೊಂದಿಕೊಂಡಿರುವ ಸೇವಾ ಕ್ಷೇತ್ರದ ನೌಕರರು ಹಾಗೂ ಅಸಂಘಟಿತ ಕಾರ್ಮಿಕರು ಇವರೆಲ್ಲರ ಹೋರಾಟಗಳನ್ನು ಕಟ್ಟಿ ಬೆಳೆಸಬೇಕಾಗಿದೆ. ಈ ಪ್ರತಿಯೊಂದು ಕ್ಷೇತ್ರದಲ್ಲೂ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತಹ ಸಾಮರ್ಥ್ಯವುಳ್ಳ ಕೇಂದ್ರಗಳಿರಬೇಕು ಮತ್ತು ನಮ್ಮ ರಾಜ್ಯದ ಕೇಂದ್ರ ಸಂಘಟನೆ ಕೂಡ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿಕೊಂಡಿರಬೇಕಲ್ಲದೆ ಅದು ಇತರ ಕೇಂದ್ರಗಳ ಚಳುವಳಿಯ ಜೊತೆಗೂ ರಾಜ್ಯದ ಬೇರೆ ಟ್ರೇಡ್ ಯೂನಿಯನ್‌ಗಳ ಜೊತೆಗೂ ಸಂಪರ್ಕ ಹೊಂದಿರಬೇಕು.

ಕೈಗಾರಿಕಾ ಕಾರ್ಮಿಕರ ಕ್ಷೇತ್ರವನ್ನು ಅವಲೋಕಿಸಿದರೆ ನಮ್ಮ ರಾಜ್ಯದ ಕಾರ್ಮಿಕ ಚಳುವಳಿ ಬಹುಪಾಲು ಉದ್ಯಮಗಳ ಮೇಲೆ ಆಧರಿಸಿಕೊಂಡಿರುವುದನ್ನು ಗಮನಿಸಬಹುದು. ಒಂದೊಂದೇ

ಕರಿ ನೆಲದ ಹಕ್ಕಿ

★ ಎ. ಎಂ. ಮುದರಿ

ಕರಿ ನೆಲದ ಹಕ್ಕಿ
ಹಾರಾಡಿ ಹಾಡಿ
ಸುಳಿಗಾಳಿಯಾದೆಯೇನು ?
ಎಲ್ಲರೆದೆಯ
ಮಿಡಿ–ಮಿಡಿತದಲ್ಲೂ
ಬಿಡುಗಡೆಯ ಬಿತ್ತಿದೇನು.

ಉಸಿರುಸಿರಿನಲ್ಲೂ
ನಿನ್ನೆಸರು ತುಂಬಿ
ಎಲ್ಲಿ ಹೋದೆ ನೀನು?
ಮನ–ಮನಸಿನಲ್ಲೂ
ಕನಸಾಗಿ ಬೆಳೆದು
ಲುಂಪಾಗಿ ಮಿನುಗಿದೇನು.

ಹಿಡಿ ಬಿಳಿಯರಡಿಗೆ
ಹುಡಿಯಾದ ಬದುಕಿಗೆ
ಬೆಂಕಿಯಿಟ್ಟಿಯೇನು ?
ಸಿಡಿಲಾಗಿ ಸಿಡಿದು
ಕಡಲಾಗಿ ಹರಿದು
ಭೂ-ಬಾನ ಬೆಳೆದೆಯೇನು.

ಎಳೆ ಹರೆಯದಲ್ಲೇ
ಅಶ್ವತ್ಥವಾಗಿ
ಆಕಾಶ ಮುಚ್ಚಿದೇನು ?
ಪಾತಾಳಕಿಳಿದು
ನರನಾಡಿಗಳಲಿ
ಬೇರಾಗಿ ಹರಿದಿಯೇನು.

ತುಸುಹೊತ್ತು ಮಿನುಗಿ
ಕರಿ ಹಣತೆಗೆಲ್ಲ
ಎಣ್ಣೆ ಎರೆದೆಯೇನು ?
ಬಿಳಿ ಬಂಜರೆದೆಗೆ
ತಲೆ ಎತ್ತಿ ನಿಂತು
ಬುಲ್‌ಡೋಝರಾದೆಯೇನು.

ಬಲದಾನದಿಂದ
ಬಲವಂತವಾಯ್ತು
ಕರಿನೆಲದ ಕುಲವೆಲ್ಲ
'ಮೊಲಾಯಿಸೆ' ಶಬ್ದ
ಸಂಜೀವಿನಿಯಾಯ್ತು
ಸಾಯುವ ಜಗಕೆಲ್ಲ

—ಕೃಪೆ :
ಕಪ್ಪು ನಾಡಿನ ಕೆಂಪು ಸೂರ್ಯ

ಕಾರ್ಖಾನೆಗಳ ಮೇಲೆ ಅವಲಂಬಿಸಿಕೊಂಡಿರುವ ಯೂನಿಯನ್‌ಗಳಿಂದ ನಮಗೆ ಹೆಚ್ಚಿನ ಫಲವೇನೂ ದೊರೆತಿಲ್ಲ. ಇದಕ್ಕೆ ಕೆಲವೇ ಬೃಹತ್ ಕೈಗಾರಿಕೆಗಳು ಮಾತ್ರ ಅಪವಾದ. ಬಂಗಾಳದಲ್ಲಿ ಇಂಜನಿಯರಿಂಗ್ ಕಾರ್ಮಿಕರ ಹೋರಾಟವಾಗಲೀ ಒಪ್ಪಂದಗಳಾಗಲೀ ಇಡೀ ಉದ್ಯಮದ ನೆಲೆಯಲ್ಲಿ ನಡೆಯುತ್ತವೆ. ಬಂಗಾಳ ಚಟ್ಕಲ್ ಮಜದೂರ್ ಯೂನಿಯನ್ ಒಂದು ಲಕ್ಷಕ್ಕೂ ಹೆಚ್ಚು ಸೆಣಬು ಕಾರ್ಮಿಕರನ್ನು ಒಳಗೊಂಡಿರುವ ಸಂಘಟನೆ. ಬಂಗಾಳ-ಕೇರಳ ಇತ್ಯಾದಿ ರಾಜ್ಯಗಳಿಂದ ನಮಗೆ ಯಾವಾಗಲೂ ಕೇಳಿಬರುವುದು ಉದ್ಯಮ ಆಧಾರಿತ ಹೋರಾಟಗಳ ಮಾತೇ.

ಇದಕ್ಕೆ ವ್ಯತಿರಿಕ್ತವಾಗಿ ನಮ್ಮ ರಾಜ್ಯದಲ್ಲೋ-ನಮ್ಮ ಸಂಗಾತಿಗಳು ಅಲ್ಲೊಂದು ಇಲ್ಲೊಂದು ಯೂನಿಯನ್‌ಗಳನ್ನು ತಮ್ಮ ಕೈ ವಶಪಡಿಸಿಕೊಳ್ಳುವುದರಲ್ಲೇ ಸಂತೃಪ್ತರು. ಈ ಯೂನಿಯನ್‌ಗಳು ಸದಾ

ದಯವಿಟ್ಟು ಗಮನಿಸಿ !

"ದಯವಿಟ್ಟು ಗಮನಿಸಿ ! ರೈಲು ಸಿಬ್ಬಂದಿಯ ಮುಷ್ಕರದಿಂದಾಗಿ ಉಪನಗರಗಳಿಗೆ ರೈಲುಗಳು ಹೊರಡುವುದಿಲ್ಲ" ಪ್ಯಾರಿಸ್ ನಗರದ ರೈಲು ನಿಲ್ದಾಣದ ಧ್ವನಿವರ್ಧಕ ಕೂಗಿಕೊಳ್ಳುತ್ತಿತ್ತು.

ಉಪನಗರಗಳಿಗೆ ಹೋಗುವ ರೈಲುಗಳು ಮಾತ್ರವಲ್ಲ, ಕ್ರಿಸ್ಮಸ್ ರಜಾದಿನಗಳಲ್ಲಿ ದೂರ ಸ್ಥಾನಗಳಿಗೆ ಹೋಗುವ ರೈಲುಗಳೂ ತಮ್ಮ ಡಿಪೋಗಳಿಂದ ಹೊರಬರಲಿಲ್ಲ. ಫ್ರಾನ್ಸ್‌ನ ರೈಲು ವ್ಯವಸ್ಥೆಯ ಮುಕ್ಕಾಲು ಭಾಗ ಸಂಪೂರ್ಣ ಸ್ತಬ್ಧ. ಮೆಟ್ರೊ (ಭೂಗತ ರೈಲು) ಇಲ್ಲದಿದ್ದರೆ ಪ್ಯಾರಿಸ್ ನಗರ ಪ್ಯಾರಿಸ್ಸೇ ಅಲ್ಲ. ಅಂತಹ ಮೆಟ್ರೋಪಥದಲ್ಲೂ ಒಂದೂ ರೈಲು ಓಡಾಟವಿಲ್ಲ.

ಮಾರ್ಸೆಲ್ಸ್ ಮತ್ತು ನೈಸ್ ಬಂದರುಗಳಿಂದ ಯಾವ ಹಡಗು ಹೊರಡಲು ಸಾಧ್ಯವಾಗಲಿಲ್ಲ. ಯಾಕೆಂದರೆ ಮುಷ್ಕರ ನಿರತ ವಾಣಿಜ್ಯ ಹಡಗುಗಳ ನಾವಿಕರು ಬಂದರುಗಳಲ್ಲಿ ಉಕ್ಕಿನ ಕೇಬಲ್ ಹಾಕಿ ತಡೆಯುಂಟು ಮಾಡಿದರು.

ಹೆಚ್ಚಿನ ಆಂತರಿಕ ವಿಮಾನ ಹಾರಾಟವೂ ನಡೆಯದೆ ವಿಮಾನಗಳೆಲ್ಲಾ ನೆಲದ ಮೇಲೇ ನಿಂತವು.

ಕ್ರಿಸ್ಮಸ್ ಮುನ್ನಾ ದಿನದ ಚರ್ಚ್‌ಗಂಟೆನಿನಾದ ಅಪಾಯ ಸೂಚಕ ಗಂಟೆಯೋ ಎಂಬಂತಿತ್ತು.

ಸಮಾಜವಾದೀ ಅಧ್ಯಕ್ಷ ಹಾಗೂ ಕಟ್ಟಾ ಬಲಪಂಥೀಯ ಸರ್ಕಾರವನ್ನು ಪಡೆದಿರುವ ಫ್ರಾನ್ಸ್ 1986ರ ಕೊನೆಯ ತಿಂಗಳಲ್ಲಿ ಕಂಡ ಮುಷ್ಕರಗಳ ಶಕ್ತಿ ಅಭೂತಪೂರ್ವ.

ಕಾಲ ಹೋರಾಡುತ್ತಲೇ ಇರುತ್ತವೆ, ಆದರೆ ಪ್ರಗತಿ ಮಾತ್ರ ಸೊನ್ನೆ. ಕಾರ್ಖಾನೆ ಆಧಾರಿತ ಯೂನಿಯನ್‌ಗಳು ನಾವು ಯಾವಾಗಲೂ ವೈಯಕ್ತಿಕವಾಗಿ ಆಯಾಯ ಕಾರ್ಖಾನೆಗಳಿಗೆ ಮಾತ್ರ ಗಮನ ಹರಿಸುವಂತೆ ನಮ್ಮನ್ನು ಕಟ್ಟಿಹಾಕುತ್ತವೆ. ಕೆಲವೊಮ್ಮೆ ಕಾರ್ಮಿಕರ ವೈಯಕ್ತಿಕ ಪ್ರಶ್ನೆಗಳಲ್ಲೇ ನಾವು ಮುಳುಗಿರಬೇಕಾಗುತ್ತದೆ. ನಮ್ಮ ಅನುಭವಗಳನ್ನು ಸಾರ್ವತ್ರಿಕಗೊಳಿಸುವ ಅಥವಾ ಅದಕ್ಕೆ ಸೈದ್ಧಾಂತಿಕ ರೂಪ ಕೊಡುವ ಕೆಲಸಕ್ಕೆ ನಮಗೆ ಸಮಯವೇ ಇಲ್ಲ. ನಮ್ಮ ಕೇಂದ್ರವು ನಮಗೆ ಹಾಕಿಕೊಟ್ಟಿರುವ ಸೈದ್ಧಾಂತಿಕ ಧೋರಣೆಯನ್ನು ಪ್ರಚಾರ ಮಾಡುವುದಕ್ಕಂತೂ ನಮಗೇನೂ ಬಿಡುವಿಲ್ಲ. ನಮ್ಮಲ್ಲಿ ಒಬ್ಬರು ಇನ್ನೊಬ್ಬರ ಕಾರ್ಯನಿರ್ವಹಣೆಯನ್ನು ಪರಸ್ಪರ ಹೋಲಿಸುತ್ತೇವೆ. ಒಬ್ಬರು ಹೇಗೆ ಯಶಸ್ವಿಯಾಗಿದ್ದಾರೆ ಮತ್ತು ಇನ್ನೊಬ್ಬರು ಹೇಗೆ ವಿಫಲವಾಗಿದ್ದಾರೆ ಎನ್ನುವುದನ್ನು ಹೋಲಿಸಿ ನೋಡುವುದಕ್ಕೆ ನಮಗೆ ತುಂಬ ಖುಶಿ. "ಯಾರ ಧೋರಣೆ ಸರಿ, ಯಾರದು ತಪ್ಪು ಎನ್ನುವುದನ್ನು ಇತಿಹಾಸವೇ ನಿರ್ಧರಿಸುತ್ತದೆ" ಎಂಬ ವಾಕ್ಯವಂತೂ ಯಾವಾಗಲೂ ಹೇಳುತ್ತಲೇ ಇರುತ್ತೇವೆ.

ನಮ್ಮ ಕೇಂದ್ರವು ನಮಗೆ ನಿಗದಿಪಡಿಸಿರುವಂತಹ ಸಿದ್ಧಾಂತ ಮತ್ತು ಕರ್ತವ್ಯಗಳಿಂದ ವಿಮುಖವಾದ ಯಾವುದೇ ವೈಯುಕ್ತಿಕ ಧೋರಣೆ ಬಹುಪಾಲು ಸೋತು ನಿರ್ನಾಮವಾಗುತ್ತದೆನ್ನುವುದು ನಮ್ಮ ಚಳುವಳಿಯಿಂದ ನಾವು ಪಡೆದ ಅನುಭವ. ಇದಕ್ಕಾಗಿ ನಮ್ಮ ಚಿಕ್ಕಪುಟ್ಟ ಕ್ಷೇತ್ರದಲ್ಲಿ ನಾವು ಸೃಷ್ಟಿಸುವ ಚರಿತ್ರೆಯಿಂದಲೇ ನಾವು ಪಾಠ ಕಲಿಯುತ್ತೇವೆಂದು ಕಾದು ಕೊಂಡಿರಬೇಕಾಗಿಲ್ಲ.

ನಾವು ಮುಂದಾಳುಗಳಲ್ಲಿ ಪ್ರತಿಯೊಬ್ಬರೂ ಯಾವುದಾದರೊಂದು ಯೂನಿಯನ್‌ಗಳಿಗೆ ಮುಂದಾಳುಗಳಾಗಿರುವುದು ಬೇಕಾಗಿಲ್ಲ. ನಮ್ಮ ಬದುಕಿನ ಅಮೂಲ್ಯವಾದ ಭಾಗವನ್ನು 'ಕ್ರಾಂತಿಕಾರಿ ಚಟುವಟಿಕೆ' ವಿಡಂಬ ಹೆಸರಿನಲ್ಲಿ ಸುಧಾರಣಾವಾದಿ ಕೆಲಸಗಳಿಗಾಗಿ ವ್ಯರ್ಥ ಮಾಡಿಕೊಳ್ಳುವುದೂ ಅಗತ್ಯವಿಲ್ಲ. ಯಶಸ್ವೀ ಕ್ರಾಂತಿಕಾರಿಯೆನಿಸಿಕೊಂಡ ಯಾರಾದರೂ ಸ್ವತಃ ಯಾವುದೇ ಯೂನಿಯನ್ನಿನ ಮುಂದಾಳಾಗಿ ಪ್ರತಿಯೊಬ್ಬ ಮಾಲಿಕರ ಜೊತೆಗೂ ಚೌಕಾಶಿ ಮಾಡಿ ಕಾರ್ಮಿಕರಿಗೂ ಅವರೊಂದಿಗೆ ತಮಗೂ ಲಾಭ ಮಾಡಿಕೊಳ್ಳಬೇಕಾದುದು ತೀರಾ ಅಗತ್ಯವೇ ? 'ಕಾರ್ಮಿಕ ರಂಗದಲ್ಲಿ ಕರ್ತವ್ಯಗಳು' ಎಂಬ ದಸ್ತಾವೇಜಿನಲ್ಲಿ ಹೇಳಿರುವಂತೆ ಈ ಬಗೆಯ ಕೆಲಸಗಳನ್ನು ಎಷ್ಟೇ ಚೆನ್ನಾಗಿ ಮಾಡಿದರೂ ಮತ್ತು ಅದರಲ್ಲಿ ಹೋರಾಟಗಳಿದ್ದರೂ ಅವೆಲ್ಲ 'ಚಳುವಳಿ'ಯ ಗುಂಪಿಗೆ ಸೇರುತ್ತವೆ. ಹಾಗಾದರೆ ಪ್ರಚಾರದ ಕೆಲಸ ಮತ್ತು ಪಾರ್ಟಿ ಸಂಘಟನೆಯ ಕೆಲಸ ಮಾಡಬೇಕಾದವರು ಯಾರು ? ಕಡೇ ಪಕ್ಷ ಟ್ರೇಡ್ ಯೂನಿಯನ್ ರಂಗದಲ್ಲಾದರೂ ಪಕ್ಷದ ಸಂಘಟನೆಯ ಕೆಲಸವನ್ನು ರಾಜ್ಯ ಮಟ್ಟದ ಮುಖಂಡರೇ ಮಾಡಬೇಕು.

ಕಮ್ಯುನಿಸ್ಟ ಪಕ್ಷವನ್ನು ಮೇಲಿನಿಂದಲೇ ಕಟ್ಟಬೇಕಾಗುತ್ತದೆನ್ನುವುದನ್ನು ಸಾಲ್ಕಿಯಾ ಪ್ಲೀನಮ್‌ನ ದಾಖಲೆಗಳಲ್ಲಿ ಸರಿಯಾಗಿಯೇ ಹೇಳಲಾಗಿದೆ, ಪಕ್ಷದ ಕೇಂದ್ರದಲ್ಲೂಪೊಲೀಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿಯಲ್ಲಿದ್ದ ಈ ದೋಷವನ್ನು ಅದು ಗುರುತಿಸಿದೆ, ಸ್ಥಳೀಯ ಜವಾಬ್ದಾರಿಗಳಿಂದ ವಿಮುಕ್ತವಾದ ಮತ್ತು ನಿರಂತರವಾಗಿ ಕಾರ್ಯ ನಿರ್ವಹಿಸಬಲ್ಲ ಮುಂದಾಳುತ್ವವೇ ಪರಿಣಾಮಕಾರಿಯಾದ ಕೇಂದ್ರ ಮುಂದಾಳುತ್ವವಾಗಬಲ್ಲುದೆಂಬುದನ್ನು ಸಾಲ್ಕಿಯಾ ಪ್ಲೀನಮ್ ಒತ್ತಿ ಹೇಳಿದೆ, ಪೊಲಿಟ್‌ಬ್ಯೂರೋ ತನ್ನ ಮೇಲೆ ತಾನೇ ಈ ತಿದ್ದುವಿಕೆಯ ಕ್ರಮವನ್ನು ಕೈ

ಗೊಂಡಿದೆ. ಆದರೆ ನಮ್ಮ ಮೇಲೆ ನಾವು ಕೈಗೊಳ್ಳಬೇಕೆಂದಿದ್ದ ಈ ತಿದ್ದುವಿಕೆಯ ಪ್ರಯತ್ನಗಳನ್ನು ಇದೀಗ ಕೈ ಬಿಡಲಾಗಿದೆ. ನಾವು ಅನುಸರಿಸಬೇಕಾದ ಸಂಘಟನಾತ್ಮಕ ನೀತಿಯೇನೆಂಬುದನ್ನು ಸಾಲ್ಕಿಯಾ ಪ್ಲೀನಮ್‌ನ ದಸ್ತಾವೇಜುಗಳು ಮತ್ತು ಹನ್ನೊಂದನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಗಳು ವಿವರವಾಗಿ ತಿಳಿ ಹೇಳಿವೆ. ಇದನ್ನು ಯಾವುದೇ ರೀತಿ ಉಲ್ಲಂಘಿಸುವುದು ಹೇಗೆ ಹಾನಿಕರವಾಗುತ್ತದೆನುವುದನ್ನೂ ನಾವು ಕಣ್ಣಾರೆ ಕಾಣುತ್ತಿದ್ದೇವೆ. ಸಾಲ್ಕಿಯಾ ಪ್ಲೀನಮ್‌ನ ವರದಿಯ ಮುಖ್ಯ ಅಂಶಗಳನ್ನು 11ನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯಲ್ಲೂ ಕಾಣಿಸಲಾಗಿದೆ. (ಪುಟ 57, 58). ಇದನ್ನು ಹಾಗೂ ಕಾರ್ಯದರ್ಶಿ ಮಂಡಳಿ ಹೇಗೆ ಕಾರ್ಯ ನಿರ್ವಹಿಸಬೇಕೆಂದು ಹನ್ನೊಂದನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿಯಲ್ಲಿ ವಿವರಿಸಲಾಗಿರುವುದನ್ನೂ (ಪುಟ 72, 73) ಅವಶ್ಯವಾಗಿ ಗಮನಿಸಬೇಕು. ಕಾರ್ಯದರ್ಶಿ ಮಂಡಳಿಯ ಎಲ್ಲ ಸದಸ್ಯರೂ ರಾಜ್ಯ ಕೇಂದ್ರದ ಪೂರ್ಣಕಾಲೀನ ಕಾರ್ಯಕರ್ತರಾಗಿರಬೇಕೆಂದೂ ಅವರ ಕೆಲಸದ ಯೋಜನೆಯನ್ನೂ ಕಾರ್ಯ ನಿರ್ವಹಣೆಯ ತಪಾಸಣೆಯನ್ನೂ ಕಾರ್ಯದರ್ಶಿ ಮಂಡಳಿ ಸಾಮೂಹಿಕವಾಗಿ ನಡೆಸಬೇಕೆಂದೂ ಹನ್ನೊಂದನೇ ಮಹಾಧಿವೇಶನದ ರಾಜಕೀಯ ಸಂಘಟನಾತ್ಮಕ ವರದಿ ಹೇಳಿದೆ. ಆದರೆ ಕಾರ್ಯದರ್ಶಿ ಮಂಡಲದ ಸದಸ್ಯರೇ ತಾವು ವೈಯಕ್ತಿಕವಾಗಿ ಡಜನ್ ಗಟ್ಟಳೆ ಯೂನಿಯನ್‌ಗಳನ್ನು ನಡೆಸಿ ಅವುಗಳ ಅಧ್ಯಕ್ಷರಾಗಿದ್ದರೆ ಈ ಎಲ್ಲ ಕರ್ತವ್ಯಗಳನ್ನು ನಿಭಾಯಿಸುದು ಹೇಗೆ? ಸಾಲ್ಕಿಯಾ ಪ್ಲೀನಮ್‌ನ ನೀತಿಯನ್ನು ಅನುಷ್ಠಾನಕ್ಕೆ ತಂದು ರಾಜಕೀಯ ಸಂಘಟನಾತ್ಮಕ ಚಟುವಟಿಕೆಗಳ ಮೂಲಕ ಪಕ್ಷಕ್ಕೆ ಬಲ ತುಂಬ ಬೇಕಾದುದು ತಕ್ಷಣದ ಅವಶ್ಯಕತೆ, ಇದನ್ನು ನಾವು ನೇರವೇರಿಸದಿದ್ದರೆ 'ಕಾರ್ಮಿಕ ರಂಗದಲ್ಲಿ ನಮ್ಮ ಕರ್ತವ್ಯ' ಎಂಬ ದಸ್ತಾವೇಜು ಕೇವಲ ಪುಸ್ತಕದ ಬದನೇಕಾಯಿಯಾಗಿ ಉಳಿಯುತ್ತದೆ. ನಮ್ಮ ಕರ್ತವ್ಯಗಳ ಬಗ್ಗೆ ಮತ್ತು ಅವುಗಳನ್ನು ಪುನರ್ರಚಿಸಿಕೊಳ್ಳುವ ಬಗ್ಗೆ ಅನೇಕ ವಿಚಾರಗಳನ್ನು ಹೇಳುವ ದಸ್ತಾವೇಜುಗಳು ನಮ್ಮ ಪಕ್ಷದಲ್ಲಿ ಬಹಳ ಇವೆ. ಈ ದಸ್ತಾವೇಜುಗಳ ಕಡೆಗೆ ನಮ್ಮ ಪಕ್ಷದ ಸಾಮಾನ್ಯ ಸದಸ್ಯರು ಮತ್ತು ಕಾರ್ಯಕರ್ತರ ಗಮನವನ್ನು ಸೆಳೆಯುವುದಷ್ಟೇ ಈ ಲೇಖನದ ಉದ್ದೇಶ, ಪಕ್ಷದ ಕೇಂದ್ರವು ನಿರ್ದಿಷ್ಟ ಪಡಿಸಿರುವ ಧೋರಣೆಯ ಬಗ್ಗೆ ಸಂಗಾತಿಗಳು ಸಾಕಷ್ಟು ಆಸಕ್ತಿ ಪಡಿಸಿ ಸರಿಯಾದ ಕಾರ್ಯನಿರ್ವಹಣೆಯ ಕ್ರಮವನ್ನು ರೂಪಿಸುವಲ್ಲಿ ತಮ್ಮ ಪಾತ್ರ ವಹಿಸುವರೆಂದೂ ಮುಂದೆಯೂ ತಮ್ಮ ಪ್ರಯತ್ನಗಳನ್ನು ಮುಂದುವರಿಸಿ ನಮ್ಮ ಲೋಪದೋಷಗಳನ್ನು ನಿವಾರಿಸುವ ನಿಟ್ಟಿನಲ್ಲಿ ಸಹಕಾರ ನೀಡುವರೆಂದೂ ಆಶಿಸಿದ್ದೇವೆ.

●

ಸ್ಪರ್ಧೆ

★ ಸುಮತೀಂದ್ರ ನಾಡಿಗ

ಪ್ರತಿಸ್ಪರ್ಧಿ ಎಂದಿಗೂ ಪ್ರತಿಸ್ಪರ್ಧಿಯೆ. ಸಂಧಾನಕ್ಕೆ ಅವನು ತಯಾರಿಲ್ಲ.
ನಿನ್ನನ್ನು ನಂಬುವುದಿಲ್ಲ. ಮೊದಲು ನಿನ್ನಲ್ಲಿರುವ ಅಣ್ವಸ್ತ್ರಗಳನೆಲ್ಲ
ನಾಶಮಾಡಿದರೇನೆ ನಿನ್ನ ಜೊತೆ ಮಾತುಕತೆ ಮುಂದೆ ಸಾಧ್ಯ.
ಅಲ್ಲಿವರೆಗೂ ನಮ್ಮ ಯುದ್ಧಸಿದ್ಧತೆ ಏನೂ ಕಡಿಮೆಯಾಗುವುದಿಲ್ಲ.
ನೀನೆಷ್ಟೆ ಅಣ್ವಸ್ತ್ರ ಉತ್ಪಾದಿಸಿದ್ದರೂ ಅದರಿಂದ ರಕ್ಷಣೆಗೆ ನಾವು ಸಿದ್ಧ.
ಮಾರಕ ಕ್ರಿಮಿಬಾಂಬು, ವಿಷಾನಿಲದ ಬಾಂಬು, ಜಲಜನಕ ಬಾಂಬುಗಳ
ಅನರ್ಥಪರಂಪರೆ ಎಷ್ಟು ನಮಗೆ ಗೊತ್ತು. ಅಂತರರಾಷ್ಟ್ರೀಯ ಕ್ಷಿಪಣಿಗಳು
ಅರ್ಧಗಂಟೆಯೊಳಗೇ ನಮ್ಮ ನಿರ್ನಾಮ ಮಾಡುವುವು
ನಮ್ಮ ಸ್ನೇಹ ರಾಷ್ಟ್ರಗಳಲ್ಲು ಪ್ರತ್ಯಸ್ತ್ರ ಉಗ್ರಾಣಗಳು.
ಅಣುಯುದ್ಧವಾದರೆ ಒಮ್ಮೆ ನಾವು ಉಳಿಯುವುದಿಲ್ಲ ನಿಮಗೆ ಗೊತ್ತು.
ನೀವೂ ಉಳಿಯುವುದಿಲ್ಲ ನಮಗೆ ಗೊತ್ತು. ನಾವು ರಚಿಸಿದ್ದೇವೆ
ವಿಕಿರಣ ನಿರೋಧಿಸುವ ಭೂಗರ್ಭಗುಹೆಗಳನ್ನು, ಆಗಲೇ ಗೊತ್ತು ಮಾಡಿದ್ದೇವೆ
ನಾವು ಇರಬಹುದಾದ ಗ್ರಹಗಳನ್ನೂ, ಅದು ನಿಮಗೆ ಗೊತ್ತು,
ಅಂಥದೇ ಯತ್ನಗಳ ನೀವು ಮಾಡಿದ್ದೀರಿ, ನಮಗೆ ಗೋತ್ತು.
ಈ ಭೂಮಿ ಸ್ಮಶಾನವಾಗುವುದಕ್ಕೆ ನಾಕಾರು ಬಾಂಬುಗಳೆ ಸಾಕೆಂದು
ನಿಮಗೆ ಗೊತ್ತು :
ಲಕ್ಷಾಂತರ ಭಯಂಕರ ಬಾಂಬುಗಳ
ಉತ್ಪಾದಿಸುತ್ತಲೇ ನೀವಿರುವಿರೆನ್ನುವುದು ನಮಗೆ ಗೊತ್ತು
ನಾವಿರುವೆವೆನ್ನುವುದು ನಿಮಗೆ ಗೊತ್ತು.

(ಕೃಪೆ : "ಮಲ್ಲಿಗೆ" ಮಾಸ ಪತ್ರಿಕೆ)

ಬೀಡಿ ಕಾರ್ಮಿಕರ ಸ್ಥಿತಿ-ಗತಿ

"ಬಂಡವಾಳಶಾಹಿ ಸಮಾಜದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಅಪಾರವಾಗಿರುವುದನ್ನು ಕಂಡೇ ಬೀಡಿ ಮಾಲಕರು ಹಳ್ಳಿಯ ಪ್ರತಿಯೊಂದು ಮನೆಯನ್ನು ಬೀಡಿ ಕಾರ್ಖಾನೆಯನ್ನಾಗಿ ಪರಿವರ್ತಿಸಿದ್ದಾರೆ. ಅಲ್ಲಿ ಕಡಿಮೆ ಸಂಬಳದಲ್ಲಿ ಹೆಂಗಸರನ್ನೂ ಮಕ್ಕಳನ್ನೂ ದುಡಿಸಿ ಅಪಾರ ಸಂಪತ್ತು ಸಂಪಾದಿಸುತ್ತಿದ್ದಾರೆ." ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷರು ವಿವರಿಸುತ್ತಾರೆ

ಕೈಗಾರಿಕೆಗಳು, ಉದ್ಯಮಗಳು ಎಂದ ಕೂಡಲೆ ಯಂತ್ರಗಳು, ಕಟ್ಟಡಗಳ ಒಂದು ಬೃಹತ್ ಸಮೂಹ, ಹಾಗೂ ಕೈಗಾರಿಕೆಗೆ ಕಾರ್ಮಿಕರನ್ನೊಯ್ಯುವ ಬಸ್ಸುಗಳ ಒಂದು ದೊಡ್ಡ ತಂಡ (ಫ್ಲೀಟ್) ಇವು ಕಣ್ಣ ಮುಂದೆ ನಿಲ್ಲುತ್ತವೆ. ಇದರ ಮೇಲೆ ಹೂಡಬೇಕಾದ ಹಣದ ಅಗಾಧ ಪ್ರಮಾಣ ಕಲ್ಪನೆಗೆ ನಿಲುಕದ್ದು.

ಆದರೆ ಬೀಡಿ ಕಾರ್ಖಾನೆಗಳೆಂಬ ಕಾರ್ಖಾನೆಗಳ ಮಾಲೀಕರಿಗೆ ಈ ಯಾವುದೇ ಜವಾಬುದಾರಿಯ ಪ್ರಮೇಯವೇ ಇಲ್ಲ. ಕೇವಲ ಒಂದು ಒಂದಿಷ್ಟು ಹೊಗೆಸೊಪ್ಪು ಬೀಡಿ ಕಟ್ಟುವ ಎಲೆ ಇಷ್ಟರ ಮೇಲೆ ತಮ್ಮ ಎಲ್ಲ ಕೆಲಸಗಳನ್ನು ನಡೆಸುತ್ತಾರೆ. ಇಲ್ಲಿ ಯಂತ್ರಗಳಿಲ್ಲ. ಮಾನವನೇ ಯಂತ್ರ. ಸಣ್ಣ ಮಕ್ಕಳು, ಹೆಂಗಸರು ಇವರ ಬಿಡುವರಿಯದ ಕೈ ಬೆರಳುಗಳೇ ಯಂತ್ರಗಳು.

ಬೀಡಿ ಕೈಗಾರಿಕೆಯ ಮಾಲೀಕರು ಒಂದು ಸಾವಿರ ಬೀಡಿಗೆ ಎಲೆ ಹಾಗೂ ಹೊಗೆಸೊಪ್ಪಿಗಾಗಿ 6 ರೂ. ತೆರಿಗೆಗಳ ರೂಪದಲ್ಲಿ 3-50 ರೂ. ಕೂಲಿಗಾಗಿ 8-9 ರೂ. ವೆಚ್ಚ ಮಾಡಿ ಆ ಬೀಡಿಯನ್ನು ಕಟ್ಟಿದ ಕಾರ್ಮಿಕ ಪಡೆಯುವುದಕ್ಕಿಂತ ಹೆಚ್ಚು ಹಣವನ್ನು ಪಡೆಯುತ್ತಾರೆ. ಲಕ್ಷಾಂತರ ಬೀಡಿಗಳನ್ನು ದಿನವೊಂದಕ್ಕೆ ಕಟ್ಟಿಸಿ ಅತ್ಯಂತ ಹೆಚ್ಚು ದುರ್ಲಾಭಮಾಡಿ ಕೊಳ್ಳುವ ಉದ್ಯಮ ಇದು.

ಈ ಬೀಡಿ ಉದ್ಯಮದಲ್ಲಿ ಕರ್ನಾಟಕ ರಾಜ್ಯದಲ್ಲಿ ಒಟ್ಟು 10 ಲಕ್ಷ ಜನ ದುಡಿಯುತ್ತಿದ್ದಾರೆ. ಮಹಿಳೆಯರ ಸಂಖ್ಯೆ ಶೇ. 80 ರಷ್ಟು ದ. ಕ. ಜಿಲ್ಲೆಯಲ್ಲಿ ಬಹುಭಾಗ ಮಹಿಳೆಯರು ಹಿಂದೂಗಳಾಗಿದ್ದಾರೆ, ಉಳಿದೆಡೆ ಬಹುಭಾಗ ಬೀಡಿ ಕಾರ್ಮಿಕರು ಮುಸ್ಲಿಮರು, ಇವರ ಸ್ಥಿತಿ

ಎಸ್. ಸೂರ್ಯನಾರಾಯಣರಾವ್

ಗತಿ ಬಹಳ ಶೋಚನೀಯ. ವಾಸಕ್ಕೆ ಸರಿಯಾದ ಮನೆಯಿಲ್ಲ, ಮಕ್ಕಳಿಗೆ ವಿದ್ಯಾಭ್ಯಾಸವಿಲ್ಲ. ಪೌಷ್ಠಿಕ ಆಹಾರ ಮತ್ತು ಉಡುಪು ಧರಿಸಲು ವರಮಾನ ತೀರಾ ಕಡಿಮೆ. 8 ಗಂಟೆಯಲ್ಲಿ 800 ಬೀಡಿ ಸುತ್ತಲೂ ಸಾಧ್ಯ. ಸರ್ಕಾರ ಒಂದು ಸಾವಿರ ಬೀಡಿಗೆ 11-50 ರೂ. ಕೂಲಿ 650, ಸೂಚ್ಯಂಕಕ್ಕೆ ನಿಗದಿ ಮಾಡಿದೆ. ಅದರ ಮೇಲೆ ಏರುವ ಪ್ರತಿ ಒಂದು ಪಾಯಿಂಟ್ ಬೆಲೆ ಸೂಚ್ಯಂಕಕ್ಕೆ 2 ಪೈಸೆ ತುಟ್ಟಿಭತ್ಯೆ ದೊರೆಯುತ್ತದೆ

ಈ ಕನಿಷ್ಠ ಕೂಲಿ ಸಹ ನೂರರಲ್ಲಿ ತೊಂಭತ್ತು ಮಂದಿ ಬೀಡಿ ಕಾರ್ಮಿಕರಿಗೆ ದೊರಕುವುದಿಲ್ಲ. ಕಾರಣ ಕಂಟ್ರಾಕ್ಟರ್ ತಾನೇ ಒಂದು ಕೆ. ಜಿ. ಹೊಗೆಸೊಪ್ಪಿಗೆ 4 ರಿಂದ 5 ಸಾವಿರ ಬೀಡಿ ಕಟ್ಟಬೇಕೆಂದು ನಿಗದಿ ಪಡಿಸುತ್ತಾನೆ. ಒಂದು ಕೆ. ಜಿ. ಬೀಡಿ ಸುತ್ತುವ ಎಲೆಗೆ (ತೂಪರದೆಲೆ) 2000-2500 ಬೀಡಿ ಸುತ್ತಬೇಕೆಂದು ನಿಗದಿ ಪಡಿಸಿರುತ್ತಾನೆ. ಇದರ ಜೊತೆಗೆ ಕಟ್ಟಿದ ಬೀಡಿಯನ್ನು ಸಹ ಸರಿಯಾಗಿಲ್ಲ ಎಂದು ತಿರಸ್ಕರಿಸಿ ನಾಶಪಡಿಸುತ್ತಾನೆ. ಹೀಗಾಗಿ ಬಹುತೇಕ ಕಡೆಗಳಲ್ಲಿ 1000 ಬೀಡಿಗೆ 7 ರೂ. ನಿಂದ 9 ರೂ. ವರೆಗೆ. ಹಳ್ಳಿಗಳಲ್ಲಿ 4-5 ರೂ. ನಿಂದ 6-7 ರೂ. ಮಾತ್ರ ಸಿಗುತ್ತದೆ.

ಮಧ್ಯವರ್ತಿ ಕಂಟ್ರಾಕ್ಟರ್ ಇರುವುದರಿಂದ ಎಲ್ಲ ತರದ ಸುಲಿಗೆ ಮಾಡುತ್ತಾರೆ. ಸಂಘಕ್ಕೆ ಸೇರಿದರೆಂದು ತಿಳಿದರೆ ಅವರಿಗೆ ಕೆಲಸ ಕಡಿಮೆ ಕೊಡುತ್ತಾನೆ. ತನ್ನ ಹಾಗೂ ತಮ್ಮ ಸಂಬಂಧಿಕರ ಹೆಸರುಗಳಲ್ಲಿ ಹೆಚ್ಚಿಗೆ ಲೆಕ್ಕ ಬರೆದುಕೊಂಡು ಟ್ರೇಡ್ ಮಾರ್ಕ್ ಮಾಲೀಕರಿಂದ ಬರುವ ಬೋನಸ್ ಮೊದಲಾದ ಸೌಲಭ್ಯಗಳನ್ನೂ ಉಪಟಾಯಿಸುತ್ತಾನೆ.

ಈ ಅಸಂಘಟಿತರನ್ನು ಸಂಘಟಿಸಲು ಕಳೆದ 50 ವರ್ಷಗಳಿಂದ ದ. ಕ. ಜಿಲ್ಲೆಯಲ್ಲಿ ಪ್ರಯತ್ನ ನಡೆದಿದೆ. ಬೀಡಿ ಕಾರ್ಮಿಕರಿಗೆ ಕಾನೂನಿಗಾಗಿ ಎ. ಕೆ. ಜಿ.

ನಿಮಗೆ ಸಿಗುವ ಉತ್ತರ ಒಂದೇ

ಹಂಗೇರಿಯನ್ ಸೋವಿಯತ್ ಅಥವಾ ಇನ್ನಾವುದೇ ಕಮ್ಯುನಿಸ್ಟ್‌ನನ್ನು ಕೇಳಿ-ಒಂದು ಪರಮಾಣು ಅಸ್ತ್ರರಹಿತ ಜಗತ್ತು ಸಾಧ್ಯವೇ ? ಎಂದು ನಿಮಗೆ ಸಿಗುವ ಉತ್ತರ ಒಂದೇ ನಾವು ಕಮ್ಯುನಿಸ್ಟರು ಹೋರಾಡುತ್ತಿರುವುದೇ ಅಂತಹ ಒಂದು ವಿಶ್ವಕ್ಕಾಗಿ ಎಂಬುದೇ ಆ ಉತ್ತರ. ಮಾತ್ರವಲ್ಲ, ನಮ್ಮ ಜಗತ್ತನ್ನೂ ನಿಜವಾಗಿ ಪರಮಾಣು ಅಸ್ತ್ರಗಳಿಂದ ಮುಕ್ತವಾಗಿಸಲು ನಮ್ಮೆಲ್ಲಾ ಬಲ ಗೂಡಿಸಿ ಸರ್ವ ಪ್ರಯತ್ನವನ್ನೂ ನಾವು ಮಾಡುತ್ತೇವೆ.

—ಮಿಕ್ಲೋಸ್ ಒವಾರಿ
'ಹಂಗೇರಿಯನ್ ಸಮಾಜವಾದಿ
ಕಾರ್ಮಿಕರ ಪಕ್ಷ'ದ
ಪಾಲಿಟ್‌ಬ್ಯೂರೋ ಸದಸ್ಯರು.

ಯವರ ನಾಯಕತ್ವದಲ್ಲಿ ಮಂಗಳೂರಿನಿಂದ ಮದ್ರಾಸ್‌ವರೆಗೂ ಜಾಥಾ ನಡೆಸಿದೆ. ಅನೇಕ ಹೋರಾಟಗಳು ನಡೆದಿವೆ. ಕೂಲಿ ಹೆಚ್ಚು ಬೋನಸ್‌ಗಾಗಿ ತುಮಕೂರಿನಿಂದ ಬೆಂಗಳೂರಿಗೆ ಜಾಥಾ ಆಗಿದೆ. ಮೈಸೂರಿನಲ್ಲಿ ಸಹ ಅನೇಕ ಬೀಡಿ ಕಾರ್ಮಿಕರ ಹೋರಾಟಗಳು ಮೂರು ದಶಕಗಳ ಹಿಂದೆ ನಡೆದಿದೆ.

ಬೀಡಿ ಕಾರ್ಮಿಕರ ಕೇಂದ್ರ ಕಾನೂನು ಜಾರಿಗೆ ಬಂದ ತಕ್ಷಣ ಕರ್ನಾಟಕದಲ್ಲಿ ಬೀಡಿ ಕಾರ್ಮಿಕರು ಚಿತ್ರದುರ್ಗ, ತುಮಕೂರು, ಮೈಸೂರು, ಕೋಲಾರ ಮತ್ತಿತರ ಕಡೆ ಹೆಚ್ಚಿನ ಕೂಲಿಗಾಗಿ ಚಳುವಳಿಯನ್ನು ಆರಂಭಿಸಿದರು. ಅನೇಕ ಭಾರಿ ಮುಷ್ಕರಗಳು ನಡೆದು ಲಕ್ಷಾಂತರ ಕಾರ್ಮಿಕರು ಭಾಗವಹಿಸಿದರು. ಈ ಹೋರಾಟಗಳ ಒತ್ತಾಯದಿಂದ ಬೀಡಿ ಮಾಲೀಕರ ಸಂಘಕ್ಕೂ ರಾಜ್ಯ ಮಟ್ಟ ಬೀಡಿ ಕಾರ್ಮಿಕರ ಸಂಘಟನೆಗೂ ಒಪ್ಪಂದವಾಯಿತು. ಅದರ ಪ್ರಕಾರ 833 ಬೋನಸ್ಸು ಶೇ. 57 ರಾಷ್ಟ್ರೀಯ ಹಬ್ಬದ ರಜಾ ಹಾಗೂಗಳಿಕೆ ರಜಾ ಕೊಡಬೇಕೆಂದು ಒಪ್ಪಂದವಾಯಿತು.

ಹೆರಿಗೆ ರಜಾ ಸೌಲಭ್ಯ ದ. ಕ. ಜಿಲ್ಲೆಯಲ್ಲಿ ತೀವ್ರ ಚಳುವಳಿ ನಡೆದ ನಂತರ ಸಂಘಟನೆಯಿದ್ದೆಡೆ ಜಾರಿಯಾಗುತ್ತಿದೆ.

ಬೀಡಿ ಮಾಲೀಕರು ಕಾರ್ಮಿಕ ಸಂಘಟನೆಯನ್ನು ಮುರಿಯಲೆಂದು ಈ ಉದ್ಯಮವನ್ನು ಹಳ್ಳಿಗಳಿಗೆ ತೆಗೆದುಕೊಂಡು ಹೋಗಿ ಯಾವ ಸವಲತ್ತನ್ನು ಕೊಡದೆ ಕಡಿಮೆ ಕೂಲಿಗೆ ಬೀಡಿ ಕಟ್ಟಿಸುತ್ತಿದ್ದಾರೆ.

ಅನಾರೋಗ್ಯಕರವಾದ ವಾತಾವರಣದಲ್ಲಿ ಬೀಡಿ ಕಟ್ಟುವುದರಿಂದ ಈ ಕಾರ್ಮಿಕರು ಅನೇಕ ರೋಗ ರುಜಿನಗಳಿಗೂ ಅದರಲ್ಲೂ ಕ್ಷಯ ರೋಗಕ್ಕೂ ತುತ್ತಾಗುತ್ತಾರೆ. ವರದಿಗಳ ಪ್ರಕಾರ ಬೀಡಿ ಕಾರ್ಮಿಕರು ಶೇ. 30 ರಿಂದ 40 ರಷ್ಟು ಕ್ಷಯರೋಗದಿಂದ ನರಳುತ್ತಿದ್ದಾರೆ.

ಇದರ ಜೊತೆಗೆ ಕೈ ಗಳಲ್ಲಿ ಬೀಡಿ ಸುತ್ತೀ, ಸುತ್ತೀ ಬೆರಳುಗಳ ಸ್ಪರ್ಶ ಗುಣವನ್ನೇ ಕಳೆದುಕೊಳ್ಳುತ್ತಾರೆ. ಬೀಡಿ ಕಟ್ಟುವ ಪ್ರಯತ್ನ ಕೂಡ ಕಡಿಮೆಯಾಗುತ್ತದೆ.

ಕೇಂದ್ರ ಸರ್ಕಾರ ಕೋಟಿಗಟ್ಟಲೆ ಹಣವನ್ನು ಈ ಉದ್ಯಮದಿಂದ ತೆರಿಗೆ ರೂಪದಲ್ಲಿ ಪಡೆಯುತ್ತಿದ್ದರೂ ಕಾರ್ಮಿಕರ ಕಲ್ಯಾಣಕ್ಕೆ ಮೀಸಲಾಗಿಟ್ಟಿರುವ ಹಣ ಅತ್ಯಲ್ಪ ಇದರ ಜೊತೆಗೆ ಕೇಂದ್ರ ಸರ್ಕಾರದ ಹೊಸ ತೆರಿಗೆ ನೀತಿಗೆ ಎಂದರೆ ಹೊಗೆಸೊಪ್ಪಿನ ಮೇಲೆ ಹಾಕುತ್ತಿದ್ದ ತೆರಿಗೆ ಬಿಟ್ಟು ಬೀಡಿಗಳ ಮೇಲೆ ತೆರಿಗೆ ಹಾಕಿದ್ದು ಸಣ್ಣ ಬೀಡಿ ಮಾಲೀಕರಿಗೆ ರಿಯಾಯಿತಿ ಕೊಡಲು ಲೇಬಲ್ ಇರುವ ಬೀಡಿ, ಲೇಬಲ್ ಇಲ್ಲದ ಬೀಡಿ ಎಂದು ವಿಂಗಡಿಸಿ ಅವರಿಗೆ ತೆರಿಗೆಯಿಂದ ವಿನಾಯಿತಿ ನೀಡಿದ್ದು ಅಲ್ಪಸ್ವಲ್ಪ ಸಂಘಟಿತರಾಗಿದ್ದ ಬೀಡಿ ಕಾರ್ಮಿಕರನ್ನು ಅಸಂಘಟಿತರನ್ನಾಗಿ ಮಾಡಿದೆ.

ದೊಡ್ಡ ದೊಡ್ಡ ಬೀಡಿ ಮಾಲೀಕರೂ ಸಹ ಈ ಸಣ್ಣ ಮಾಲೀಕರಿಂದ ಬೀಡಿ ಕೊಂಡು ತಮ್ಮ ಕಾರ್ಮಿಕರಿಗೆ 6 ದಿನದ ಕೆಲಸವನ್ನು ಕೊಡುತ್ತಿಲ್ಲ.

ಈ ಮಟ್ಟದಲ್ಲಿ ಒಂದೆಡೆ ಕಾರ್ಮಿಕರ ವಿಪರೀತ ಶೋಷಣೆ, ಇನ್ನೊಂದೆಡೆ ಬಂಡವಾಳವಿಲ್ಲದೆ ಟ್ರೇಡ್ ಮಾರ್ಕುಗಳ ಅಪಾರ ಲಾಭ ಗಳಿಕೆ.

ಈ ಸುಲಿಗೆ, ಹೆಣ್ಣು ಮಕ್ಕಳ ದುರ್ಭರ ಜೀವನ ಸರಿಪಡಿಸಲು ಕಂಟ್ರಾಕ್ಟ ಪದ್ಧತಿ ರದ್ದು ಮಾಡಿ ಎಲ್ಲ ತರಹ ಬೀಡಿಗಳ ಮೇಲೆ ತೆರಿಗೆ ವಿಧಿಸಿ ಹೆಚ್ಚು ಆಸ್ಪತ್ರೆ ಸೌಲಭ್ಯ ವಿದ್ಯಾಭ್ಯಾಸಕ್ಕೆ ವೇತನ ಮನೆಗಳ ವ್ಯವಸ್ಥೆ ಮಾಡಲು ಈ ಸಮಾಜ ಹಾಗೂ ಬಂಡವಾಳಶಾಹಿ ಹಿಡಿತದ ಸರ್ಕಾರ ತಯಾರಿಲ್ಲ.

ಕೇರಳದ ಡಿನೇಶ್ ಬೀಡಿ ಸಹಕಾರ ಸಂಸ್ಥೆ ಕಾರ್ಮಿಕರಿಗೆ ಎಲ್ಲ ಸೌಲಭ್ಯ ಕೊಟ್ಟು ಸಾವಿರ ಬೀಡಿಗೆ 20 ರೂ. ಕೂಲಿ ಕೊಟ್ಟು ಬೆಲೆ ಸೂಚ್ಯಂಕ ಒಂದು ಪಾಯಿಂಟ್‌ಗೆ ಆರು ಪೈಸೆ ಕೊಟ್ಟು ಶೇ. 13 ರಷ್ಟು ಬೋನಸ್ ನೀಡಿ ಕರ್ನಾಟಕದ ಬೀಡಿ ಮಾಲೀಕರು ಮಾರುವ ಜೊತೆಗೆ ಬೀಡಿಯನ್ನು ಮಾರಿ ಲಾಭ ಸಂಪಾದಿಸುತ್ತಿದ್ದರೂ ಕರ್ನಾಟಕ ರಾಜ್ಯ ಸರ್ಕಾರ ಕನಿಷ್ಠ ಕೂಲಿ ಸಲಹಾ ಸಮಿತಿ 470 ಪಾಯಿಂಟಿಗೆ 1000 ಬೀಡಿಗೆ 15 ರೂ. ನಿಗದಿ ಮಾಡಬೇಕೆಂದು ಶಿಫಾರಸು ಮಾಡುತ್ತಿದ್ದರೂ ಬೀಡಿ ಮಾಲೀಕರುಗಳ ಒತ್ತಾಯದಿಂದ ಬರುತ್ತಿದ್ದಂತೆ, ಕೂಲಿಗಿಂತ ಕಡಿಮೆ ಮಾಡಿ ಲಕ್ಷಾಂತರ ಜನರಿಗೆ ಜನತಾ ಸರ್ಕಾರ ಮಾಡಿದ ಈ ಮೋಸವನ್ನು ಹೈಕೋರ್ಟಿನಲ್ಲಿ ರಿಟ್ ಸಹ ದಾಖಲೆಯಾಗಿದೆ.

ಈ ಲಕ್ಷಾಂತರ ಬೀಡಿ ಕಾರ್ಮಿಕರನ್ನು ಸಂಘಟಿಸಲು ಈ ಮೂಲಭೂತವಾದಿಗಳಿಂದ ಅಡ್ಡಿ ಆತಂಕಗಳು ಬರುತ್ತಿವೆ.

ಮುಸ್ಲಿಂ ಹೆಂಗಸರು ಮೆರವಣಿಗೆ ಹಾಗೂ ಸಭೆಗಳಿಗೆ ಹೋಗಬಾರದು ಇತ್ಯಾದಿ.

ಇವರನ್ನು ಸುಲಿಗೆ ಮಾಡುವ ಕಂಟ್ರಾಕ್ಟರ್‌ಗಳಿಗೆ ಮೂಲಭೂತವಾದಿಗಳ ಬೆಂಬಲವಿದೆ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಅಸಂಘಟಿತರನ್ನೂ ಸಂಘಟನೆ ಮಾಡಬೇಕೆಂದು ಹೆಂಗಸರ ಶೋಷಣೆ ಮಾಡಬಾರದೆಂದು ಹೇಳುತ್ತಿದ್ದರೂ. ಇವರನ್ನು ಸಂಘಟಿಸುವ ಕಾರ್ಯಕರ್ತರಿಗೆ ಹಾಗೂ ಸಂಘಗಳಿಗೆ ಯಾವ ಸಹಾಯವೂ ದೊರೆಯುವುದಿಲ್ಲ, ಬದಲಾಗಿ ಬೀಡಿ ಕಾರ್ಮಿಕರ ದಬ್ಬಾಳಿಕೆಯುನ್ನು ಎದುರಿಸಿದಾಗ ಪೋಲೀಸರ ಧಾಳಿ ಮಾತ್ರ ಸಿಗುತ್ತದೆ.

ಮನೆ-ಮನೆಗಳಿಗೆ ಹೋಗಿ ಬೀಡಿ ಕಾರ್ಮಿಕರನ್ನು ಸಂಘಟಿಸಲು ನೂರಾರು ಕಾರ್ಮಿಕರು ಕಾರ್ಯಕರ್ತರು ಬೇಕು. ರಾಜಕಾರಣದಲ್ಲಿ ಧಾರ್ಮಿಕತೆ ಪ್ರವೇಶ ಮಾಡಬಾರದೆಂದು ಜೋರಾಗಿ ನಡೆಯಬೇಕು. ಈ ಕೆಲಸಗಳನ್ನು ಮಾತ್ರ ಬೇಕೆಂಬ ನಿಲುವು ಬೀಡಿ ಕಾರ್ಮಿಕರ ಫೆಡರೇಷನ್‌ಗಿದೆ. ಮಂಗಳೂರಿನಲ್ಲಿ ನಡೆದ ರಾಜ್ಯ ಸಮ್ಮೇಳನ ಕಳೆದ ತಿಂಗಳು ತುಮಕೂರಿನಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಿ ಕಾರ್ಯಕ್ರಮ ಹಾಕಿಕೊಂಡಿದೆ. ಕೆಳಕಂಡ ಬೇಡಿಕೆಗಳಿಗೆ ಹೋರಾಟವನ್ನು ರೂಪಿಸಬೇಕೆಂದು ತೀರ್ಮಾನಿಸಿದೆ.

ಕಂಟ್ರಾಕ್ಟ್ ಪದ್ಧತಿ ರದ್ಧತಿ, 1000 ಬೀಡಿಗೆ 15 ರೂ. ಕೂಲಿ ಶೇ. 20ರಷ್ಟು ಬೋನಸ್ ಪ್ರತಿ ಕಾರ್ಮಿಕನಿಗೆ ಲಾಗ್ ಬುಕ್ ಮತ್ತು ಗುರುತಿನ ಚೀಟಿ ವಾರದ ಆರು ದಿನದಲ್ಲಿ ಕೆಲಸ. ಬೀಡಿ ಕಾರ್ಮಿಕರಿಗೆ ವಸತಿ ಸೌಕರ್ಯ, ಹೆಚ್ಚು ಆಸ್ಪತ್ರೆಗಳು, ಮಕ್ಕಳ ವಿದ್ಯಾಭ್ಯಾಸಕ್ಕೆ ವೇತನ, ಇವೇ ಮೊದಲಾದುವು.

●

ಶಾಂತಿ–ಮತಪ್ರದರ್ಶಕ ಮಹಿಳೆಯರ ವಿರುದ್ಧ ಅಪಾಯಕಾರಿ ವಿಕಿರಣ ತಂತ್ರ

ಬ್ರಿಟನ್ನಿನಲ್ಲಿರುವ ಗ್ರೀನ್‌ಹಾಂ ಕಾಮನ್ ಎಂಬಲ್ಲಿನ ಅಮೆರಿಕನ್ ಮಿಲಿಟರಿ ನೆಲೆಯ ಸುತ್ತ ಪಿಕೆಟಿಂಗ್ ಮಾಡುತ್ತಿರುವ ಬ್ರಿಟಿಷ್ ಮಹಿಳೆಯರ ಧೈರ್ಯ ಈಗ ಜನಜನಿತ. ಏಳುವರ್ಷಗಳಿಂದ ಈ ಮಹಿಳೆಯರು ಸಕಲ ರೀತಿಯ ಕಷ್ಟನಷ್ಟಗಳನ್ನು, ಅಧಿಕಾರಿಗಳ ಕಡುವಿರೋಧವನ್ನು ಎದುರಿಸಿ ಬ್ರಿಟಿಷ್ ಮಣ್ಣಿನಲ್ಲಿ ಅಮೆರಿಕನ್ ಕ್ರ್ಯುಯಿಸ್ ಕ್ಷಿಪಣಿಗಳನ್ನು ನಿರಾಕರಿಸುವಂತೆ ಒತ್ತಾಯಿಸುತ್ತ ಬಂದಿದ್ದಾರೆ. ಅವರಿಗಿನ್ನೂ ನೋಬೆಲ್ ಶಾಂತಿ ಪ್ರಶಸ್ತಿ (ಒಂದೆರಡು ಬಾರಿ ಈ ಬಗ್ಗೆ ಸೂಚನೆ ಬಂದಿದ್ದರೂ) ದೊರೆತಿಲ್ಲವಾದರೂ ಜಗತ್ತಿನಾದ್ಯಂತ ಕೋಟಿಗಟ್ಟಲೆ ಜನ ಅವರ ಸೋಲರಿಯದ ಸ್ಥೈರ್ಯ, ದೃಢತೆಯನ್ನು ಮೆಚ್ಚಿಕೊಂಡಿದ್ದಾರೆ.

ಬ್ರಿಟಿಷ್ ಪೋಲೀಸ್ ಹಾಗೂ ಅಮೆರಿಕನ್ ಮಿಲಿಟರಿ ಪೋಲೀಸ್ ಈ ಮತಪ್ರದರ್ಶಕರ ವಿರುದ್ಧ ತೋರ್ಪಡಿಸಿರುವ ಬರ್ಬರ ನಡತೆಯೂ ಕೂಡಾ ಸರ್ವವಿದಿತ ಆದರೂ ಅತ್ಯಂತ ದುಷ್ಟ ಸಂಗತಿಯೊಂದು ಇನ್ನೂ ಈ ರಹಸ್ಯವಾಗಿಯೇ ಉಳಿದಂತಿದೆ. ಶಾಂತಿ ಪ್ರದರ್ಶಕರ ವಿರುದ್ಧ ಒಂದು ಹೊಸ ಅತ್ಯಾಧುನಿಕ ವಿಧಾನವನ್ನು ಬಳಸಲಾಗಿದೆ ಎಂದು ಸ್ವೀಡನ್ನಿನ ಪತ್ರಿಕೆಯೊಂದು ತಿಳಿಸಿದೆ.

ಗ್ರೀನ್‌ಹಾಂ ಕಾಮನ್ ನೆಲೆಗೆ ಮೊದಲ ಕ್ರ್ಯುಯಿಸ್ ಕ್ಷಿಪಣಿ 1983 ರಲ್ಲಿ ಬಂತು. ಅದಾದ ಸ್ವಲ್ಪ ದಿನಗಳಲ್ಲೇ ಪ್ರಮುಖ ಮತಪ್ರದರ್ಶಕರಲ್ಲಿ ಒಂದು ವಿಚಿತ್ರ ಕಾಯಿಲೆಯ ಲಕ್ಷಣಗಳು ಕಂಡು ಬರಲಾರಂಭಿಸಿದವು–ತಲೆತಿರುಗುವುದು, ಸುಟ್ಟಗಾಯಗಳು, ಕೂದಲು ನಾಶ, ಕಣ್ಣುಕತ್ತಲೆ, ಗರ್ಭಸ್ರಾವ ಇತ್ಯಾದಿ. ಪರಮಾಣು ಅಸ್ತ್ರ-ವಿರೋಧಿ ಪ್ರದರ್ಶನದಲ್ಲಿ ಪಾಲುಗೊಂಡಿದ್ದ ವೈದ್ಯರು ಅವರನ್ನು ಪರೀಕ್ಷಿಸಲಾಗಿ ಮಿಲಿಟರಿ ನೆಲೆಯ ಸುತ್ತ ಹಾಕಿರುವ ಕಬ್ಬಿಣದ ಬೇಲಿಯ ಹಿಂದಿನಿಂದ ಉದ್ದೇಶಪೂರ್ವಕವಾಗಿ ಕಳಿಸಿದ ಮೈಕ್ರೋವೇವ್ ವಿಕಿರಣ ಇದಕ್ಕೆ ಕಾರಣವೆಂದು ತೀರ್ಮಾನಿಸಿದ್ದಾರೆ. ಈ ಮಿಲಿಟರಿ ನೆಲೆಯಲ್ಲಿ ಒಂದು ಅಥವಾ ಹೆಚ್ಚು ಈ ರೀತಿಯ ವಿಕಿರಣ ಬೀರುವ ಮೂಲಗಳನ್ನಿಟ್ಟಿರಬೇಕು ಎಂದು ಭೌತಶಾಸ್ತ್ರಜ್ಞರು ಶಂಕಿಸಿದ್ದಾರೆ.

ಸ್ವೀಡನ್ ಸರ್ಕಾರ ಈ ಬಗ್ಗೆ ಈಗಾಲೇ ತನ್ನದೇ ಆದ ತನಿಖೆ ನಡೆಸುತ್ತಿದೆ. ಆದರೆ ಸದಾ "ವಿಶಿಷ್ಟ", "ಕೋಲಾಹಲಕಾರೀ" ಸುದ್ದಿಗಳಿಗೆ ತವಕಪಡುವ ಬ್ರಿಟನ್ ಹಾಗೂ ಇತರ ನಾಟೋ ದೇಶಗಳ ಪತ್ರಿಕೆಗಳು ಮತ್ತು ಇತರ ಸಮೂಹ ಮಾಧ್ಯಮಗಳು ಈ ಬಗ್ಗೆ ವಿಚಿತ್ರ ಮೌನ ತಾಳಿವೆ. ಗ್ರೀನ್‌ಹಾಂ ಕಾಮನ್‌ನ "ಸಾವಿನ ಕಿರಣಗಳು" ಇನ್ನೂ ಅವರ ಸಂಪಾದಕೀಯ ಕಛೇರಿಗಳನ್ನು ತಲುಪಿಲ್ಲ.

ಹಾಗೆ ನೋಡಿದರೆ 1939 ರಿಂದಲೂ ಮುಂಬಯಿಯಲ್ಲಿ ಬೃಹತ್ತಾದ ಮೇ ದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಬಟ್ಟೆ ಗಿರಣಿ, ಇಂಜಿನಿಯರಿಂಗ್, ಪ್ರೆಸ್, ಬಂದರ್, ರೈಲ್ವೆ, ಹೋಟೆಲ್—ಹೀಗೆ ನಾನಾ ವಿಭಾಗದ ಕಾರ್ಮಿಕರು, ಅತಿ ಬಲಿಷ್ಠವಾಗಿದ್ದ ಗಿರಣಿ ಕಾಮಗಾರಿ ಯೂನಿಯನ್ ಮತ್ತು ರೇಲ್ವೆ-ಬಂದರ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಬೃಹತ್ ಮೆರವಣಿಗೆ, ಕಾಮಗಾರ ಮೈದಾನದಲ್ಲಿ ಪ್ರಚಂಡ ಸಭೆ-ಅಲ್ಲಿ ಕಾರ್ಮಿಕರ ಮುಖ್ಯ ಬೇಡಿಕೆ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟದ ಕರೆ-ಮೇ ದಿನಾಚರಣೆಯ ಮುಖ್ಯ ಬಿಂದುವಾಗಿರುತ್ತಿತ್ತು.

ಮೇ ದಿನಾಚರಣೆಯ ಘೋಷಣೆ ಕಾರ್ಮಿಕ ವರ್ಗದ ಆರ್ಥಿಕ ಬೇಡಿಕೆಗಳನ್ನು ಮಾತ್ರ ಹೊಂದಿರುತ್ತಿರಲಿಲ್ಲ. ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಐಕ್ಯತೆಗೂ, ಬಂಡವಾಳಶಾಹಿಗಳ ಹಿಡಿತದಿಂದ ಕಾರ್ಮಿಕ ವರ್ಗದ ವಿಮೋಚನೆಗೂ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಗುಲಾಮಗಿರಿಯಿಂದ ವಿಮೋಚನೆಗೂ ಒತ್ತು ಕೊಡಲಾಗುತ್ತಿತ್ತು. ನಾನು ಆಗ ಚಿಕ್ಕ ವಯಸ್ಸಿನವನಾಗಿದ್ದುದರಿಂದ ಮೇ ದಿನದ ಘೋಷಣೆಗಳ ಮಹತ್ವ ಅಷ್ಟೇನೂ ನನಗೆ ತಿಳಿಯುತ್ತಿರಲಿಲ್ಲ.

ಆದರೆ 1943 ಹುಬ್ಬಳ್ಳಿಯಲ್ಲಿ, 1945 ಬಿಜಾಪುರದಲ್ಲಿ ಆಚರಿಸಿದ ಮೇ ದಿನವೇ ಬೇರೆ. ನಾಸಿಕ ಜೈಲಿನಿಂದ ಬಿಡುಗಡೆಯಾಗಿತ್ತು. ಮೇ 1942ರಲ್ಲಿ. ಜಪಾನಿನ ಸೈನಿಕರು ಬರ್ಮಾ, ಮಲಯ, ಸಿಂಗಪುರಗಳತ್ತ ನುಗ್ಗುತ್ತಿದ್ದರು. ಅವರಿಂದ ಭಾರತ ದೇಶದ ಮೇಲೂ ಆಕ್ರಮಣ ನಡಿಯಬಹುದೆಂಬ ಭೀತಿ ಉಂಟಾಗಿತ್ತು. ದೇಶದ ರಕ್ಷಣೆಗಾಗಿ ನಾಝಿಜಮನ್ನು, ಜಪಾನಿ ಸೈನಿಕರನ್ನು ಸೋಲಿಸಲೇಬೇಕಾಗಿತ್ತು. ಜಪಾನಿ ಸೈನಿಕರು ಗೆರಿಲ್ಲ ಯುದ್ಧದ ತಂತ್ರ ಉಪಯೋಗಿಸುತ್ತಿದ್ದುದರಿಂದ ನಮ್ಮ ಸೈನಿಕರ ಜೊತೆಯಲ್ಲಿ ಜನರು ಗೆರಿಲ್ಲ ಯುದ್ಧದ ಕೆಲವಂಶವನ್ನಾದರೂ ಕಲಿತು ಸೈನಿಕರಿಗೆ ನೆರವಾಗಬೇಕೆಂಬ ಉದ್ದೇಶದಿಂದ ಕರಾವಳಿ ರಾಜ್ಯಗಳ ಕಾಮ್ರೇಡ್ಸರಿಗೆ ಪುಣೆಯ ಸಿಂಹಗಡದಲ್ಲಿ ಗೆರಿಲ್ಲ ಯುದ್ಧದ ಶಿಕ್ಷಣ ಪಡೆಯಲು ಪಕ್ಷದ ಕೇಂದ್ರ ವ್ಯವಸ್ಥೆ ಮಾಡಿತ್ತು.

ಮೇ ದಿನದ ನೆನಪು ಹಾಗೂ ಕ್ರಾಂತಿಕಾರಿ ಕರ್ತವ್ಯಗಳು

ಎನ್. ಕೆ. ಉಪಾಧ್ಯಾಯ

ಆ ಶಿಕ್ಷಣ ಪಡೆಯುವ ಅವಕಾಶ ನನಗೂ ಲಭ್ಯವಾಗಿತ್ತು.

ಮುಂಬಯಿಯ ಕಾರ್ಮಿಕ ಚಳುವಳಗಳಲ್ಲಿ ಪಾಲ್ಗೊಳ್ಳುವಿಕೆ, ಜೈಲಿನಲ್ಲಿ ಸೈದ್ಧಾಂತಿಕ ಶಿಕ್ಷಣ, ಅವುಗಳ ಆಧಾರದಲ್ಲಿ ಹುಬ್ಬಳ್ಳಿ-ಬಿಜಾಪುರಗಳಲ್ಲಿ ಸ್ವತಂತ್ರವಾಗಿಯೇ ಕಾರ್ಮಿಕ ಸಂಘಗಳನ್ನು ಕಟ್ಟಿ, ಹೋರಾಟ ನಡೆಸಿ, ಗುಂಡಾಗಳಿಂದ, ಪೋಲೀಸರಿಂದ ಪೆಟ್ಟು ತಿಂದ ಅನುಭವಗಳ ಆಧಾರದಲ್ಲಿ ಸಂಘಟಿಸಿದ ಮೇ ದಿನಾಚರಣೆಗಳು ಅಲ್ಲಿ ಮಾಡಿದ ಭಾಷಣದ ಅನುಭವ ಬೇರೆಯಾಗಿತ್ತು. 1943 ರಲ್ಲಿ ಹುಬ್ಬಳ್ಳಿಯಲ್ಲಿ ರೈಲ್ವೆ ಕೆಲಸಗಾರರ ಬೃಹತ್ ಮೆರವಣಿಗೆ ಸಭೆಗಳ ಮೂಲಕ ಮೇ ದಿನಾಚರಣೆ ಕೆಂಬಾವುಟದ ನೇತೃತ್ವದಲ್ಲಿ ಅದೇ ಸಮಯದಲ್ಲಿ ಕಾಂಗ್ರೆಸ್ ಬಾವುಟ ಹಿಡಿದು ಭಾರತ ಮಿಲ್ ಕೆಲಸಗಾರರಿಂದಲೂ ಮೇ ದಿನಾಚರಣೆ, ಭೀಕರ ಯುದ್ಧ ನಡೆಯುತ್ತಿದ್ದ ದಿನಗಳವು. ನಮ್ಮ ಸೈನಿಕರ ಬಂದೂಕು-ಪಿಸ್ತೂಲ್‌ಗಳಿಂದ ಗೋಲಿ ಎಷ್ಟು ವೇಗದಲ್ಲಿ ಹೋಗಿ ಶತ್ರುಗಳನ್ನು ನೆಲಸಮ ಗೊಳಿಸುತ್ತಿತ್ತು. ಅಷ್ಟೇ ವೇಗದಲ್ಲಿ ಮಾರ್ದನಿಗೊಳ್ಳುತ್ತಿತ್ತು. ಕಾರ್ಮಿಕರಿಂದ ಮೇ ದಿನದ ಘೋಷಣೆಗಳು—

"ನಾಝಿಜಂ ನಾಶವಾಗಲಿ."
"ಕೆಂಪು ಸೈನ್ಯ ವಿಜಯಿಯಾಗಲಿ."
"ಯುದ್ಧ ನಿಲ್ಲಲಿ, ಶಾಂತಿ ನೆಲಸಲಿ."
"ಭಾರತ ದೇಶ ಸ್ವತಂತ್ರವಾಗಲಿ."
"ಬೆಲೆಯೇರಿಕೆ ತಡೆಗಟ್ಟಿರಿ."
"ಜಗತ್ತಿನ ಕಾರ್ಮಿಕರೇ ಒಂದಾಗಿರಿ."
ಇನ್ ಕಿಲಾಬ್ ಜಿಂದಾಬಾದ್."

1943 ರ ಪೂರ್ವದಲ್ಲೇ ಹುಬ್ಬಳ್ಳಿಯ ರೈಲ್ವೆ ಕೆಲಸಗಾರರು, ಮಂಗಳೂರಿನ, ಹಂಚು, ಗೇರುಬೀಜ, ಬೀಡಿ, ಬಂದರ, ನೇಯ್ಗೆ ಕೆಲಸಗಾರರು, ಕೋಲಾರದ ಚಿನ್ನದ ಗಣಿ ಕೆಲಸಗಾರರು, ಬೆಂಗಳೂರಿನ ಬಟ್ಟೆ ಗಿರಣಿ, ಇಂಜಿನಿಯರಿಂಗ್ ಕೆಲಸಗಾರರು, ಮೈಸೂರಿನ ರೈಲ್ವೆ, ಬೀಡಿ ಕೆಲಸಗಾರರು, ಭದ್ರಾವತಿ-ಹರಿಹರದ ಇಂಜಿ

ನಿಯರಿಂದ ಕೆಲಸಗಾರರು ಕೆಂಬಾವುಟದ ನೇತೃತ್ವದಲ್ಲಿ ಮೇ ದಿನಾಚರಣೆ ಆಚರಿಸುತ್ತಿದ್ದರು. ಒತ್ತಾಯದಿಂದಲ್ಲ, ಸ್ವಯಂ ಸ್ಫೂರ್ತಿಯಿಂದ, ನಮ್ಮ ಆರ್ಥಿಕ ಬೇಡಿಕೆಗಳಿಗಾಗಿ ನಡೆಯುತ್ತಿರುವ ಹೋರಾಟ, ಕಾರ್ಮಿಕ ವರ್ಗದ ವಿಮೋಚನೆಗಾಗಿ, ಬಂಡವಾಳಶಾಹಿ ವರ್ಗದ ನಾಶಕ್ಕಾಗಿ, ನಡೆಯುವ ಹೋರಾಟವಾಗಿ ಪರಿವರ್ತನೆಯಾಗಬೇಕು ಎಂಬ ತಿಳುವಳಿಕೆಯಿಂದಲೇ ಕಾರ್ಮಿಕರು ಮೇ ದಿನಾಚರಣೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಕಾರ್ಮಿಕರ ಹೋರಾಟದ ದಿನವಾಗಿ ಹೆಮ್ಮೆಯಿಂದ ಆಚರಿಸಲ್ಪಡುತ್ತಿತ್ತು.

1945 ರಲ್ಲಿ ಬಿಜಾಪುರದಲ್ಲಿ ಪ್ರಥಮ ಬಾರಿ ಬೀಡಿ ಕಾರ್ಮಿಕರು ಮತ್ತು ವಿದ್ಯಾರ್ಥಿ ಸಂಘಟನೆ ಜಂಟಿಯಾಗಿ ಮೇ ದಿನಾಚರಣೆ ಆಚರಿಸಿದಾಗಿನ ಉತ್ಸಾಹವೇ ಬೇರೆ. ಸೋವಿಯತ್ ದೇಶದ ಕೆಂಪು ಸೈನಿಕರಿಂದ ಜಗತ್ತನ್ನೇ ಆಕ್ರಮಿಸಲು ಹೊರಟಿದ್ದ ನಾಝಿ ಸೈನಿಕರ ಸೋಲು, ಜಗತ್ತಿನ ಶಾಂತಿಪ್ರಿಯ ಜನತೆಯ ವಿಜಯದ ವರ್ಷ ಅದಾಗಿತ್ತು. ಅಂದು ಮೇ ದಿನಾಚರಣೆ ಬರೀ ಕಾರ್ಮಿಕರಿಗಷ್ಟೇ ಮೀಸಲಾಗಿರಲಿಲ್ಲ. ಇಡೀ ದುಡಿಯುವ ವರ್ಗವೇ ಮೇ ದಿನಾಚರಣೆಯನ್ನು ತಮ್ಮ ಹೋರಾಟದ ದಿನವನ್ನಾಗಿ ಆಚರಿಸುತ್ತಿತ್ತು. ಸ್ವಯಂ ಸ್ಫೂರ್ತಿಯಿಂದಲೇ ಹಣ ಸಂಗ್ರಹವಾಗುತ್ತಿತ್ತು. ಕೆಂಬಾವುಟಗಳು ಹಾರಾಡುತ್ತಿದ್ದವು. ಉದ್ದ ಮೆರವಣಿಗೆ, ವಿಶಾಲ ಸಭೆಗಳು ನಡೆಯುತ್ತಿದ್ದವು. ಅಂದಿನ ಸ್ಫೂರ್ತಿ ಇಂದು ಕಂಡು ಬರುತ್ತಿಲ್ಲ. ಅಂದಿನ ಸಹ ಭಾಗಿತ್ವ ಇಂದು ಇಲ್ಲವಾಗಿದೆ. ಆಚರಣೆಗಾಗಿ ಆಚರಣೆ ಎಂಬ ಸರ್ವಸಾಧಾರಣ ವಾದ. ಒತ್ತಾಯದ ಕಾರ್ಯಕ್ರಮವಾಗಿ ಉಳಿದಿದೆ ಇತ್ತೀಚಿನ ಮೇ ದಿನಾಚರಣೆಗಳು.

ಕಾರ್ಮಿಕ ಚಳುವಳಿಯಲ್ಲಿ ಪರಿಷ್ಕರಣವಾದ ಸುಧಾರಣಾ ವಾದಗಳು ಹೊಕ್ಕು ಕಾರ್ಮಿಕರ ಕ್ರಾಂತಿಕಾರಿ ವಿಚಾರ ಧಾರೆಗೆ ನೀರೆರೆದಿವೆ. ಆರ್ಥಿಕ ಬೇಡಿಕೆಗಳಿಗಾಗಿ ನಡೆಯುವ ಹೋರಾಟ ರಾಜಕೀಯ ಹೋರಾಟವಾಗಿ ಪರಿವರ್ತನೆಗೊಳ್ಳಬೇಕು, ಅದು ಸಮತಾವಾದಿ ಕ್ರಾಂತಿಯಲ್ಲಿ ಶೋಷಣೆ ಸಹಿತ ಸಮಾಜ ನಿರ್ಮಾಣದಲ್ಲಿ ಪರ್ಯವಸಾನಗೊಳ್ಳಬೇಕು ಎಂಬ ಅಂಶವನ್ನು ಮರೆಮಾಚಿತ್ತು. ಪರಿಷ್ಕರಣವಾದ. ಭಾಗಶಃ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರ ಹೋರಾಟುವುದು ಅದರ ಗುರಿಯಾಗಿತ್ತು. ಆ ಕಾರಣದಿಂದಾಗಿ ಕಾರ್ಮಿಕ ವರ್ಗ ತನ್ನ ವರ್ಗದ ಚರಿತ್ರಾರ್ಹ ಜವಾಬ್ದಾರಿಯನ್ನು ಕಡೆಗಣಿಸಿತ್ತು.

ಕ್ಷುಲ್ಲಕ ಆರ್ಥಿಕ ಬೇಡಿಕೆಗಳನ್ನು ಬದಿಗಿಟ್ಟು ರಾಜಕೀಯ ಘೋಷಣೆ ಕೂಗಬೇಕು. ರಾಜಕೀಯ ಪ್ರಶ್ನೆಗಳಿಗೆ ಸ್ಪಂದಿಸಬೇಕು. ಕಾರ್ಮಿಕ ವರ್ಗದ ಕ್ರಾಂತಿಕಾರಿ ಪ್ರಜ್ಞೆಯನ್ನು ವಿಸ್ತರಿಸಿ ರಾಜಕೀಯ ಹೋರಾಟಕ್ಕೆ ನೆರವಾಗಲು ಆರ್ಥಿಕ ಬೇಡಿಕೆ ಕ್ರಾಂತಿಕಾರಿ ಸ್ವರೂಪದ್ದಾಗಿರಬೇಕೆಂದು 1900 ರಲ್ಲೇ ಲೆನಿನ್ ಹೇಳಿದ್ದರು. ಮೇ ದಿನವು ಅಂತರ್ರಾಷ್ಟ್ರೀಯ ಸೌಹಾರ್ದತೆಯ ಘೋಷಣೆಯನ್ನು ನೀಡುವ ಸಾಮಾನ್ಯ ಘೋಷಣೆಯಾಗುವುದರ ಬದಲು ಪ್ರತಿಯೊಂದು ರಾಷ್ಟ್ರದ ನಿರ್ದಿಷ್ಟ ಕ್ರಾಂತಿಕಾರಿ ಕರ್ತವ್ಯಗಳ ಬಗ್ಗೆ ಕಾರ್ಮಿಕರು ಎಚ್ಚೆತ್ತುಕೊಳ್ಳಬೇಕೆಂದೂ ಲೆನಿನ್ ಹೇಳಿದ್ದರು. ತಕ್ಷಣದ ಆರ್ಥಿಕ ಬೇಡಿಕೆಗಳನ್ನು ಸಂಯೋಜಿಸಿ ಅವುಗಳೆಲ್ಲ ಬಂಡವಾಳಶಾಹಿಯ ವಿರುದ್ಧದ ಹೋರಾಟದ ಭಾಗವೆಂಬುದನ್ನು ಕಾರ್ಮಿಕ ವರ್ಗಕ್ಕೆ ಮನದಟ್ಟು ಮಾಡಿಕೊಡಬೇಕೆಂದೂ ಲೆನಿನ್ ಹೇಳಿದ್ದರು.

ದೇಶ ಸ್ವತಂತ್ರವಾದ ನಂತರ ಕಾರ್ಮಿಕ ಸಂಘಟನೆಯಲ್ಲುಂಟಾದ ಒಡಕು, ಬಲಪಂಥವಾದ, ಪರಿಷ್ಕರಣ ವಾದಗಳ ಪ್ರವೇಶಗಳಿಂದಾಗಿ ಸ್ವಾತಂತ್ರ್ಯ ಪೂರ್ವದ ಸ್ಫೂರ್ತಿಗೆ ನೀರೆರಚಿದಂತಾಗಿತ್ತು. ಎಪ್ಪತ್ತರ ದಶಕದಿಂದೀಚೆಗೆ, ಸಿ. ಐ. ಟಿ. ಯು. ಸ್ಥಾಪನೆಯಾದ ನಂತರ ಕಾರ್ಮಿಕ ಚಳುವಳಿಗೆ, ಮೇ ದಿನಾಚರಣೆಗೆ ಹೊಸ ತಿರುವು ನೀಡಿದಂತಾಗಿದೆ. ಆದರೆ ಪಶ್ಚಿಮ ಬಂಗಾಲ, ಕೇರಳಗಳಂತ ಒಂದೆರಡು ರಾಜ್ಯಗಳನ್ನು ಬಿಟ್ಟು ಬೇರೆಡೆಗಳಲ್ಲಿ 20-25 ವರ್ಷಗಳ ಜಾಡ್ಯದಿಂದ ಹೊರ ಬರಲು ಸಮಯಾವಕಾಶ ಹಿಡಿಯುತ್ತಿದೆ. ಆದರೆ ಸರಿಯಾದ ದಿಕ್ಸೂಚಿ ಕಣ್ಣ ಮುಂದಿರುವುದರಿಂದ ಸಿ. ಐ. ಟಿ. ಯು. ಪ್ರಯತ್ನದಿಂದ ಐಕ್ಯ ಮೇ ದಿನಾಚರಣೆ ಆಚರಿಸಿ, ಕಾರ್ಮಿಕ ವರ್ಗದಲ್ಲಿ ಅದರ ಚರಿತ್ರಾರ್ಹ ಜವಾಬ್ದಾರಿಯ ಅರಿವು ಉಂಟುಮಾಡುವ ಪ್ರಯತ್ನ ನಡೆದಿದೆ.

ಕರ್ನಾಟಕದಲ್ಲಿ ಕಾರ್ಮಿಕರೂ-ಜನರೂ ಹಲವಾರು ಧೀಮಂತ ಹೋರಾಟಗಳನ್ನು ನಡೆಸಿ ತ್ಯಾಗ ಬಲಿದಾನ ಮಾಡಿದ್ದರೂ ಕೂಡ ಪ್ರಬಲವಾದ ಪ್ರಜಾಪ್ರಭುತ್ವ ಶಕ್ತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಜಾತಿಯ ಪ್ರತಿಗಾಮಿ ಶಕ್ತಿಗಳು ಅದನ್ನು ಪುಡಿ ಮಾಡಿವೆ. ಎಡ ರಾಜಕೀಯ ಕೂಡ ರಾಜ್ಯದ ರಾಜಕೀಯದ ಮೇಲೆ ಪರಿಣಾಮ ಬೀರುವಂತೆ ಬೆಳೆದು ಬಂದಿಲ್ಲ. ಕಾರ್ಮಿಕ ಸಂಘಟನೆಯ ಮೇಲೂ ಅವು ಪರಿಣಾಮ ಬೀರಿದೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಕೂಡ 1948-50ರ ಹಿಂದಿನ ಸ್ಫೂರ್ತಿ ಅನಂತರ ಕಂಡುಬಂದಿಲ್ಲ ; ಬರುತ್ತಿಲ್ಲ. ಯಾಕೆಂದರೆ ದೇಶದ ಇತರ ಭಾಗಗಳಂತೆಯೇ ಕರ್ನಾಟಕದಲ್ಲಿಯೂ ಕಾರ್ಮಿಕರ ಮಧ್ಯೆ ಪರಿಷ್ಕರಣವಾದದ ಗಾಳಿ ಬಲವಾಗಿಯೇ ಬೀಸಿತ್ತು, ಆ ಕಾರಣದಿಂದಾಗಿ ಆರ್ಥಿಕ ಬೇಡಿಕೆಗಳ ಮಟ್ಟದ ಹೋರಾಟಕ್ಕಷ್ಟೇ ಕಾರ್ಮಿಕ ವರ್ಗ ಸೀಮಿತಗೊಳ್ಳುವಂತಾ

ಗಿದೆ. ಇತ್ತೀಚಿನ ವರ್ಷಗಳಲ್ಲಿ ಸಿ. ಐ. ಟಿ. ಯು. ಹಲವಾರು ರಾಜಕೀಯ ಚಟುಗಳಲ್ಲಿ ಕಾರ್ಮಿಕ ವರ್ಗ ಪಾಲ್ಗೊಳ್ಳುವಂತೆ ಮಾಡಿದೆ. ಸಂಖ್ಯೆ-ಮೌಲ್ಯ ದೃಷ್ಟಿಯಲ್ಲಿ ಅದು ಅತ್ಯಲ್ಪ; ಆದರೆ ನಮ್ಮ ಧ್ಯೇಯ ಸಾಧನೆಯ ಮುನ್ನಡೆಗೆ ಅದು ಸಹಾಯಕಾರಿ.

ಆದರೆ ರಾಜೀವ ಗಾಂಧಿಯವರ ಆರ್ಥಿಕ ನೀತಿಯ ಕೆಟ್ಟ ಪರಿಣಾಮದಿಂದಾಗಿ ಕಾರ್ಮಿಕ ವರ್ಗ ಐಕ್ಯ ಹೋರಾಟಕ್ಕೆ, ರಾಜಕೀಯ ಹೋರಾಟಕ್ಕೆ ಮುಂದಾಗುತ್ತಿದೆ. ವಾಸ್ತವ ಪರಿಸ್ಥಿತಿಯೇ ಕಾರ್ಮಿಕರಲ್ಲಿ ಕ್ರಾಂತಿಕಾರಿ ಮನೋಭಾವನೆಗಳನ್ನು ಹುಟ್ಟಿಸಿ, ಹೋರಾಟದ ಕಣಕ್ಕೆ ನುಗ್ಗಿಸುತ್ತಿವೆ. ಇಂಥ ಪರಿಸ್ಥಿತಿಯನ್ನು ಸಿ. ಐ. ಟಿ. ಯು. ಮತ್ತು ಎಡ ಮತ್ತು ಪ್ರಜಾಪ್ರಭುತ್ವದ ಮುಖಂಡತ್ವ ಉಪಯೋಗಿಸಿಕೊಂಡು ಆರ್ಥಿಕ ಬೇಡಿಕೆಗಳನ್ನು ರಾಜಕೀಯ ಬೇಡಿಕೆಗಳನ್ನಾಗಿ ಪರಿವರ್ತಿಸಿ, ಬಂಡವಾಳಶಾಹಿ-ಭೂಮಾಲಕ ವರ್ಗದ ಈ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದು, ಕಾರ್ಮಿಕ ವರ್ಗದ ಮುಖಂಡತ್ವದ ಜನತಾ ಪ್ರಜಾಪ್ರಭುತ್ವ ಸರ್ಕಾರ, ಕೊನೆಯಲ್ಲಿ ಕ್ರಾಂತಿಯ ಮೂಲಕ ಸಮಾಜವಾದಿ ಸರ್ಕಾರ ರಚಿಸಲಿಕ್ಕೆ ಅಸ್ತ್ರಗಳನ್ನಾಗಿ ಉಪಯೋಗಿಸಬೇಕು. ಈ ಸರ್ಕಾರವನ್ನು ಕಿತ್ತೊಗೆದು, ಸಮಾಜವಾದಿ ಕ್ರಾಂತಿಯ ಮೂಲಕ ಶೋಷಣೆ ರಹಿತ ಸರ್ಕಾರ ರಚನೆಯಾಗುವ ತನಕ ಕಾರ್ಮಿಕರ ಸುಲಿಗೆ ನಿಲ್ಲಲು ಸಾಧ್ಯವಿಲ್ಲ. ಮೇ ದಿನಾಚರಣೆಯಂದು ಹಾಗೆಯೇ ಕಾರ್ಮಿಕರ ಪ್ರತಿಯೊಂದು ಚಟುವಟಿಕೆಗಳಲ್ಲೂ ಈ ಅಂಶವನ್ನು ಎತ್ತಿ ತೋರಿಸಿ, ಪ್ರತಿಯೊಬ್ಬ ಕಾರ್ಮಿಕ ಶೋಷಣೆಗೊಳಗಾಗಿ ನರಕಯಾತನೆ ಅನುಭವಿಸುತ್ತಿರುವ ಈಗಿರುವ ಸಮಾಜದ ಬದಲಾವಣೆಯ ಸೈನಿಕನಾಗಿ ದುಡಿಯುವಂತೆ ಮಾಡಬೇಕು. ತಮ್ಮ ಶೋಷಣೆ, ಸಂಕಷ್ಟಗಳಿಗೆಲ್ಲ ಮುಖ್ಯ ಕಾರಣವೇನು, ಅದನ್ನು ಯಾವ ರೀತಿ ಎದುರಿಸಿ ಬದಲಾಯಿಸಬೇಕು, ಯಾವ ತೆರದ ಹೊಸ ಸಮಾಜ ನಿರ್ಮಿಸಬೇಕು ಎಂಬ ಅಂಶಗಳನ್ನು ಕಾರ್ಮಿಕ ವರ್ಗ ಮನಗಾಣುವುದಿಲ್ಲವೋ, ಬದಲಾವಣೆ ಮಾಡತಕ್ಕಂಥ ಕ್ರಾಂತಿಯಲ್ಲಿ ಪಾಲ್ಗೊಳ್ಳುವುದಿಲ್ಲವೋ ಅಲ್ಲಿ ತನಕ ಕಾರ್ಮಿಕ ವರ್ಗದಲ್ಲಿ ರಾಜಕೀಯ ಪ್ರಜ್ಞೆ ಮೂಡಿಬಂದಿಲ್ಲವೆಂದು ತಿಳಿದುಕೊಳ್ಳಬೇಕು.

ಟ್ರೇಡ್ ಯೂನಿಯನ್ ಮತ್ತು ಕಾರ್ಮಿಕ ಕಮಿಟಿಗಳ ನಾಲ್ಕನೇ ಸಮ್ಮೇಳನವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ "ಹುಕುಂ ಪ್ರಕಾರ, ಒಪ್ಪಂದದಂತೆ ಕ್ರಾಂತಿ ಮಾಡಲಿಕ್ಕಾಗುವುದಿಲ್ಲವೆಂದು ನಮಗೆ ಗೊತ್ತು. ಹಳೇ ಪದ್ಧತಿಯಲ್ಲಿಯೇ ಜೀವಿಸುವುದು ಅಸಾಧ್ಯವೆಂದು ಮಿಲಿಯ ಗಟ್ಲೆ ಜನರಿಗೆ ಮನವರಿಕೆಯಾದಾಗ ಕ್ರಾಂತಿಯಾಗುತ್ತದೆ" ಎಂದು ಲೆನಿನ್ ಹೇಳಿದ್ದರು. ಅದು ನಿಜಾಂಶವನ್ನು ತೋರಿಸಿ ಕೊಡುತ್ತದೆ. ನಾವು ಅದನ್ನು ಆಳವಾಗಿ ಅರ್ಥೈಸಿಕೊಳ್ಳಬೇಕು. ಮೇ ದಿನಾಚರಣೆಯನ್ನು ಆಚರಿಸುವಾಗ, ಅದಕ್ಕೆ ತಯಾರಿ ಮಾಡುವಾಗ, ಆರ್ಥಿಕ ಬೇಡಿಕೆಗಳಿಗಾಗಿ ಹೋರಾಟ ಮಾಡುವಾಗ, ಅವುಗಳ ಸೋಲು-ಗೆಲುವುಗಳನ್ನು ವಿವರಿಸುವಾಗ ಲೆನಿನ್ ಹೇಳಿದ ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಮಿಲಿಯ ಗಟ್ಲೆ ಜನರನ್ನು ರಾಜಕೀಯ ಸತ್ತ್ವೆಯ ಹಾಗೆಯೇ ಸಮಾಜದ ಬದಲಾವಣೆಗಾಗಿ ಯಾವ ರೀತಿ ಅಣಿಗೊಳಿಸಬೇಕೆಂಬುದನ್ನು ತಿಳಿದುಕೊಂಡರೆ ಒಂದು ನೂರ ಒಂನೆಯ ಮೇ ದಿನಾಚರಣೆ ಆಚರಿಸುವುದು ಸಾರ್ಥಕವಾಗುತ್ತದೆ.

ನಮ್ಮ ಗುರಿ ಸಾಧಿಸಲು ನಾವು ನಡೆಯ ತಕ್ಕ ದಾರಿ ಬಲು ದೂರ. ಆದರೆ ಬೇಗನೆ ವರ್ಗ ಸಂಬಂಧದಲ್ಲಿ ಬದಲಾವಣೆ ಉಂಟುಮಾಡಲು ಸಾಧ್ಯವಾದರೆ, ಆ ರೀತಿ ರಾಜಕೀಯವಾಗಿ ಜಾಗೃತಿಗೊಂಡ ಕಾರ್ಮಿಕ ವರ್ಗ ಸಿದ್ಧಗೊಳಿಸಿದರೆ ದಾರಿಯ ದೂರ ಕಡಿಮೆಯಾಗಬಹುದು. ಈ ನಿಟ್ಟಿನಲ್ಲಿ ನಮ್ಮ ಕಾರ್ಯ ಮುಂದುವರಿಯಲಿ.

ಕರ್ನಾಟಕದಲ್ಲಿ ಬಲಿಷ್ಟವಾದ ಸಿ. ಐ. ಟಿ. ಯು. ಸಂಘಟನೆ ಇದೆ. ಅದು ತನ್ನ ಜವಾಬ್ದಾರಿಯನ್ನು ಅರಿತು ಕ್ರಾಂತಿಕಾರಿ ಪಥದಲ್ಲಿ ಮುಂದುವರಿದದ್ದಾದರೆ ಕರ್ನಾಟಕದ ರಾಜಕೀಯದಲ್ಲಿ ಬದಲಾವಣೆ ಉಂಟುಮಾಡುವುದು ಕಷ್ಟಕರವೇನಲ್ಲ. ಸಿ. ಐ. ಟಿ. ಯು. ಹಾಗೆಯೇ ಇತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳಲ್ಲಿರುವ ಕಾರ್ಮಿಕರಲ್ಲಿ ರಾಜಕೀಯ ಪ್ರಜ್ಞೆ ಉಂಟುಮಾಡೋಣ. ಕಾರ್ಮಿಕ ವರ್ಗದ ಐಕ್ಯತೆ, ಬಂಡವಾಳದಾರರ, ಸಾಮ್ರಾಜ್ಯಶಾಹಿಗಳ ವಿರುದ್ಧ ಐಕ್ಯ ಹೋರಾಟ, ಶೋಷಣೆ ರಹಿತ ಸಮಾಜ ನಿರ್ಮಾಣಕ್ಕೆ ಸಮಾಜವಾದಿ ಕ್ರಾಂತಿಯ ಅವಶ್ಯಕತೆಗಳ ಕುರಿತು ತಿಳುವಳಿಕೆ ಕೊಡೋಣ.

ಇದರತ್ತ ಗಮನ ಹರಿಸೋಣ

ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರ ನಮ್ಮ ಚಳುವಳಿ, ಸೀಮಿತಗೊಳಿಸಬಾರದು, 'ಕ್ರಾಂತಿ ಚಿರಾಯುವಾಗಲಿ' (ಇನ್‌ಕಿಲಾಬ್ ಜಿಂದಾಬಾದ್) ಎಂದು ಘೋಷಿಸುವ ಕಾರ್ಮಿಕ, ಶೋಷಣೆ ರಹಿತ ಸಮಾಜ ನಿರ್ಮಿಸಲು ಹೊರಟಿರುವ ಕಾರ್ಮಿಕ ರಾಜಕೀಯ ಪ್ರಶ್ನೆಗಳಿಗೆ ಸ್ಪಂದಿಸಬೇಕು, ರಾಜಕೀಯದಲ್ಲಿ ಪಾಲ್ಗೊಳ್ಳಬೇಕೆಂದು ಹೇಳುತ್ತಲೇ ಬಂದಿದ್ದೇವೆ. ಆರ್ಥಿಕ ಹೋರಾಟಗಳಲ್ಲಿ ಹಂಗು ಬಿಟ್ಟು ಪಾಲ್ಗೊಳ್ಳುವ ಕಾರ್ಮಿಕ ರಾಜಕೀಯ ವಿಷಯಗಳಲ್ಲಿ ಹಿಂದೇಟು ಹಾಕುತ್ತಾನೆ. ಪ್ರತಿಯೊಂದು ಹಂತದ ಚುನಾವಣೆಯ ಫಲಿತಾಂಶ ಅನದ್ನು ಎತ್ತಿ ತೋರಿಸುತ್ತಿದೆ. ಹೋರಾಟಗಳಲ್ಲಿ ನಮ್ಮ ಜೊತೆ

ಗಿದ್ದು, ಎಂಥ ಸಂಕಷ್ಟಗಳನ್ನಾದರೂ ಎದುರಿಸಲು ತಯಾರಿದ್ದ ಕಾರ್ಮಿಕ ಚುನಾವಣೆಗಳಲ್ಲಿ ಬಂಡವಾಳಶಾಹಿ ಪಕ್ಷಗಳಿಗೆ ಮತ ನೀಡುತ್ತಿರುವುದು ನಡೆದು ಬಂದಿದೆ. ಕಾರ್ಮಿಕನಲ್ಲಿ ರಾಜಕೀಯ ತಿಳುವಳಿಕೆಯ ಅಭಾವವೇ ಇದಾಗಿದೆ. ಇಂಥ ಕೊರತೆಯನ್ನು ನಿವಾರಿಸಲೇ ಬೇಕಲ್ಲ.

ಸಿ. ಐ. ಟಿ. ಯು. ಬಿಟ್ಟರೆ ಬೇರೆ ಕೇಂದ್ರ ಕಾರ್ಮಿಕ ಸಂಘಟನೆಗಳು, ಕಾರ್ಮಿಕರನ್ನು ರಾಜಕೀಯದಿಂದ ದೂರ ಇಡುತ್ತವೆ. ಕಾರ್ಮಿಕರಿಗೆ ರಾಜಕಾರಣ ಯಾಕೆ ಎಂಬ ಸವಾಲನ್ನು ಒಡ್ಡುತ್ತಾರೆ, ಕಾರ್ಮಿಕ ರಾಜಕಾರಣ ಅರ್ಥೈಸಿಕೊಂಡರೆ ತಮ್ಮ ಮುಖಂಡತ್ವಕ್ಕೆ ಹಾನಿಯಾಗಬಹುದೆಂಬ ಭೀತಿ ಅವರದ್ದಿರಬಹುದು. ಜಂಟಿ ಕಾರ್ಯಕ್ರಮಗಳಿಗೂ ಅವರು ಹಿಂದೇಟು ಹಾಕುತ್ತಾರೆ; ಜಂಟೀ ಕಾರ್ಯಕ್ರಮಗಳಿಗೆ ಒಪ್ಪಿಕೊಂಡರೂ, ಬೆಂಬಲಿಗರನ್ನು ಬಿಟ್ಟು ತಾವಷ್ಟೇ ಬರುತ್ತಾರೆ. ಇದರಿಂದಾಗಿ ಬಹುಸಂಖ್ಯ ಕಾರ್ಮಿಕರು ರಾಜಕೀಯ ಕಾರ್ಯಕ್ರಮಗಳಿಂದ ದೂರ ಇರುವಂತಾಗುತ್ತದೆ. ಇದನ್ನು ಗಂಭೀರವಾಗಿ ಗಮನಿಸಿ ಅಂಥ ಕಾರ್ಮಿಕ ವರ್ಗ ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು.

ನಿಜವಾಗಿ ನೋಡಿದರೆ ಕಾರ್ಮಿಕ ಬದಲಾವಣೆಗೆ ವಿರೋಧಿಯಲ್ಲ. ಬದಲಾವಣೆಯ ರೂಪರೇಷೆ, ಅದರ ಸಾಧ್ಯತೆ, ತನ್ನ ಜೀವನದ ಬದಲಾವಣೆಗೆ ಅದರ ಅವಶ್ಯಕತೆಗಳ ಕುರಿತು ಅವನಿಗೆ ತಿಳುವಳಿಕೆ ಕೊಡುವುದು ಅತ್ಯಗತ್ಯ. ಈ ಕರ್ತವ್ಯದಲ್ಲಿ ನಾವು ಕರ್ತವ್ಯಪರರೂ ಆಗಿಲ್ಲ. ಅದು ತುರ್ತಿನ ಮತ್ತು ನಿರಂತರ ಕೆಲಸ. ಯೂನಿಯನ್ ಆಫೀಸಿನಲ್ಲಿ ಕೂತು ಇಡೀ ದಿವಸ ಪ್ರತಿಯೊಬ್ಬ ಕಾರ್ಮಿಕನ ಸಮಸ್ಯೆಗಳ ಕುರಿತು ಗಂಭೀರವಾಗಿ ಯಾವ ರೀತಿ ಚರ್ಚಿಸಿ ಪರಿಹಾರ ಕಂಡುಹಿಡಿಯುತ್ತೇವೋ ಹಾಗೆಯೇ ಅಂಥ ಪ್ರಶ್ನೆಗಳಿಗೆ ಖಾಯಂ ಪರಿಹಾರ ಒದಗಿಸುವ ಸಲುವಾಗಿ ರಾಜಕೀಯ ಬದಲಾವಣೆಯನ್ನೇ ತರುವ ಅಗತ್ಯವನ್ನು ಅಂದರೆ ರಾಜಕೀಯ ತಿಳುವಳಿಕೆಯನ್ನು ತಿಳಿಸಿ ಹೇಳುವುದರಲ್ಲಿ, ಅದಕ್ಕಾಗಿ ನಡೆಯುವ ಹೋರಾಟದಲ್ಲಿ ಅತ ಪಾಲುಗೊಳ್ಳುವಂತೆ ಮಾಡುವಲ್ಲಿ ನಾವು ವಿಫಲರಾಗಿದ್ದೇವೆ. ಅದರ ಕಡೆ ತುರ್ತು ಗಮನ ಹರಿಸುವುದು ಅತ್ಯಗತ್ಯ.

●

ಪಂಪ ಬಿಕ್ಕುತಾನೆ....

● ಜಿ. ಎನ್. ಮೋಹನ್

ಪಂಪ ಬಿಕ್ಕುತಾನೆ ಕಂಪು ವಾಸನೆ ನಡುವೆ
ಬನವಾಸಿ ಕನಸುಗಳ ಚಿತ್ತಾರದಲ್ಲಿ
ಕಾವ್ಯ ಎಸಳಿನ ಮಧ್ಯೆ ಖಡ್ಗವನು ಹುಡುಕುತ್ತ
ರೆಕ್ಕೆ ಬಿಚ್ಚುತ್ತಾನೆ ಹಾಲಕ್ಕಿಯಂತೆ
ಕನಸಗೂಡ ಬೆನ್ನಲ್ಲಿ ಇಟ್ಟು ಗೀಜಗವ ಅರಸುತಾನೆ
ಖಡ್ಗ ಒರೆಯಲಿ ಕಾವ್ಯವಿಟ್ಟು ಆ ಯೋಧ ನಡೆಯುತಾನೆ
ಹಾಲಕ್ಕಿ ಸಂಕುಲ ಸದ್ದು ಮಾಡುತಾವೆ ಮೇಲೆ ಬೋಥಗೂಗೆ
ಹದ್ದಿನಂತೆ ಮೈ ಮೇಲೆ ಎರಗುತಾನೆ ಹಕ್ಕಿ ಕಿರಚುತಾವೆ
ನೋವ ಸ್ವರವು ತಾನೊಂದೆ ಮೆರೆದು ಕಾವ್ಯವನು ಮರೆಸುತಾವೆ
ಕನಸಕೊಂದು ಬೆಳ್ಳಕ್ಕಿ ನೊಂದು ಮೈಮನ ಮುದುಡುತಾವೆ
ನೋವಿನಲ್ಲಿಯೂ ಖಡ್ಗ ಮಧ್ಯೆ ಕವನ ಇಣುಕುತಾವೆ
ಸದ್ದು ಕೇಳುತಾವೆ ದೂರದಲ್ಲಿ ಮಾಮರದ ಮಧ್ಯದಲ್ಲಿ

ಗೀಜಗನಗೂಡು ತಾನೊಂದೆ ಒಂಟಿ ಗೀಜಗವು ಎಲ್ಲಿ ಎಲ್ಲಿ
ಬೆಳ್ಳಕ್ಕಿ ಎಲ್ಲಿ, ಹಾಲಕ್ಕಿ ಎಲ್ಲಿ. ಆ ಹಾರೋ ಕಂದ ಎಲ್ಲಿ
ಗೀಜಗವು ಎಲ್ಲಿ, ಚಿತ್ತಾರವೆಲ್ಲಿ, ಕನಸ ಕುಡಿಕೆ ಎಲ್ಲಿ
ಎದೆಯಲ್ಲಿ ಕಾವ್ಯ, ಕೈಯಲ್ಲಿ ಖಡ್ಗ ಗಲ್ಲುಗಳ ಕುಣಿಕೆಯಲ್ಲಿ
ತೂಗೇ ತೂಗುತಾವೆ ಹಾರೋ ಕನಸು ಆ ಮುರಿದ ಗೋಣಿನಲ್ಲಿ
ಹಕ್ಕಿ ಮಾತ್ರ ಹಾರಾಡುತಾವೆ ನೀಲ ಗಗನದಲ್ಲಿ
ಎದೆಯ ಕನಸುಗಳು ಹಾರಲಾರವೆ ಮತ್ತೆ ಬಾನಿನಲ್ಲಿ
ಹಾರು ಹಕ್ಕಿಯೆ, ಹಾರು ಬೆಂಜಮಿನ್, ಹಾಡು ಮೌನಗೀತೆ
ಹಾಡು ಬೆಂಜಮಿನ್ ಗೋರಿಯಲ್ಲೂ ನೀ ಕಾಡೋ ಶಬ್ದ ತಾನೆ
ಪಂಪ ಬಿಕ್ಕುತಾನೆ ಗೋರಿ ಬಳಿಯಲಿ ಇತಿಹಾಸ ಪುಟದಿ ಮಲಗಿ
ಎದೆಯಲ್ಲಿ ಕಾವ್ಯ, ಕೈಯಲ್ಲಿ ಖಡ್ಗ ಒಬ್ಬಂಟಿ ನಡೆಯುತಾನೆ.

—ಕೃಪೆ: ಲಂಕೇಶ್ ಪತ್ರಿಕೆ

ಮೊದಲನೇ ರಕ್ಷಾ ಪುಟದಿಂದ........

ಪಕ್ಷ ಇಬ್ಭಾಗವಾಗಿ ಪತ್ರಿಕೆ ನಿಲ್ಲಬೇಕಾದ ಪರಿಸ್ಥಿತಿಯೊದಗಿದ ಕೂಡಲೆ, ಮಾರ್ಕ್ಸ್‌ವಾದಿ ಲೆನಿನ್‌ವಾದಿ ಕ್ರಾಂತಿಕಾರಿ ಪರಂಪರೆಯನ್ನು ಮುಂದುವರೆಸಲು ಮಂಗಳೂರಿನಿಂದ "ಐಕ್ಯರಂಗ" ಮೂಡಿತು. ಪರಿಷ್ಕರಣವಾದ, ಸುಧಾರಣವಾದ, ಎಡ ಪಂಥ ವಾದಗಳೊಡನೆ ಸೆಣಸುತ್ತ "ಐಕ್ಯರಂಗ" ಈ ಕ್ರಾಂತಿಕಾರಿ ಪರಂಪರೆಯನ್ನು ಮುಂದುವರೆಸಲು ಶ್ರಮಿಸುತ್ತಿದೆ.

"ಜನಶಕ್ತಿ" ಯ ಬಗ್ಗೆ

"ಜನಶಕ್ತಿ" ಶ್ರಮಜೀವಿ ವರ್ಗದ ರಾಜಕೀಯ ಸಾಪ್ತಾಹಿಕವೆನಿಸಿದ್ದರೂ ಸಾಹಿತ್ಯಕವಾದ ವಿವಾದಗಳು, ಏಕೀಕರಣ ಚಳುವಳಿಗೆ ಸಂಬಂಧಪಟ್ಟ ಲೇಖನಗಳು ಬರುತ್ತಿದ್ದುವಲ್ಲದೆ ಸಣ್ಣ ಕತೆ ಕವಿತೆಗಳೂ ಕಾಣಿಸಿಕೊಳ್ಳುತ್ತಿದ್ದುವು.

ಚೆನ್ನವೀರ ಕಣವಿ
(ಪ್ರಸಿದ್ಧ ಸಾಹಿತಿ)

ಧಾರವಾಡದ ಕಡೆಯಿಂದ ನಿರಂಜನರ ಸಂಪಾದಕತ್ವದಲ್ಲಿ ವಾರಪತ್ರಿಕೆಯೊಂದು ಪ್ರಕಟವಾಗುತ್ತಿತ್ತು. ಕಾರ್ಮಿಕರ ಬಡ ಜನರ ಶೋಷಣೆ ವಿರುದ್ಧ ಸುದ್ದಿ ಸಮಾಚಾರಗಳು ಆ ಕ್ರಾಂತಿಕಾರಿ ಪತ್ರಿಕೆಯಲ್ಲಿ ಪ್ರಸಾರವಾಗುತ್ತಿದ್ದುವು. ಜನ ಮನವನ್ನು ಎಚ್ಚರಗೊಳಿಸುತ್ತಿದ್ದುವು.

ಪಿ. ಆರ್. ತಿಪ್ಪೇಸ್ವಾಮಿ
(ಕಲಾವಿದ)

ಹುಬ್ಬಳ್ಳಿಯ ಅಂದಿನ ಜಿಡ್ಡುಗಟ್ಟಿದ ರಾಜಕೀಯ ಹಾಗೂ ಪ್ರತಿಗಾಮಿ ಸಾಹಿತ್ಯಕ ಸಂದರ್ಭದಲ್ಲಿ "ಜನಶಕ್ತಿ" ಹೊಸ ಅಲೆಗಳನ್ನೆಬ್ಬಿಸಿ ಹೊಸ ಕಣ್ಣುಗಳಿಂದ ನೋಡುವ ಅವಕಾಶ ಉಂಟು ಮಾಡಿತು. ಯುವಲೇಖಕರಲ್ಲಿ ಪುರೋಗಾಮಿ ಚಿಂತನೆ ಹಾಗೂ ಬದುಕಿನ ವಾಸ್ತವಗಳ ಗಾಢ ಕಾಳಜಿಗಳನ್ನು ಮೂಡಿಸುವಂತೆ ಪ್ರೇರಣೆ ನೀಡಿತು.

ಸು. ರಂ. ಎಕ್ಕುಂಡಿ
(ಪ್ರಸಿದ್ಧ ಕವಿಗಳು)

(ನಿರಂಜನ-ಅಭಿನಂದನ ಕೃತಿಯಿಂದ)

ಕರ್ನಾಟಕದಲ್ಲಿ ರಕ್ತದೋಕುಳಿಯೊಡನೆ ಮೇ ದಿನಾಚರಣೆ

1886ರಲ್ಲಿ ಮೊದಲ ಬಾರಿ ಮೇ ದಿನಾಚರಣೆ ಮಾಡಿದಂದು ಚಿಕಾಗೊದಲ್ಲಿ ನಡೆದ ಘಟನೆಯನ್ನೇ ನೆನಪಿಸುವಂತಹ ಘೋರ ಹತ್ಯೆ ಕರ್ನಾಟಕದ ಭದ್ರಾವತಿಯಲ್ಲಿ 1942ರ ಮೇ ಮೂರರಂದು ನಡೆದಿದೆ.

ನಾಜೀ ದೈತ್ಯರು ಇಡೀ ಯೂರೋಪನ್ನು ತಮ್ಮ ಬೂಟುಗಾಲಿನಿಂದ ಒರೆಸಿ ಅಡಿಯಾಳಾಗಿಸಿಕೊಂಡು ಕಾರ್ಮಿಕ ವರ್ಗದ ದೇಶವಾಗಿದ್ದ ಸೋವಿಯೆತ್ ಒಕ್ಕೂಟದ ಕಡೆಗೆ ನುಗುತ್ತಿದ್ದ ಕಾಲ. ಈ ರಾಕ್ಷಸ ಧಾಳಿಗೆ ಕೆಂಪು ಸೈನ್ಯ ವೀರಾವೇಶದಿಂದ ಹೋರಾಡುತ್ತ ಹಿಮ್ಮೆಟ್ಟುತ್ತಿದ್ದ ಕಾಲ.

ಕರ್ನಾಟಕದ ಉಕ್ಕಿನ ನೆಲೆಯಾದ ಭದ್ರಾವತಿಯು ಕಾರ್ಮಿಕರಿಗೆ ತಮ್ಮದೇ ಜೀವಕ್ಕೆ ಪೆಟ್ಟು ಬಿದ್ದಿದೆಯೆಂದೆನಿಸಿರಬೇಕು. ಅಂದಿನ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರ ಆಡಳಿತಕ್ಕಿಂತ ಕ್ರೂರವಾಗಿ ಕಾರ್ಮಿಕರನ್ನು ನಡೆಸಿಕೊಳ್ಳುತ್ತಿದ್ದುದನ್ನು ಸಂಘಟನೆಯ ಹಕ್ಕು, ಸಭೆ ನಡೆಸುವ ಹಕ್ಕುಗಳನ್ನು ನಿರಾಕರಿಸುತ್ತಿದ್ದುದನ್ನು ನೋಡಿ ನೋಡಿ ಮನಸ್ಸು ರೊಚ್ಚಿಗೆದ್ದಿರಬೇಕು.

ಅಲ್ಲಿಯ ಕಾರ್ಮಿಕ ಸಂಘ-ಭದ್ರಾವತಿ ಲೇಬರ್ ಅಸೋಸಿಯೇಷನ್ ನಾಯಕರು ಮೇ ದಿನವನ್ನಾಚರಿಸುತ್ತೇವೆ. ಅದಕ್ಕೆ ಅವಕಾಶ ಕೊಡಿ. ಸಭೆ ಮೆರವಣಿಗೆಗಳನ್ನು ನಡೆಸಲು ಇರುವ ಪ್ರತಿಬಂಧಕಾಜ್ಞೆಯನ್ನು ಹಿಂತೆಗೆಯಿರಿ ಎಂದು ಅಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ವಿನಂತಿಸಿದರು. ಆದರೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಆ ಬಗ್ಗೆ ಚಕಾರವೆತ್ತಲಿಲ್ಲ. ನಂತರ ಮೈಸೂರು ಸಂಸ್ಥಾನದ ಸರ್ಕಾರಕ್ಕೆ ಮನವಿ ಮಾಡಿದರು. ಅದಕ್ಕೂ ಉತ್ತರವಿಲ್ಲ. ಕಾರ್ಮಿಕರ ಸರ್ವ ಸದಸ್ಯರ ಸಭೆ ನಡೆಸಿ ಸರ್ಕಾರದ ದಬ್ಬಾಳಿಕೆ ಅಂಜದೆ ಮೇ ದಿನದ ಮೆರವಣಿಗೆ ಸಭೆ ನಡೆಸಲು ಅನುಮತಿ ಕೇಳುವ ನಿರ್ಣಯವೊಂದನ್ನು ಪಾಸು ಮಾಡಿದರು. ಸರ್ಕಾರಕ್ಕೆ ತಮ್ಮೆಲ್ಲರ ಈ ಒಟ್ಟು ಬಯಕೆಯನ್ನು ನಿವೇದಿಸಿದರು.

ಆದರೆ ಕಲ್ಲು ಮನಸ್ಸಿನ ಸರ್ಕಾರ ಅನುಮತಿ ನೀಡಲೇ ಇಲ್ಲ. ಇದರಿಂದ ಕುದಿದುಹೋದ ಕಾರ್ಮಿಕರು, ತಮ್ಮ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಮೂಲಭೂತ ಹಕ್ಕುಗಳ ಮೇಲಿನ ಈ ನಿರ್ದಯ ಧಾಳಿಯನ್ನು ಎದುರಿಸಿ ಮೇ ದಿನಾಚರಣೆಯನು ಆಚರಿಸುವುದೇ ಸರಿ. ಏನೇ ಬರಲಿ ಎದುರಿಸುತ್ತೇವೆ—ಎಂದು ತೀರ್ಮಾನಿಸಿದರು.

ಮೇ ದಿನದಂದು ಎಲ್ಲ ಕಾರ್ಮಿಕರೂ ಸೇರಿ ಶಾಂತವಾಗಿ ಆದರೆ ಶಿಸ್ತಿನಿಂದ ಮೆರವಣಿಗೆಯನ್ನು ಆಚರಿಸಿದರು. ಸ್ಥಳೀಯ ಅಧಿಕಾರಿಗಳ, ಸಂಸ್ಥಾನ ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸಿದರು. ಈ ಶಾಂತಿಯುತ ಮೇ ದಿನಾಚರಣೆಯಿಂದ ಕಾರ್ಮಿಕರ ಐಕ್ಯ ಪ್ರತಿಭಟನೆಯಿಂದ ಬೆಚ್ಚಿ ಬಿದ್ದ ಸರ್ಕಾರ ಅಂದು ಏನೂ ಮಾಡಲಿಲ್ಲ. ಆದರೆ ಮೂರನೇ ತಾರೀಖು ನೇರ ಕಾರ್ಖಾನೆಗೆ ಹೋಗಿ ದುಡಿಯುತ್ತಿದ್ದ ಕಾರ್ಮಿಕರ ಮಧ್ಯದಿಂದ ಕಾರ್ಮಿಕ ಸಂಘದ ಮೂರು ಜನ ಪದಾಧಿಕಾರಿಗಳನ್ನೂ ಸಂಘದ ಕಾರ್ಯದರ್ಶಿ ಪುಟ್ಟಯ್ಯನವರನ್ನೂ ಬಂಧಿಸಿದರು.

ಇವರನ್ನು ಪೋಲೀಸ್ ಠಾಣೆಗೆ ಕರೆದೊಯ್ಯುತ್ತಿದ್ದಂತೆ ಇಡೀ ಕಾರ್ಖಾನೆಯೇ ಅವರನ್ನು ಹಿಂಬಾಲಿಸಿತು. ಠಾಣೆಯನ್ನು ಸೇರುವ ವೇಳೆಗೆ 3000–4000 ಕಾರ್ಮಿಕರು ಜಮಾಯಿಸಿದ್ದರು. ಈ ಕಾರ್ಮಿಕ ಸಮುದಾಯ ಬಯಸಿದ್ದಿಷ್ಟೇ-ತಮ್ಮ ಸಂಘದ ನಾಯಕರಿಗೆ ಹೂ ಹಾರಗಳನ್ನು ಹಾಕಿ ಗೌರವಿಸಬೇಕು. ಇದನ್ನು ಪೋಲೀಸ್ ಅಧಿಕಾರಿಗಳು ಒಪ್ಪಿಬಿಟ್ಟರೆ ಅವರ ಘನತೆಗೆ ಕುಂದು ಬರುವುದಿಲ್ಲವೆ ? ಖಂಡತುಂಡವಾಗಿ ನಿರಾಕರಿಸಿದರು ಮಾತ್ರವಲ್ಲ, ಲಾಠಿಚಾರ್ಜು ಮಾಡಿದರು. ಕಾರ್ಮಿಕರು ಇದನ್ನು ಎದುರಿಸಿ ನಿಂತಾಗ ಹಲವಾರು ಸುತ್ತು ಗುಂಡು ಹಾರಿಸಿದರು. ಈ ಗುಂಡೇಟಿನಿಂದ ಇಬ್ಬರು ಕಾರ್ಮಿಕರು ಹಾಗೂ ಮೂರು ವರ್ಷದ ಮಗು, ಸರೋಜಮ್ಮ ಮಡಿದರು.

ಈ ಘಟನೆಯನ್ನು ಅಂದಿನ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ನಾಯಕ ಕೆ. ಸಿ. ರೆಡ್ಡಿ ಪ್ರಸ್ತಾಪಿಸಿ ವಿಶ್ವದ ಯಾವುದೇ ರಾಷ್ಟ್ರದಲ್ಲಿ ಕಾರ್ಮಿಕರು ಮೇ ದಿನಾಚರಣೆ ಮಾಡಲು ಅಡ್ಡಿಯಿಲ್ಲ. ಸೋವಿಯೆತ್ ಒಕ್ಕೂಟದಲ್ಲಿ ಮೇ ದಿನಾಚರಣೆಗೆ ವಿಶೇಷ ಮಹತ್ವ ನೀಡಿ ಆಚರಿಸುತ್ತಿದೆ ಎಂದು ಹೇಳಿ ಮೈಸೂರು ಸಂಸ್ಥಾನದ ದಬ್ಬಾಳಿಕೆಯನ್ನು ಖಂಡಿಸಿದರು.

ನಾಗರಾಜ್, ಜಿ. ಎನ್.

ಈ ಪ್ರಸಂಗವನ್ನು ನನ್ನ ಗಮನಕ್ಕೆ ತಂದ ಜೋನ್ಸ್ ಪೆಟ್ನಿಯವರ Political Economy of indirect rule ಪುಸ್ತಕಕ್ಕೆ ಹಾಗೂ ಹೆಚ್ಚಿನ ವಿವರಗಳನ್ನು ನೀಡಿದ ಕಾಂ॥ ಸಿದ್ಧಲಿಂಗ ಸ್ವಾಮಿಯವರಿಗೆ ಕೃತಜ್ಞತೆಗಳು.

REG. No. BGW-148 MAG [2] PRB DECR 319/78-79

ಶಾಂತಿ ಘೋಷಣೆ

ಅಂದು ಇಂದು

ಅಕ್ಟೋಬರ್ ಕ್ರಾಂತಿ ಸೃಷ್ಟಿಸಿದ, ಕಾರ್ಮಿಕರ, ಸೈನಿಕರ, ಹಾಗೂ ರೈತರ ಸೋವಿಯೆತ್‌ಗಳನ್ನು ಆಧರಿಸಿರುವ ಕಾರ್ಮಿಕರ ಮತ್ತು ರೈತರ ಸರ್ಕಾರ ಒಂದು ನ್ಯಾಯೋಚಿತ, ಪ್ರಜಾಸತ್ತಾತ್ಮಕ ಶಾಂತಿಗಾಗಿ ತಕ್ಷಣ ಮಾತುಕತೆ ಆರಂಭಿಸ ಬೇಕೆಂದು ಎಲ್ಲ ಯುದ್ಧ ನಿರತ ಜನಗಳಿಗೆ ಮತ್ತು ಸರ್ಕಾರಗಳಿಗೆ ಕರೆ ನೀಡುತ್ತದೆ.

ನ್ಯಾಯೋಚಿತ, ಪ್ರಜಾಸತ್ತಾತ್ಮಕ ಶಾಂತಿಯೆಂದರೆ ಕಾಲ್ಕೆರೆದು ಮೇಲೆ ಬೀಳುತ್ತಿರುವ ದೇಶಗಳ ಕಾರ್ಮಿಕ ವರ್ಗ, ಮತ್ತಿತರ ದುಡಿಯುವ ಜನ ಯುದ್ಧದ ಬೇಗೆಯಿಂದ ಬಳಲಿ ಬೆಂಡಾಗಿ ತಲ್ಲಣಗೊಂಡು ಹಲುಬುತ್ತಿರುವ ಶಾಂತಿ, ರಷ್ಯಾದ ಕಾರ್ಮಿಕರು ಮತ್ತು ರೈತರು ಝಾರ್‌ಶಾಹೀ ರಾಜಪ್ರಭುತ್ವವನ್ನು ಕಿತ್ತೆಸೆದಂದಿನಿಂದ ಅವಿರತವಾಗಿ, ಅತ್ಯಂತ ನಿರ್ದಿಷ್ಟವಾಗಿ ಒತ್ತಾಯಿಸುತ್ತಿರುವ ಶಾಂತಿ.

ಬಲಾಢ್ಯ ಮತ್ತು ಶ್ರೀಮಂತ ದೇಶಗಳು ತಾವು ಜಯಿಸಿದ ದುರ್ಬಲ ದೇಶಗಳನ್ನು ಹೇಗೆ ತಮ್ಮ ತಮ್ಮೊಳಗೆ ಹಂಚಿಕೊಳ್ಳ ಬೇಕೆಂಬ ಪ್ರಶ್ನೆಯ ಮೇಲೆ ಈ ಯುದ್ಧವನ್ನು ಮುಂದುವರಿಸುತ್ತಿರುವುದು ಮಾನವ ಕುಲದ ವಿರುದ್ಧ ಎಸಗುತ್ತಿರುವ ಅತಿ ದೊಡ್ಡ ಅಪರಾಧ ಎಂದು ನಮ್ಮ ಸರಕಾರ ಭಾವಿಸುತ್ತದೆ. ಎಲ್ಲ ರಾಷ್ಟ್ರೀಯ ಗುಂಪುಗಳಿಗೆ ಸಮಾನವಾಗಿ ನ್ಯಾಯ ಒದಗಿಸುವ ಷರತ್ತುಗಳ ಶಾಂತಿ ಒಪ್ಪಂದಗಳಿಗೆ ಸಹಿ ಹಾಕುವ ತನ್ನ ದೃಢ ನಿರ್ಧಾರವನ್ನು ಅದು ಘೋಷಿಸುತ್ತದೆ.

—ಲೆನಿನ್ ನವೆಂಬರ್ 8, 1917

(ರಷ್ಯಾದ ಕಾರ್ಮಿಕ ಪ್ರಭುತ್ವದ ಮೊದಲ ನಿರ್ಧಾರ—)

ಇಡೀ ಮಾನವ ಕುಲಕ್ಕೆ ಮರಣದಂಡನೆ ವಿಧಿಸುವ ಹಕ್ಕು ಯಾವುದೇ ದೇಶಕ್ಕಿದೆಯೆಂಬ ವಾದವನ್ನು ನಾವು ತಿರಸ್ಕರಿ ಸುತ್ತೇವೆ. ನಾವು ನ್ಯಾಯಾಧೀಶರುಗಳಲ್ಲ. ಕೋಟಿಗಟ್ಟಲೆ ಜನಗಳು ಶಿಕ್ಷೆಗೊಳಗಾಗಬೇಕಾದ ಅಪರಾಧಿಗಳಲ್ಲ. ಆದ್ದರಿಂದ ಪರಮಾಣು ನೇಣುಗಂಬವನ್ನು ಬಿಚ್ಚಿ ಮೂಲೆಗೆಸೆಯಬೇಕು. ಪರಮಾಣು ಅಸ್ತ್ರ ಹೊಂದಿರುವ ದೇಶಗಳು ತಮ್ಮದೇ ಪರಮಾಣು ಅಸ್ತ್ರಗಳ ಕತ್ತಲಕೂಪದಿಂದ ಹೊರ ಬಂದು ಪರಮಾಣು ರಹಿತ ಜಗತ್ತಿಗೆ ಕಾಲಿಡಬೇಕು. ರಾಜಕೀಯವು ಜಾಗತಿಕ ನೀತಿ ಸಂಹಿತೆಯಿಂದ ದೂರಾಗಿರುವುದನ್ನು ಇಲ್ಲಿಗೇ ಕೊನೆಗೊಳಿಸಬೇಕು.

ಪರಮಾಣು ಸ್ಫೋಟವೊಂದು ಸಮಾಜವಾದಿಗಳು ಅಥವಾ ಬಂಡವಾಳಶಾಹಿಗಳೆನ್ನದೆ, ಧರ್ಮಾತ್ಮರು ಅಥವಾ ಪಾಪಿ ಗಳೆನ್ನದೆ ಎಲ್ಲರನ್ನೂ ಕೊಚ್ಚಿಕೊಂಡು ಹೋಗುತ್ತದೆ. ಇದು ನೀತಿಯೇ ? ನಾವು ಕಮ್ಯೂನಿಸ್ಟರು ಹಾಗೆಂದು ಭಾವಿಸುವುದಿಲ್ಲ.

ರೆಕ್ಯಾವಿಕ್ ಸಭೆ ಕೇವಲ ಇನ್ನೊಂದು ಸುತ್ತಿನ ಸಂಧಾನವಾಗಿರಲಿಲ್ಲ. ಪರಮಾಣು ಅಸ್ತ್ರ ರಹಿತ ಜಗತ್ತಿನತ್ತ ಸಾಗುವ ದಾರಿಯ ಇಣುಕು ನೋಟ ನೀಡಿದ, ಸತ್ಯದ ಸಾಕ್ಷಾತ್ಕಾರ ನೀಡಿದ ಕ್ಷಣವದು. ನಾವು ಸುಮಾರಾಗಿ ಪರಿಹಾರ ಹುಡುಕಿಯೇ ಬಿಟ್ಟಿದ್ದೆವು. ಅದರಿ ಹಾಗಾಗದಂತೆ ತಡೆದ ಆ "ಸುಮಾರಾಗಿ" ಎಂಬುದಕ್ಕೆ ಏನು ಮಾಡೋಣ ?

ಸದ್ಯ ಅಂತರಾಷ್ಟ್ರೀಯ ಸಂಬಂಧಗಳು ಬಲಪ್ರಯೋಗದ ಆರಾಧನೆಯಿಂದ, ಮನಸ್ಸಿನ ಮಿಲಿಟರೀಕರಣದಿಂದ ವಿಕಾರ ಗೊಂಡಿದೆ. ಆದ್ದರಿಂದಲೇ ಅಂತರಾಷ್ಟ್ರೀಯ ಸಂಬಂಧಗಳ ಮಾನವೀಕರಣ ಅತ್ಯಗತ್ಯ.

ಎಂದೂ ಪರಮಾಣು ಯುದ್ಧ ನಡೆಯಬಾರದೆಂಬ ಅರಿವು ಈಗ ಪಕ್ವಗೊಂಡಿದೆ. ಆದ್ದರಿಂದ ಮೊದಲ ಪ್ರಮುಖ ಹೆಜ್ಜೆಯಿಟ್ಟು ಆರಂಭಿಸೋಣ—ಪರಮಾಣು ಶಸ್ತ್ರಾಗಾರಗಳನ್ನು ಕುಗ್ಗಿಸೋಣ, ಬಾಹ್ಯಾಕಾಶವನ್ನೂ ಶಸ್ತ್ರಾಸ್ತ್ರಗಳಿಂದ ಮುಕ್ತವಾಗಿಸೋಣ.

—ಮಿಖಾಲ್ ಗೋರ್ಬಾಚೆವ್ 16-2-1987

(ಅಂತರಾಷ್ಟ್ರೀಯ ಬುದ್ಧಿಜೀವಿಗಳ ಸಮಾವೇಶದಲ್ಲಿ)

Printed & Published by P. Ramachandra Rao on behalf of the Communist Party of India (Marxist) Karnataka State Committee, Editorial and Manageriel office L-56, K. V. Temple Street Sultanpet, Bangalore-560 053.
EDITOR : P. RAMACHANDRA RAO, MANAGING EDITOR : N. K. UPADHYAYA Phone : 75331
Printed at RAVEE TRADERS, Balepet Cross, Bangalore-560 053.